ಕ— ....

ಅ—ಈ

ಕ— ....

ಅ—ಸಾಲ

ಕ— ....

ಅ—ಒಳ್ಳೆಯ

ಕ— ....

ಅ—ಪೆನ್ನು ಮತ್ತು ಸೈಕಲ್

ಕ— ....

ಅ—ತರು

ಕ— ....

9. ಅ—ನಿಮ್ಮ ಉಳಿತಾಯದ ಹಣ ನಿಧಾನವಾಗಿ ಬೆಳೆಯುತ್ತೆ.

ಕ— ....

ಅ—ಅವರು

ಕ— ....

ಅಧ್ಯಾಪಕ— ಸಾಲ	ಕಲಿಯುವವ— ....
ಅ—ಜೋರಾಗಿ	ಕ— ....
ಅ—ಬೆಳೆಯುತ್ತಾ ?	ಕ— ....
10. ಅ—ನಿಮ್ಮ ಊರಿಂದ ಬಹಳ ಜನ ರೈತರು ಬೇರೆ ಹಳ್ಳಿಗಳಿಗೆ ಹೋಗ್ತಾರಾ ?	ಕ— ....
ಅ—ಗೌಡರು	ಕ— ....
ಅ—ಹಳ್ಳಿ	ಕ— ....
ಅ—ಸ್ವಲ್ಪ	ಕ— ....
ಅ—ಕುಂಬಾರರು	ಕ— ....
ಅ—ಪಟ್ಟಣಗಳು	ಕ— ....
ಅ—ಬರು	ಕ— ....

EXPANTION DRILL

1. ಅ—ನೀವು ನಿಮ್ಮ ಸಂದೇಹಗಳ ನಿವಾರಣೆಗಾಗಿ ಅವರನ್ನು ಪ್ರಶ್ನೆ ಕೇಳಿ.	ಕ— ....
ಅ—ನೀವು ಕೇಳಿ	ಕ— ....
ಅ—ಪ್ರಶ್ನೆ	ಕ— ....
ಅ—ಅವರನ್ನು	ಕ— ....
ಅ—ನಿವಾರಣೆಗಾಗಿ	ಕ— ....

ಅಧ್ಯಾಪಕ—ಸಂದೇಹಗಳ್ ಕಲಿಯುವವ — ....

ಅ—ಅವರ ಕ— ....

2. ಅ—ಅವರು ಯಾವಾಗಲೂ ಸಾಹುಕಾರರ ಹೊಲಗಳಲ್ಲಿ ದುಡೀತಾರೆ ಕ— ....

ಅ—ಅವರು ದುಡೀತಾರೆ ಕ— ....

ಅ—ಹೊಲಗಳಲ್ಲಿ ಕ— ....

ಅ—ಸಾಹುಕಾರರ ಕ— ....

ಅ—ಯಾವಾಗಲೂ ಕ— ....

3. ಅ—ಫೀಲ್ಡ್ ಆಫೀಸರ್ ಅವರನ್ನು ಮುಂದಿನ ವಾರ ಬ್ಯಾಂಕಿನಿಂದ ನಿಮ್ಮ ಹಳ್ಳಿಗೆ ಕಳಿಸ್ತಿನಿ. ಕ— ....

ಅ—ಫೀಲ್ಡ್ ಆಫೀಸರ್ ಅವರನ್ನು ಕಳಿಸ್ತಿನಿ ಕ— ....

ಅ—ನಿಮ್ಮ ಹಳ್ಳಿಗೆ ಕ— ....

ಅ—ಬ್ಯಾಂಕಿನಿಂದ ಕ— ....

ಅ—ಮುಂದಿನವಾರ ಕ— ....

4. ಅ—ಡಾಕ್ಟರ್ ಅವರು ಆಸ್ಪತ್ರೆಯಲ್ಲಿ ಎಷ್ಟನೇ ರೂಮಿನಲ್ಲಿ ಕೂತ್ಕೋತಾರೆ ? ಕ— ....

ಅ—ಡಾಕ್ಟರ್ ಅವರು ಕೂತ್ಕೋತಾರೆ ಕ— ....

ಅ—ಎಷ್ಟನೇ ರೂಮಿನಲ್ಲಿ ಕ— ....

ಅ—ಆಸ್ಪತ್ರೆಯಲ್ಲಿ ಕ— ....

5. ಅಧ್ಯಾಪಕ—ನಿಮ್ಮ ಹಳ್ಳಿಗೆ ಮೆಯಿನ್ ರೋಡಿನಿಂದ ಎಷ್ಟು ಮೈಲಿ ದೂರ ನಡೀಬೇಕು ? ಕಲಿಯುವವ— ....

ಅ—ನಿಮ್ಮ ಹಳ್ಳಿಗೆ ನಡೀಬೇಕು ಕ— ....

ಅ—ದೂರ ಕ— ....

ಅ—ಎಷ್ಟು ಮೈಲಿ ಕ— ....

ಅ—ಮೆಯಿನ್ ರೋಡಿನಿಂದ ಕ— ....

TRANSFORMATION DRILL

Model : ಅ—ಅವರು ಅದನ್ನು ನನಗೆ ಕೊಡ್ತಾರೆ. ಕ—ಅವರು ಅದನ್ನು ನನಗೆ ಕೊಡಲ್ಲ.

ಅ—ಅವರು ಮಾತನ್ನು ಬದಲಾಯಿಸ್ತಾರೆ. ಕ— ....

ಅ—ಕಾವಲುಗಾರನು ಅವನನ್ನು ಅನುಸರಿಸ್ತಾನೆ. ಕ— ....

ಅ—ಕಾವಲುಗಾರನು ಬ್ಯಾಂಕನ್ನು ಕಾಯ್ತಾನೆ. ಕ— ....

ಅ—ಡಾಕ್ಟರು ರೂಮಲ್ಲಿ ಕೂತ್ಕೋತಾರೆ. ಕ— ....

ಅ—ನನ್ನ ಮಗ ನಗ್ತಾನೆ. ಕ— ....

ಅ—ಕ್ಯಾಷಿಯರ್ ಅವರು ವಿಚಾರ ಹೇಳ್ತಾರೆ. ಕ— ....

ಅ—ರೈತರು ಸಾಲ ಕೇಳ್ತಾರೆ. ಕ— ....

ಅ—ಅವರು ಬೇರೆಯವರ ಹೊಲದಲ್ಲಿ ಕೆಲಸ ಮಾಡ್ತಾರೆ. ಕ— ....

ಅ—ವಿದ್ಯಾರ್ಥಿಗಳು ಭಾನುವಾರ ಬೆಂಗಳೂರಿಗೆ ಹೋಗ್ತಾರೆ. ಕ— ....

ಆ—ಒಳ್ಳೆಯ ಮಕ್ಕಳು ಹಣವನ್ನು ಉಳಿತಾಯದ ಡಬ್ಬಿಗೆ ಹಾಕ್ತಾರೆ. ಕ— ....

ಆ—ಸೋಮು ಬ್ಯಾಂಕಿನಲ್ಲಿ ತುಂಬಾ ಓಡಾಡ್ತಾನೆ. ಕ— ....

ಆ—ನಾನು ಬೆಳಿಗ್ಗೆ ಮೊದಲನೇ ಬಸ್ಸು ಹಿಡೀತೀನಿ. ಕ— ....

ಆ—ಅವನು ಬೆಳಿಗ್ಗೆ ಬಿಸಿ ಬಿಸಿ ಕಾಫಿ ಕುಡೀತಾನೆ. ಕ— ....

ಆ—ಅವಳು ದಿನಾ ಡಬ್ಬಿ ಬೀಗ ತೆಗೀತಾಳೆ. ಕ— ....

ಆ—ತಿಮ್ಮಣ್ಣ ಎಲ್ಲರ ಹೊಲದಲ್ಲಿ ದುಡೀತಾನೆ. ಕ— ....

ಆ—ಈ ಕೆಲಸ ಏಳನೇ ತಾರೀಖು ಮುಗಿಯತ್ತೆ. ಕ— ....

ಆ—ಮಗು ತುಂಬಾ ಚೆನ್ನಾಗಿ ನಡೆಯತ್ತೆ. ಕ— ....

EXERCISES

I Give both affermative and negative answers to the following questions.

1 ನಿಮ್ಮ ಬ್ಯಾಂಕಿನಿಂದ ಬಡವರಿಗೆ ಸಾಲ ಕೊಡ್ತೀರಾ ?

2 ಸಾಹುಕಾರರು ನಿಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ಪ್ರಾರಂಭ ಮಾಡ್ತಾರಾ ?

3 ಫೀಲ್ಡ್ ಆಫೀಸರ್‌ಗಳು ಪ್ರತಿದಿನ ಹೊಲಗಳಿಗೆ ಹೋಗ್ತಾರಾ ?

4 ಮಕ್ಕಳು ಉಳಿತಾಯದ ಹಣವನ್ನು ಡಬ್ಬಿಗೆ ಹಾಕ್ತಾರಾ ?

5 ಕುರುಬರು ಸಾಲದ ಹಣದಿಂದ ಕುರಿಗಳನ್ನು ತೆಗೋತಾರಾ ?

6 ಎಲ್ಲ ಆಳುಗಳೂ ಕಷ್ಟಪಟ್ಟು ಹೊಲದಲ್ಲಿ ದುಡೀತಾರಾ ?

7 ನೀವು ದಿನಾ ಬ್ಯಾಂಕಿಗೆ ನಡೀತೀರಾ ?

8 ಮ್ಯಾನೇಜರ್ ಅವರು ಕ್ಯಾಷಿಯರ್ ಅವರನ್ನು ಕರೀತಾರಾ ?

9 ನನ್ನ ಖಾತೆಯ ವಿವರವನ್ನು ಬೇಗ ತಿಳಿಸ್ತೀರಾ ?

10 ಮಕ್ಕಳು ತುಂಬಾ ಅಳ್ತಾರಾ ?

11 ಸಾಯಂಕಾಲ ನಿಮ್ಮ ಮನೆಯಲ್ಲಿ ನಿಮ್ಮ ಹೆಂಡತಿ ಕಾಯ್ತಾರಾ ?

II Match the following.

1	ನಾನು	a)	ತರತ್ತೆ	( )
2	ಅವಳು	b)	ತರ್ತಾಳೆ	( )
3	ಅದು	c)	ತರತ್ವೆ	( )
4	ನಾವು	d)	ತರ್ತೀನಿ	( )
5	ಅವರು	e)	ತರ್ತೀವಿ	( )
6	ನೀನು	f)	ತರ್ತಾರೆ	( )
7	ಅವು	g)	ತರ್ತೀರಿ	( )
8	ಅವನು	h)	ತರ್ತೀಯೆ	( )
9	ನೀವು	i)	ತರ್ತಾನೆ	( )

III Choose the appropriate form from the three given to complete the sentence correctly.

1 ಅವರು ನಮ್ಮ ಬ್ಯಾಂಕಿನಿಂದ ——— ಹೋಗ್ತಾರೆ. (ಹಳ್ಳಿಯಲ್ಲಿ, ಹಳ್ಳಿಗೆ, ಹಳ್ಳಿಯನ್ನು)

2 ಈಗ ಉಳಿತಾಯದ ಮಹತ್ವದ ಬಗ್ಗೆ ——— ಹೇಳ್ತಾರೆ. (ನಿಮ್ಮನ್ನು, ನಿಮ್ಮಿಂದ, ನಿಮಗೆ)

3 ಮೊದಲು ಅವರ ——— ಕೇಳಿ. (ಮಾತಿಗೆ, ಮಾತನ್ನು, ಮಾತಲ್ಲಿ)

4 ನಾನು ಆ ——— ಐಸ್‌ಕ್ರೀಂ ತಿಂತೀನಿ. (ಹಣವನ್ನು, ಹಣದಲ್ಲಿ, ಹಣದ)

5 ಮಗು ——— ನನ್ನ ಡಬ್ಬಿಗೆ ಹಾಕತ್ತೆ (ನೋಟಿಗೆ, ನೋಟಲ್ಲಿ, ನೋಟನ್ನು)

6 ಬ್ಯಾಂಕಿನವರು ——— ನಿಮಗೆ ಕೊಡಲ್ಲ. (ಅದನ್ನು, ಅದಕ್ಕೆ, ಅದರಲ್ಲಿ)

7 ಉಳಿತಾಯದ ——— ಬ್ಯಾಂಕ್ ಬಡ್ಡೀನೂ ಕೊಡತ್ತೆ. (ಹಣಕ್ಕೆ, ಹಣದ, ಹಣವನ್ನು)

8 ನಾವು ಮೊದಲು ———ಕೇಳ್ತೀವಿ. (ಮನೆಗೆ, ಮನೆಯನ್ನು, ಮನೆಯಲ್ಲಿ)

9 ನಮ್ಮ ——— ಒಂದು ದೊಡ್ಡ ಸಹಾಯ ಆಗಬೇಕು. (ಹಳ್ಳಿಯನ್ನು, ಹಳ್ಳಿಗೆ, ಹಳ್ಳಿಯ)

10 ನಾವು ಆ ——— ಬೆಂಗಳೂರಿನ ಸೆಂಟ್ರಲ್ ಆಫೀಸಿಗೆ ಕಳಿಸ್ತೀವಿ. (ವರದಿಯನ್ನು, ವರದಿಗೆ, ವರದಿಯಿಂದ)

VI Complete the sentence with the appropriate form of the word given in the bracket.

1 ———ಒಂದು ಸಾರಿ ಡಬ್ಬಿ ಬೀಗ ತೆಗೀತಿನಿ. (ವರ್ಷ)

2 ಸ್ಟೇಟ್ ಬ್ಯಾಂಕ್ ಶಾಲೆಗೆ ——— (ಬರು)

3 ಸುಂದರವಾದ ———ಪೆಟ್ಟಿಗೆ ಕೊಡ್ತಾರೆ. (ಉಳಿತಾಯ)

4 ಬಹಳ ಜನ ಈ ——— ಖಾತೆ ಪ್ರಾರಂಭ ಮಾಡಿ. (ಯೋಜನೆ)

5 ಆಮೇಲೆ ನಿಮ್ಮ ——— ಖಾತೆ ತೆಗೀತೀವಿ. (ಬ್ಯಾಂಕು)

6 ಕುಂಬಾರರು ——— ಬ್ಯಾಂಕಿಗೆ ಬರ್ತಾರೆ. (ಹಳ್ಳಿ)

7 ಈ ——— ಆ ಊರಿಗೆ ಹೋಗಿ. (ಊರು)

8 ನಮ್ಮ ——— ಪ್ರಧಾನ ಕಚೇರಿಗೆ ಕಳಿಸ್ತೀವಿ. (ಶಾಖೆ)

9 ಡಾಕ್ಟರು ——— ಮನೆಗೆ ಬರ್ತಾರೆ. (ಆಸ್ಪತ್ರೆ)

10 ನೀನು ——— ಬೇಗ ಬಾ. (ಕ್ಷೌರದಮನೆ)

V Use the following in your own sentences.

1 ಮಹತ್ವ

2 ಯೋಜನೆ

3 ಅನವಶ್ಯಕ

4 ಪ್ರತ್ಯಕ್ಷ

5 ಅಡ್ಡಿ

6 ಶೇಕಡ

7 ಉಪಯೋಗ

8 ಸನ್ಮಾನ

9 ಸಾಮಾನ್ಯವಾಗಿ

10 ಸ್ಥಿತಿ

★

ಪಾಠ ಹನ್ನೊಂದು

ಭಾಗ ಒಂದು

ಸುಖಪ್ರಯಾಣಕ್ಕೆ ಸ್ಟೇಟ್ ಬ್ಯಾಂಕ್ ಪ್ರವಾಸಿ ಚೆಕ್ ಕೊಳ್ಳಿರಿ

ಗ್ರಾಹಕ—ಇದೇ ಪ್ರವಾಸಿ ಚೆಕ್ ವಿಭಾಗಾನಾ ?

ಅಧಿಕಾರಿ—ಹೌದು, ಇದೇ ಪ್ರವಾಸಿ ಚೆಕ್ ವಿಭಾಗ. ನಿಮಗೆ ಪ್ರವಾಸಿ ಚೆಕ್‌ಗಳು ಬೇಕಾ? ದಯವಿಟ್ಟು ಕೂತ್ಕೊಳ್ಳಿ.

ಗ್ರಾ—ಹೌದು, ನನಗೆ ಪ್ರವಾಸಿಚೆಕ್‌ಗಳು ಬೇಕು. ಆದರೆ ನಿಮ್ಮ ಶಾಖೆಯಲ್ಲಿ ನನ್ನ ಖಾತೆನೇ ಇಲ್ಲ ಅದೇ ತೊಂದರೆ.

ಅ—ಪ್ರವಾಸಿ ಚೆಕ್‌ಗಳಿಗೆ ಖಾತೆಯ ಅವಶ್ಯಕತೆ ಇಲ್ಲ. ನಿಮಗೆ ಎಷ್ಟು ರೂಪಾಯಿಗೆ ಪ್ರವಾಸಿಚೆಕ್‌ಗಳು ಬೇಕು?

ಗ್ರಾ—ನನಗೆ ಐದು ಸಾವಿರ ರೂಪಾಯಿಗೆ ಪ್ರವಾಸಿಚೆಕ್‌ಗಳು ಬೇಕು.

ಅ—ನಿಮಗೆ ಎಷ್ಟು ರೂಪಾಯಿ ಮುಖಬೆಲೆಯ ಪ್ರವಾಸಿ ಚೆಕ್‌ಗಳು ಬೇಕು ?

ಗ್ರಾ—ನಿಮ್ಮ ಹತ್ತಿರ ಎಷ್ಟು ರೂಪಾಯಿ ಮುಖಬೆಲೆಯ ಪ್ರವಾಸಿ ಚೆಕ್‌ಗಳು ಸಿಕ್ಕುತ್ತೆ

ಅ— ನಮ್ಮ ಹತ್ತಿರ ಒಂದು ನೂರು, ಐದುನೂರು ಮತ್ತು ಸಾವಿರ ರೂಪಾಯಿ ಮುಖಬೆಲೆಯ ಪ್ರವಾಸಿ ಚೆಕ್ಕುಗಳು ಸಿಕ್ಕುತ್ವೆ.

ಗ್ರಾ— ನಿಮ್ಮ ಹತ್ತಿರ ಇಪ್ಪತ್ತೈದು ಮತ್ತು ಐವತ್ತುರುಪಾಯಿ ಮುಖಬೆಲೆಯ ಪ್ರವಾಸಿ ಚೆಕ್ಕುಗಳು ಸಿಕ್ಕಲ್ವಾ ?

ಅ— ಸಧ್ಯಕ್ಕೆ ಆ ಮುಖಬೆಲೆಯ ಪ್ರವಾಸಿಚೆಕ್ಕುಗಳು ಸಿಕ್ಕಲ್ಲ. ನಾಳೆ ಅಥವಾ ನಾಳಿದ್ದು ಬರತ್ವೆ. ಆಗ ಸಿಕ್ಕುತ್ವೆ.

ಗ್ರಾ—ಈ ಪ್ರವಾಸಿ ಚೆಕ್ಕುಗಳನ್ನು ಹೇಗೆ ಮುರಿಸಬೇಕು ?

ಅ— ನಮ್ಮ ಪ್ರವಾಸಿ ಚೆಕ್ಕನ್ನು ನಮ್ಮ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಅಥವಾ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಲ್ಲಿ ಮುರಿಸಬಹುದು.

ಗ್ರಾ—ಅದಕ್ಕೆ ಚಾರ್ಜು ಮಾಡ್ತೀರಾ ?

ಅ— ಇಲ್ಲ ಅದಕ್ಕೆ ಚಾರ್ಜುಮಾಡಲ್ಲ. ನೀವು ಯಾವ ಯಾವ ಊರಿಗೆ ಪ್ರವಾಸ ಹೋಗ್ತೀರಿ ?

LESSON 11

PART I

PURCHASE STATE BANK TRAVELLERS CHEQUES FOR SAFE JOURNEY.

Customer—Is this the travellers cheque section ?

Officer—Yes. This is the travellers cheque section ? Do you want travellers cheques ? Please sit down.

C—Yes, I want travellers cheques. But my account is not there in your branch. That is the trouble.

O—There is no need (to have an) account (in this bank for obtaining) travellers cheques. For how many rupees do you want travellers cheques ?

C—I want travellers cheques for five thousand ruppees.

O—In what denomination you want the travellers cheques ?

C—In what denomination travellers cheques are available with you ?

O—Travellers cheques of one hundred, five hundred and one thousand denominations are available with us.

C—Don't you have the travellers cheques of the denomination of rupees twenty five and fifty ?

O—For the time being travellers cheques of that denomination are not available. They will come tomorrow or day after tomorrow. Then those will be available.

C—How to encash these travellers cheques ?

O—Our travellers cheques can be encashed in any branch of ours or in any nationalised bank.

C—Do you charge for (encashing) that ?

O—No. We do not charge for that. To which places are you going on tour ?

ಗಿ—ಇಲ್ಲಿಂದ ಬೆಂಗಳೂರಿಗೆ ಹೋಗ್ತೀನಿ. ಬೆಂಗಳೂರಿನಿಂದ ಮದರಾಸಿಗೆ ಹೋಗ್ತೀನಿ. ಮದರಾಸಲ್ಲಿ ಎರಡು ದಿನ ಇರ್ತೀನಿ. ಅಲ್ಲಿ ಸುತ್ತಮುತ್ತಲಿನ ಸ್ಥಳಗಳನ್ನು ನೋಡಬೇಕು.

ಅ—ಅಷ್ಟೇನಾ ?

ಗ್ರಾ—ಅಷ್ಟೇ ಅಲ್ಲ ಸರ್, ನಾನು ಮದರಾಸಿನಿಂದ ಭೂಪಾಲ್‌ಗೆ ಹೋಗಬೇಕು, ಭೂಪಾಲ್‌ನಿಂದ ಖಜರಾಹೋಗೆ ಹೋಗಬೇಕು. ಖಜರಾಹೋ, ಕಾಶಿ, ಎಲ್ಲ ನೋಡಬೇಕು. ಕಾಶಿಯಿಂದ ದೆಹಲಿ ಬೊಂಬಾಯಿ ಮಾರ್ಗವಾಗಿ ಬೆಂಗಳೂರಿಗೆ ವಾಪಸ್ ಬರ್ತೀನಿ

ಅ—ಇದಕ್ಕೆಲ್ಲ ಎಷ್ಟುದಿನ ಹಿಡಿಯುತ್ತೆ

ಗ್ರಾ—ಈ ಪ್ರವಾಸಕ್ಕೆ ಸುಮಾರು ಒಂದು ಒಂದೂವರೆ ತಿಂಗಳು ಹಿಡಿಯಬಹುದು.

ಅ—ನೀವೊಬ್ಬರೇ ಹೋಗ್ತೀರೋ, ನಿಮ್ಮ ಜೊತೆ ಇನ್ನು ಯಾರಾದರೂ ಬರ್ತಾರೋ ?

ಗ್ರಾ—ನಾನೊಬ್ಬನೇ ಹೋಗಲ್ಲ, ನನ್ನ ಜೊತೆ ನನ್ನ ಹೆಂಡತೀನೂ ಬರ್ತಾಳೆ. ನನಗೆ ಪ್ರವಾಸಿ ಚೆಕ್ಕುಗಳು ಕೊಡ್ತೀರಾ ?

ಅ—ನಿಮಗೆ ಯಾವ ಮುಖಬೆಲೆಯ ಚೆಕ್ಕುಗಳು ಬೇಕು ಹೇಳಿ ?

ಗ್ರಾ—ನಿಮ್ಮ ಹತ್ತಿರ ಐವತ್ತರ ಮುಖಬೆಲೆಯ ಚೆಕ್ಕುಗಳು ಇಲ್ಲವಲ್ಲ, ನೂರರ ಮುಖಬೆಲೆಯ ಚೆಕ್ಕುಗಳನ್ನು ಕೊಡಿರಿ.

ಅ—ಈ ಎಲ್ಲ ಚೆಕ್ಕುಗಳನ್ನು ಎಣಿಸಿ, ಸರಿಯಾಗಿದೆಯಾ ?

ಗ್ರಾ—ಸರಿಯಾಗಿ ಇದೆ ಸರ್.

ಅ—ಎಲ್ಲ ಚೆಕ್ಕುಗಳ ಮೇಲೆ ಈ ಜಾಗದಲ್ಲಿ ಒಂದೊಂದು ಸಹಿ ಹಾಕಿ.

ಗ್ರಾ—ಆ ಜಾಗದಲ್ಲಿ ಸಹಿ ಬೇಡವಾ ?

ಅ—ಇಲ್ಲ ಆ ಜಾಗದಲ್ಲಿ ಬೇಡ. ಎನ್‌ಕ್ಯಾಶಿಂಗ್ ಟೈಂನಲ್ಲಿ ಅವರ ಎದುರಿಗೆ ಅಲ್ಲಿ ಸಹಿ ಮಾಡಬೇಕು.

ಗ್ರಾ—ನಿಮ್ಮ ಬ್ಯಾಂಕಿನ ಶಾಖೆಗಳ ಪಟ್ಟಿ ಕೊಡ್ತೀರಾ ?

ಅ—ಓಹೋ, ಇದೇ ನಮ್ಮ ಶಾಖೆಗಳ ಪಟ್ಟಿ, ಈ ಪರ್ಸನ್ನು ತೆಗೋಳಿ, ಇದರಲ್ಲಿ ಎರಡು ಖಾಲಿ ಫಾರಂಗಳು ಇವೆ. ಇವುಗಳಲ್ಲಿ ನಿಮ್ಮ ಪ್ರವಾಸಿ ಚೆಕ್ಕುಗಳ ವಿವರ ಬರೆಯಿರಿ. ಇದು ಸುರಕ್ಷತೆಗಾಗಿ.

ಗ್ರಾ—ನಾನಿನ್ನು ಬರ್ತೀನಿ ಸರ್.

ಅ—ಆಗಲಿ, ಹೋಗಿಬನ್ನಿ, ನಿಮ್ಮ ಪ್ರಯಾಣ ಸುಖಕರವಾಗಲಿ.

C—From here I will go to Bangalore. From Bangalore I will go to Madras. I will be in Madras for two days. There I have to see the places around.

O—Is that all ?

C—No. That is not all. I have to go to Bhopal from Madras. From Bhopal I have to go to Khajurahoo. I have to see Khajurahoo; Kashi, etc. From Kashi, I will come to Bangalore via Delhi and Bombay.

O—How many days will all this take ?

C—For this travel it may take one or one and a half months.

O—Are you going alone or does some one will accompany you ?

C—I am not going alone. My wife also comes with me. Can you give me the travellers cheques ?

O—Please tell me what denomination cheques you want.

C—You do not have fifty rupees denomination cheques. Give me 100 rupees denomination cheques.

O—Count all these cheques. Is it allright ?

C—Allright, Sir.

O—In this place put your signature once in all the cheques.

C—Don't you want signature in that place ?

O—No, not wanted in that place. When encashing you have to sign there in front of the person in the bank counter.

C—Can you give me a list of branches of your bank ?

O—Oh, yes. This is the list of our branches, you take this purse. There are two empty forms in this. Write the datails of your travellers cheques in these froms. This is for safty.

C—I will take leave of you, Sir.

O—Allright, wish you a happy journey.

ಭಾಗ ಎರಡು

ಬಂಗಾರದ ಮೇಲೆ ಸಾಲ ಕೊಡ್ತೀರಾ ?

ರಾಮಯ್ಯ—ನಮಸ್ಕಾರ ಸರ್

ಅಧಿಕಾರಿ—ನಮಸ್ಕಾರ ಏನು ಸಹಾಯ ಬೇಕು ?

ರಾ—ನನ್ನ ಹೆಸರು ರಾಮಯ್ಯ ಸರ್. ನನ್ನ ಖಾತೆ ನಿಮ್ಮ ಬ್ಯಾಂಕಿನಲ್ಲಿ ಇದೆ. ನಿಮ್ಮಿಂದ ನನಗೆ ಒಂದು ಮುಖ್ಯವಾದ ಸಹಾಯ ಆಗಬೇಕು ಮಾಡ್ತೀರಾ ?

ಅ—ನಮ್ಮ ಬ್ಯಾಂಕಿಂದ ಸಾಧ್ಯಾನಾ ನೋಡೋಣ, ಏನು ಸಹಾಯ ಹೇಳಿ.

ರಾ—ನಾನು ನನ್ನ ಮಗಳ ಮದುವೆ ಅರ್ಜೆಂಟಾಗಿ ಮಾಡಬೇಕು. ನನ್ನ ಹತ್ತಿರ ಸಾಕಷ್ಟು ಹಣ ಇಲ್ಲ. ಸ್ವಲ್ಪ ಹಣ ಸಾಲದು. ಆದ್ದರಿಂದ ಸಾಲಬೇಕು.

ಅ—ಎಷ್ಟು ಹಣ ಸಾಲದು ?

ರಾ—ಮೂರು ಸಾವಿರ ರೂಪಾಯಿ ಸಾಲದು.

ಅ—ಈ ಊರಲ್ಲಿ ನಿಮ್ಮ ಸ್ವಂತದ್ದು ಮನೆ ಆಗಲಿ ಜಮೀನಾಗಲಿ ಇದೆಯಾ ?

ರಾ—ಈ ಊರಲ್ಲಿ ನನ್ನ ಸ್ವಂತದ್ದು ಮನೆ ಆಗಲಿ ಜಮೀನಾಗಲಿ ಇಲ್ಲ ಸರ್

ಅ—ಹಾಗಾದರೆ ನಾವು ಯಾವ ಆಧಾರದ ಮೇಲೆ ನಿಮಗೆ ಸಾಲ ಕೊಡಬೇಕು ? ಏನಾದರೂ ಗ್ಯಾರಂಟಿ ಬೇಕಲ್ಲ ?

ರಾ—ನನ್ನ ಹತ್ತಿರ ಸ್ವಲ್ಪ ಬಂಗಾರ ಇದೆ ಸರ್. ಆ ಒಡವೆಗಳ ಆಧಾರದ ಮೇಲೆ ಸಾಲ ಕೊಡಿ,

ಅ—ನೀವು ಯಾವುದಾದರೂ ಸರಕಾರಿ ನೌಕರಿಯಲ್ಲಿ ಇದ್ದೀರಾ ?

ರಾ—ಹೌದು ಸರ್ ನಾನು ಪ್ರೈಮರಿಸ್ಕೂಲಿನಲ್ಲಿ ಜವಾನ ಆಗಿದ್ದೀನಿ,

ಅ—ಹಾಗಾದರೆ ನಿಮ್ಮ ಹತ್ತಿರ ಉಳಿತಾಯದ ಹಣವೇನೂ ಇಲ್ಲವಾ ?

ರಾ—ನನ್ನ ಹತ್ತಿರ ಸ್ವಲ್ಪ ಹಣವೇನೋ ಇದೆ ಆದರೆ ಅದು ಮಗಳ ಮದುವೆಗೆ ಸಾಲಲ್ಲ ಆದುದರಿಂದ ಬಂಗಾರವನ್ನು ನಿಮ್ಮ ಬ್ಯಾಂಕಿನಲ್ಲಿ ಅಡವು ಇಡ್ತೀನಿ.

PART 2

DO YOU GIVE LOAN ON GOLD?

Ramaiah—Namaskaara, Sir.
Officer—Namaskaara, what help is wanted ?

R—My name is Ramaiah, Sir. My account is there in your bank. I want an important help from you. Can you do it, Sir ?

O—Let us see whether it is possible to do it for our bank. What help (do you want), tell me ?

R—Urgently I have to do the marriage of my daughter. Sufficient money is not there with me. Money is not sufficient (a little more is required). So I need some loan.

O—How much money is not sufficient ? (How much in required)

R—Three thousand rupees is less.

O—In this village do you have your own house or land ?

R—In this village I do not have my own house or land.

O—If so, on what guarantee can we give loan to you ? Some guarantee is needed, isn't it ?

R—I have a little gold. Sir, On the basis of that you can give me loan.

O—Are you in any government job ?

R—Yes, Sir. I am an attender in a primary school.

O—If so, don't you have any savings money ?

R—I have a little money. But that is not sufficient for the daughters marriage, So I want to mortgage the gold in your bank.

ಅ—ನಾವು ಬಂಗಾರದ ಮೇಲೆ ಸಾಲ ಏನೋ ಕೊಡ್ತಿವಿ ಆದರೆ ಅದಕ್ಕೆ ಬ್ಯಾಂಕಿನ ಅನುಮತಿ ಇರಬೇಕು.

ರಾ—ನೋಡಿ ಸಮ್ಮತಿ ಗಿಮ್ಮತಿ ಎಲ್ಲ ನನಗೆ ಗೊತ್ತಿಲ್ಲ.

ಅ— ಹೋಗಲಿ ನಿಮ್ಮ ಹತ್ತಿರ ಒಟ್ಟು ಎಷ್ಟು ತೊಲ ಬಂಗಾರ ಇದೆ.

ರಾ—ನೋಡಿ ಸರ್ ಇದೇ ಬಂಗಾರ, ಸುಮಾರು ಹತ್ತು ತೊಲ ಇದೆ. ಅದಕ್ಕಿಂತ ಕಡಿಮೆ ಏನೂ ಇಲ್ಲ. ಒಂದು ಸರ, ಉಂಗುರ, ಓಲೆ, ಮೂಗುತಿ, ಜಡೆಬಿಲ್ಲೆ, ಕೆನ್ನೆಚೈನು, ಜುಮುಕಿ, ಬಳೆ ಇವೆ. ಎಲ್ಲ ಸವರನ್ ಬಂಗಾರ. ಬೇಕಾದರೆ ತೂಕ ಹಾಕಿ.

ಅ—ಇಷ್ಟು ಚಿನ್ನದ ಮೇಲೆ ನಾವು ಮೂರು ಸಾವಿರ ರೂಪಾಯಿ ಸಾಲ ಕೊಡಬಹುದು ಅದಕ್ಕಿಂತ ಹೆಚ್ಚಿಗೆ ಕೊಡಲ್ಲ.

ರಾ—ಇನ್ನೂ ಸ್ವಲ್ಪ ಜಾಸ್ತಿ ಹಣ ಸಾಧ್ಯಾನಾ, ನೋಡಿ ಸರ್.

ಅ—ಏನ್ರೀ ಚೌಕಾಸಿ ವ್ಯಾಪಾರ ಮಾಡ್ತೀರಿ, ಇದೇನು ಗಿರವಿ ಅಂಗಡೀನಾ ? ಚೌಕಾಸಿ ವ್ಯಾಪಾರಕ್ಕೆ ಗಿರವಿ ಅಂಗಡಿಗೇ ಹೋಗಿ.

ರಾ—ಹಾಗೇನಿಲ್ಲ ಸರ್ ನಾಳೆ ಬರ್ತೀನಿ ಯಾವುದಕ್ಕೂ ತಿಳಿಸ್ತೀನಿ.

ಅ—ಆಗಲಿ, ನಮಸ್ಕಾರ.

ರಾ—ನಮಸ್ಕಾರ.

O— We give loan on gold. But we need banks permission for that.

R—See ! I do not know about the permission and all that. Leave it, how many tolas of gold do you have ?

R—See, sir. This gold is nearly ten tola. It is not less than that. One chain ring, ear ring, nose ring, plait medal, a cheek-chain, hanging stud of the ear, bangles. All these are sovereign gold. If necessary you can weigh

O—These are ten tolas. On the basis of this we can give three thousand rupees loan. Not more than that.

R—Please see whethere some more money is posible, Sir.

O—Why are you bargaining. Is this the pawn broker's shop ? For bargaining you have to go to the pawn broker's shop.

R—Not like that, tomorrow I will come and tell you.

O—Allright, namaskaara.

R—Namaskaara.

ಭಾಗ ಮೂರು

ಮಾರ್ಕೆಟ್ ತೋರಿಸ್ತೀನಿ, ಹೋಗೋಣ ಬನ್ನಿ

ಅಧ್ಯಾಪಕ—ಇದೇ ಮಾರ್ಕೆಟ್.

ವಿದ್ಯಾರ್ಥಿ—ಇದರ ಹೆಸರು ಏನು ಸರ್ ?

ಅ—ಇದರ ಹೆಸರು ದೇವರಾಜ ಮಾರ್ಕೆಟ್ ಇದನ್ನು ದೊಡ್ಡ ಮಾರ್ಕೆಟ್ ಅಂತಾನೂ ಕರೀತಾರೆ.

ವಿ— ಹಾಗಾದರೆ ಈ ಊರಲ್ಲಿ ಚಿಕ್ಕ ಮಾರ್ಕೆಟ್ ಬೇರೆ ಇದೆಯಾ ಸರ್ ?

ಅ— ಹೌದು ಚಿಕ್ಕ ಮಾರ್ಕೆಟ್ ಬೇರೆ ಇದೆ, ಅದರ ಹೆಸರು ವಾಣೀವಿಲಾಸ ಮಾರ್ಕೆಟ್.

ವಿ—ಸಾರ್ ಈ ಮಾರ್ಕೆಟ್‌ಅಲ್ಲಿ ಏನೇನು ಸಿಕ್ಕುತ್ತೆ?

ಅ—ಈ ಮಾರ್ಕೆಟ್‌ಅಲ್ಲಿ ದಿನಬಳಕೆಗೆ ಮನೆಗಳಿಗೆ ಏನೇನು ಬೇಕು ಅದೆಲ್ಲ ಸಿಕ್ಕುತ್ತೆ.

ವಿ—ನಮಗೆ ದಿನಬಳಕೆ ಸಾಮಾನುಗಳ ಹೆಸರುಗಳು ಗೊತ್ತಿಲ್ಲ. ಅವುಗಳ ಹೆಸರನ್ನು ಹೇಳಿಕೊಡ್ತೀರಾ ?

ಅ—ಆಗಲಿ ಬನ್ನಿ, ಮೊದಲು ತರಕಾರಿ ವಿಭಾಗಕ್ಕೆ ಹೋಗೋಣ. ನಿಮಗೆ ಯಾವುದರ ಹೆಸರು ಗೊತ್ತಿಲ್ಲ ಅದನ್ನು ನಾನು ಹೇಳ್ತೀನಿ.

ವಿ—ಸರ್, ಈ ತರಕಾರಿಗಳನ್ನು ಏನುಅಂತಾರೆ ?

ಅ—ಅದನ್ನು ಬದನೇಕಾಯಿ ಅಂತಾರೆ. ಇವೆಲ್ಲ ಕುಂಬಳಕಾಯಿಗಳು, ಇದು ಸಿಹಿ ಗುಂಬಳಕಾಯಿ, ಇದು ಬೂದುಗುಂಬಳಕಾಯಿ ಅದು ಹೀರೇಕಾಯಿ.

ವಿ—ಇವು ಏನು ಸಾರ್?

ಅ— ಇವು ಎಲ್ಲ ಬೇರೆ ಬೇರೆ ರೀತಿಯ ಮೆಣಸಿನಕಾಯಿಗಳು. ಇದು ದೊಣ್ಣೆ ಮೆಣಸಿನಕಾಯಿ ಅಥವಾ ಹೆಟ್ಟಿ ಮೆಣಸಿನಕಾಯಿ. ಇದು ಹಸಿರು ಮೆಣಸಿನಕಾಯಿ, ಇದು ಕೆಂಪು ಅಥವಾ ಒಣ ಮೆಣಸಿನಕಾಯಿ.

ವಿ—ಇವೆರಡೂ ಎಂಥಾ ಕಾಯಿಗಳು ಸರ್?

ಅ—ಇದನ್ನು ಪಡವಲಕಾಯಿ ಅನ್ನಾರೆ ಅದನ್ನು ಸೋರೇಕಾಯಿ ಅನ್ನಾರೆ.

PART 3

COME ON, LET US GO, (I WILL) SHOW THE MARKET

Teacher—This is the market.

Student—What is the name of this (market), Sir ?

T—Name of this (place) is Devaraja market. (people) Call this 'Big Market' also.

S—If so, is there small market also in this place ?

T—Yes, a small market is there. Name of that place is Vanivilasa market.

S—Sir, what is available in this market ?

T—In this market, whatever needed for daily consumption in the home is available.

S—We don't know the names of goods of daily consumption. Please teach us the names.

T—Let it be so, first let us go to vegetable section. Ask me the name of the vegetable, for which you do not know the name.

S—What do you call this vegetable, Sir ?

T—It is called brinjal. All those are pumpkins. This is a sweet pumpkin, that is an ash pumpkin, that is cucumis acutangulus.

S—What are these, Sir ?

T—All these are different types of chillies. That is green chillies. This one is red or dried chillies.

S—What are these two, Sir ?

T—This is snakegourd, and that is gourd.

ವಿ—ಇದೇನು ಸಾರ್, ಚಿಕ್ಕದಾಗಿ ಉದ್ದವಾಗಿ ಇದೆಯಲ್ಲ?
ಅ—ಅದಾ ! ಅದು ನುಗ್ಗೇಕಾಯಿ ಇದನ್ನು ನೋಡಿ, ಇದನ್ನು ತೊಂಡೆಕಾಯಿ ಅನ್ನಾರೆ, ಇದನ್ನು ಗೋರಿ ಕಾಯಿ ಅನ್ನಾರೆ ಅವನ್ನು ಹುರುಳಿಕಾಯಿ ಅನ್ನಾರೆ,

ವಿ— ಏನ್ ಸಾರ್, ಕನ್ನಡದಲ್ಲಿ ಎಲ್ಲ ತರಕಾರಿಗಳ ಹೆಸರಿನ ಕೊನೆಯಲ್ಲಿ ಕಾಯಿ ಅಂತ ಬರುತ್ತೆ.
ಅ—ಹೌದು, ಸಾಮಾನ್ಯವಾಗಿ ಎಲ್ಲ ತರಕಾರಿಗಳ ಕೊನೆಯಲ್ಲೂ ಕಾಯಿ ಅಂತ ಬರುತ್ತೆ ಕೆಲವಕ್ಕೆ ಮಾತ್ರ ಬರಲ್ಲ. ಉದಾಹರಣೆಗೆ, ಹೂ ಕೋಸು, ಎಲೆ ಕೋಸು, ಗೆಡ್ಡೆ ಕೋಸು, ಮೂಲಂಗಿ, ಗಜ್ಜರಿ, ಭಟಾಣಿ, ಆಲೂಗೆಡ್ಡೆ, ನೀರುಳ್ಳಿ, ಬೆಳ್ಳುಳ್ಳಿ, ಇವೆಲ್ಲ ಕಾಯಿ ಅಂತ ಕೊನೆಯಲ್ಲಿ ಬರಲ್ಲ.

ವಿ— ಈ ಮಾರ್ಕೆಟ್‌ನಲ್ಲಿ ದಿನಬಳಕೆಯ ಎಲ್ಲ ಸಾಮಾನೂ ಸಿಕ್ಕುತ್ತೆ ಅಂತ ಹೇಳ್ತೀರಿ ಆದರೆ ಎಲ್ಲಿಂದ ಎಲ್ಲೀ ವರೆಗೂ ತರಕಾರೀನೇ ಕಾಣುತ್ತೆ, ಹೂವು, ಹಣ್ಣು, ದವಸ ಧಾನ್ಯ ಏನೂ ಕಾಣಲ್ಲ.
ಅ— ಮುಂದೆ ಹೋಗೋಣ ಬನ್ನಿ, ಕಣ್ಣಿನ ಮುಂದೇ ಎಲ್ಲ ಆಗಬೇಕು ಅಂದರೆ ಹೇಗೆ? ಅದೆಲ್ಲ ಮುಂದೆ ಇದೆ.

ವಿ—ಹೌದು ಹೌದು ಸರ್, ಈಗ ಕಾಣುತ್ತೆ.
ಅ— ಈ ಸಾಲು ಮತ್ತು ಆ ಸಾಲು ಎರಡೂ ಸಾಲುಗಳು ಹಣ್ಣಿನ ಅಂಗಡಿಗಳು

ವಿ— ಸರ್ apple ಗೆ ಕನ್ನಡದಲ್ಲಿ ಏನು ಅನ್ನಾರೆ
ಅ— ಆಪಲ್‌ಗೆ ಕನ್ನಡದಲ್ಲಿ ಸೇಬು ಅನ್ನಾರೆ,

ವಿ—ಎಲ್ಲೂ ಮಾವಿನಹಣ್ಣೇ ಕಾಣಲ್ಲವಲ್ಲ ಸರ್
ಅ—ನಿಮ್ಮ ಬುದ್ಧಿ, ಏನು ಇಲ್ಲವೋ ಅದನ್ನೇ ಹುಡುಕತ್ತೆ

ವಿ—ಯಾವ ಕಾಲದಲ್ಲಿ ಈ ಮಾರ್ಕೆಟ್‌ಗೆ ಮಾವಿನಹಣ್ಣು ಬರುತ್ತೆ, ಸಾರ್
ಅ— ಸಾಮಾನ್ಯವಾಗಿ ಪ್ರತಿವರ್ಷ ಮಾರ್ಚಿ ಏಪ್ರಿಲ್ ತಿಂಗಳಲ್ಲಿ ಬರುತ್ತೆ, ಇಲ್ಲಿ ನೋಡಿ ಎಲ್ಲ ಹಣ್ಣುಗಳೂ ಇವೆ. ಬಾಳೆಹಣ್ಣು, ಕಿತ್ತಲೆಹಣ್ಣು, ಹಲಸಿನ ಹಣ್ಣು, ಕಲ್ಲಂಗಡಿ, ಕರಬೂಜ, ಚಕ್ಕೋತ ಕೆಂಪು ದ್ರಾಕ್ಷಿ, ಕಪ್ಪುದ್ರಾಕ್ಷಿ.

ವಿ—ಅದೇ ಹೂವಿನ ಅಂಗಡಿಗಳ ಸಾಲು, ಸರ್
ಅ—ಹೌದು, ಅದೇ ಹೂವಿನ ಅಂಗಡಿಗಳ ಸಾಲು

ವಿ—ರೋಸ್‌ಗೆ, ಜಾಸ್ಮಿನ್‌ಗೆ ಕನ್ನಡದಲ್ಲಿ ಏನು ಅನ್ನಾರೆ ಸಾರ್
ಅ—ಕನ್ನಡದಲ್ಲಿ ರೋಸ್‌ಗೆ ಗುಲಾಬಿ, ಜಾಸ್ಮಿನ್‌ಗೆ ಮಲ್ಲಿಗೆ ಅನ್ನಾರೆ

ವಿ—ಮಲ್ಲಿಗೆಯಲ್ಲಿ ವಿವಿಧ ಬಗೆಗಳಿವೆ ಅಲ್ಲವಾ, ಸರ್
ಅ—ಹೌದು ಇವೆ, ದುಂಡುಮಲ್ಲಿಗೆ, ಸೂಜಿಮಲ್ಲಿಗೆ, ನಾಗಮಲ್ಲಿಗೆ, ಕಾಡು ಮಲ್ಲಿಗೆ ಇತ್ಯಾದಿ, ಇತ್ಯಾದಿ.

S—What is this lean and long, Sir ?

T—That ! That is drumstick. Look here ! This is Bryonia grandis. That is dolichos fabaformis, that is beans.

S—What is this, Sir ? In kannada the name of every vegetables ends in *kaayi*.

T—Yes. Generally the name of every vegetable ends is kaayi. It does not end like that in some, for example cauliflower, potata, honion, garlick. radis, peas in all these *kaayi* does not come in the end.

S—Sir, you told us that all the consumption goods are available in the market. But every where only vegetables are seen, flowers, fruits and food grains are not at all seen.

T—Let us proceed further, you con't expect all those things here itself. All that is available there.

S—Yes, yes, Sir. Now it is visible.

T—This row and that row, both rows are fruits shops.

S—How is apple called in Kannada, Sir.

T—Apple is *seebu* in Kannada.

S—No where mango is seen sir.

T—What a mind you have ! Your mind searches far what is not available here.

S—During which season mango comes to this market, Sir ?

T—Generaly every year it comes in March and April. Look here ! All the fruits are here. Banana, orange, jack fruits, watermelon, shaddock, red grapes, black grapes.

S—Is that the row of flower shops.

T—Yes. That is the row of flower shops.

S—How are rose and jasmine called in Kannada, Sir ?

T—In Kannada rose is called *gulaabi*, jasmine is called *mallige*.

S—In jasmine there are many varities is not it so, Sir ?

T—Yes there are jasminam zambac, eared jasmin, justicia nasuta, the wild jasmin etc, etc.

ವಿ—ಸಾರ್ ಇವತ್ತಿಗೆ ಇಷ್ಟು ಸಾಕು ಸಾರ್

ಅ—ಇಷ್ಟೇ ಸಾಕಾ ? ಆಗಲಿಬಿಡಿ, ಇನ್ನೊಂದು ದಿನ ಬರೋಣ.

ವಿ—ಕಾಫಿ ಕುಡಿಯೋಣವಾ ಸರ್

ಅ—ಮಾರ್ಕೆಟ್ ಒಳಗೆ ಹೋಟೆಲ್ ಇಲ್ಲ, ಹೊರಗೆ ಹೋಗೋಣ ಅಲ್ಲಿಯೇ ಕುಡಿಯೋಣ

ವಿ—ಆಗಲಿ ಸರ್

ಅ—ನಡೀರಿ ಹೋಗೋಣ.

S—This much is enough for today, Sir.
T—Is this enough ? Allright, let us come on another day.

S—Shall we drink coffee, Sir ?
T—There is no hotel inside the market. Let us go out. Drink there itself.

S—Allright Sir.
T—Move, let us go.

DRILLS

REPETITION DRILL

ಅಧ್ಯಾಪಕ—ನೀವು ನಮ್ಮ ಬ್ಯಾಂಕಿನ ಪ್ರವಾಸಿ ಚೆಕ್ ಕೊಳ್ತೀರಾ ? ಕಲಿಯುವವ— ....

ಅ—ಹೌದು, ನಾನು ಈಗ ನಿಮ್ಮ ಬ್ಯಾಂಕಿನ ಪ್ರವಾಸಿ ಚೆಕ್‌ಗಳು ಕೊಳ್ತೀನಿ. ಕ— ....

ಅ—ನಿಮ್ಮ ಹತ್ತಿರ ಎಷ್ಟು ಮುಖಬೆಲೆಯ ಪ್ರವಾಸಿ ಚೆಕ್‌ಗಳು ಸಿಕ್ಕತ್ವೆ ? ಕ— ....

ಅ—ನಮ್ಮ ಹತ್ತಿರ ಎಲ್ಲಾ ಮುಖ ಬೆಲೆಯ ಪ್ರವಾಸಿ ಚೆಕ್‌ಗಳು ಸಿಕ್ಕುತ್ವೆ. ಕ— ....

ಅ—ಈ ಪ್ರವಾಸಿ ಚೆಕ್‌ಗಳನ್ನು ಎಲ್ಲಿ ಮುರಿಸಬಹುದು ? ಕ— ....

ಅ—ಈ ಪ್ರವಾಸಿ ಚೆಕ್‌ಗಳನ್ನು ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮುರಿಸಬಹುದು. ಕ— ....

ಅ—ನೀವು ಮದರಾಸಿನಲ್ಲಿ ಏನೇನು ನೋಡ್ತೀರಿ ? ಕ— ....

ಅ—ನಾನು ಮದರಾಸಿನಲ್ಲಿ ಎಲ್ಲಾ ಜಾಗಗಳನ್ನು ನೋಡ್ತೀನಿ. ಕ— ....

ಅ—ನಿಮ್ಮ ಜೊತೆ ಪ್ರವಾಸಕ್ಕೆ ಯಾರು ಯಾರು ಬರ್ತಾರೆ ? ಕ— ....

ಅ—ನನ್ನ ಜೊತೆ ನನ್ನ ಹೆಂಡತಿ ಮತ್ತು ಮಗಳು ಬರ್ತಾರೆ. ಕ— ....

ಅಧ್ಯಾಪಕ—ನಾನು ನಿಮ್ಮ ಬ್ಯಾಂಕಿನಲ್ಲಿ ಬಂಗಾರವನ್ನು ಅಡವು ಇಡಲಾ ?	ಕಲಿಯುವವ— ....
ಅ—ಆಗಬಹುದು, ನಮ್ಮ ಬ್ಯಾಂಕಿನಲ್ಲಿ ನೀವು ಬಂಗಾರವನ್ನು ಅಡವು ಇಡಬಹುದು.	ಕ— ....
ಅ—ಬಂಗಾರವನ್ನು ತೂಕ ಹಾಕ್ತೀರಾ ?	ಕ— ....
ಅ—ಹೌದು, ಬಂಗಾರವನ್ನು ಸರಿಯಾಗಿ ತೂಕ ಹಾಕ್ತೀವಿ.	ಕ— ....
ಅ—ನನಗೆ ನಾಳೆ ಎಲ್ಲಾ ವಿವರ ತಿಳಿಸ್ತೀರಾ ?	ಕ— ....
ಅ—ಇಲ್ಲ, ನಾಳೆ ತಿಳಿಸಲ್ಲ, ಮುಂದಿನ ವಾರ ಎಲ್ಲಾ ವಿವರ ತಿಳಿಸ್ತೀನಿ.	ಕ— ....
ಅ—ಈ ಮಾರ್ಕೆಟ್ಟನ್ನು ಏನಂತ ಕರೀತಾರೆ ?	ಕ— ....
ಅ—ಈ ಮಾರ್ಕೆಟ್‌ಅನ್ನು ದೊಡ್ಡ ಮಾರ್ಕೆಟ್ ಅಂತ ಕರೀತಾರೆ.	ಕ— ....
ಅ—ಈ ತರಕಾರಿಯನ್ನು ಏನಂತಾರೆ.	ಕ— ....
ಅ—ಅದನ್ನು ಬದನೇಕಾಯಿ ಅಂತಾರೆ	ಕ— ....
ಅ—ಈ ಮಾರ್ಕೆಟ್ಟಿನಲ್ಲಿ ಎಲ್ಲಿಂದ ಎಲ್ಲೀವರೆಗೂ ತರಕಾರೀನೆ ಕಾಣುತ್ತೆ ಅಲ್ಲವಾ.	ಕ— ....
ಅ—ಹೌದು, ಹೌದು, ಈ ಮಾರ್ಕೆಟ್‌ಲ್ಲಿ ಎಲ್ಲಿಂದ ಎಲ್ಲೀವರೆಗೂ ತರ್ಕಾರೀನೇ ಕಾಣುತ್ತೆ.	ಕ— ....
ಅ—ಈ ಮಾರ್ಕೆಟ್ಟಲ್ಲಿ ನೀವು ಏನನ್ನ ಹುಡುಕ್ತೀರಿ ?	ಕ— ....
ಅ—ಈ ಮಾರ್ಕೆಟ್ಟಲ್ಲಿ ನಾನು ಹಣ್ಣುಗಳನ್ನು ಹುಡುಕ್ತೀನಿ.	ಕ— ....

★

SUBSTITUTION DRILL

1. ಅಧ್ಯಾಪಕ—ನಾನು ಬ್ಯಾಂಕಿನ ಸಾಲದಿಂದ ಹೊಸ ಆಟೋ ಕೊಳ್ತೀನಿ. ಕಲಿಯುವವ— ....

ಅ—ನಾವು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

2. ಅ—ನಮ್ಮ ಬ್ಯಾಂಕಿನಲ್ಲಿ ಒಳ್ಳೆಯ ಬೆಳೆಗೆ ಸಾಲ ಸಿಕ್ಕುತ್ತೆ ಕ— ....

ಅ—ನಿಮ್ಮ ಕ— ....

ಅ—ಅವರ ಕ— ....

ಅ—ಬ್ಯಾಂಕು ಕ— ....

ಅ—ಹೊಸ ಕ— ....

ಅ—ಕುರಿ ಕ— ....

ಅ—ಸಿಕ್ಕಲ್ಲ ಕ— ....

3. ಅಧ್ಯಾಪಕ—ನಾನು ಬ್ಯಾಂಕಿನಲ್ಲಿ ಕ್ರಾಸ್ಡ್ ಚೆಕ್ಕನ್ನು ಮುರಿಸ್ತೀನಿ. ಕಲಿಯುವವ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

4. ಅ—ನಾನು ನಿಮ್ಮ ಬ್ಯಾಂಕಿನಲ್ಲಿ ಬಂಗಾರವನ್ನು - ಅಡವು ಇಡ್ತೀನಾ ? ಕ— ....

ಅ—ನಾವು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

5. ಅಧ್ಯಾಪಕ— ನಾನು ಬಂಗಾರವನ್ನು ಸರಿಯಾಗಿ ತೂಕ ಹಾಕ್ತೀನಾ? | ಕಲಿಯುವವ — ....

ಅ—ನಾವು | ಕ— ....

ಅ—ನೀನು | ಕ— ....

ಅ—ಅವನು | ಕ— ....

ಅ—ಅವಳು | ಕ— ....

ಅ—ಅವರು | ಕ— ....

ಅ—ಅದು | ಕ— ....

ಅ—ಅವು | ಕ— ....

6. ಅ—ಈ ಬದನೇಕಾಯಿಯಿಂದ ಏನಾದರೂ ಉಪಯೋಗ ಇದೆಯೇ ? | ಕ— ....

ಅ—ಕುಂಬಳಕಾಯಿ | ಕ— ....

ಅ—ಹೀರೇಕಾಯಿ | ಕ— ....

ಅ—ಮೆಣಸಿನಕಾಯಿ | ಕ— ....

ಅ—ಪಡವಲಕಾಯಿ | ಕ— ....

ಅ—ನುಗ್ಗೇಕಾಯಿ | ಕ— ....

ಅ—ಬಟಾಣಿ | ಕ— ....

ಅ—ನೀರುಳ್ಳಿ | ಕ— ....

ಅ—ಬೆಳ್ಳುಳ್ಳಿ | ಕ— ....

ಅ—ಆಲೂಗೆಡ್ಡೆ | ಕ— ....

ಅಧ್ಯಾಪಕ—ಮೊಲಂಗಿ ಕಲಿಯುವವ— ....

ಅ—ಹೂ ಕೋಸು ಕ— ....

ಅ—ಎಲೇ ಕೋಸು ಕ— ....

ಅ—ಹೂವು ಕ— ....

ಅ—ಹಣ್ಣು ಕ— ....

ಅ—ಸೇಬು ಕ— ....

ಅ—ಚಕ್ಕೋತ ಕ— ....

ಅ—ಭತ್ತ ಕ— ....

ಅ—ಕಬ್ಬು ಕ— ....

ಅ—ಸೊಪ್ಪು ಕ— ....

ಅ—ಇಲ್ಲವಾ ? ಕ— ....

7. ಅ—ನಿಮ್ಮ ಹತ್ತಿರ ಎಷ್ಟು ರೂಪಾಯಿ ಮುಖಬೆಲೆಯ ಟ್ರಾವಲರ್ಸ್ ಚೆಕ್ ಸಿಕ್ಕುತ್ತೆ ? ಕ— ....

ಅ—ಅವರೆ ಕ— ....

ಅ—ಬ್ಯಾಂಕಿನಲ್ಲಿ ಕ— ....

ಅ—ಹತ್ತು ಕ— ....

ಅ—ಡ್ರಾಫ್ಟ್ ಕ— ....

ಅ—ಸಿಕ್ಕಲ್ವ? ಕ— ....

ಅ—ಸಿಕ್ಕಲ್ಲ ಕ— ....

8. ಅಧ್ಯಾಪಕ—ನಮ್ಮ ಪ್ರವಾಸಿ ಚೆಕ್ಕನ್ನು ಯಾವುದೇ ಬ್ಯಾಂಕಿನ ಶಾಖೆಯಲ್ಲಿ ಮುರಿಸಬಹುದು. ಕಲಿಯುವವ— ....

ಅ—ನಿಮ್ಮ ಕ— ....

ಅ—ಡ್ರಾಫ್ಟ್ ಕ— ....

ಅ—ದೊಡ್ಡ ಹೋಟಲ್ ಕ— ....

ಅ—ಮುರಿಸಬಾರದು ಕ— ....

ಅ—ಪ್ರವಾಸಿ ಚೆಕ್ ಕ— ....

ಅ—ಮುರಿಸಬಹುದಾ ಕ— ....

9. ಅ—ನಾನು ಇದನ್ನು ದೊಡ್ಡ ಮಾರ್ಕೆಟ್ ಅಂತೀನಿ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

ಅ—ನೀವು ಕ— ....

TRANSFORMATION DRILL

Model : ಅ—ನಾವು ಎಲ್ಲ ರೈತರಿಗೂ ಸಾಲ ಕೊಡ್ತೀವಿ. ಕ—ನಾವು ಎಲ್ಲ ರೈತರಿಗೂ ಸಾಲ ಕೊಡಲ್ಲ.

ಅ—ನಾನು ಬ್ಯಾಂಕಲ್ಲಿ ಪ್ರವಾಸಿ ಚೆಕ್ ಕೊಳ್ತೀನಿ. ಕ— ....

ಅಧ್ಯಾಪಕ— ಅವರು ಸಾಯಂಕಾಲ ಮಾರ್ಕೆಟ್ಟಿನಲ್ಲಿ ಸಿಕ್ತಾರೆ. ಕಲಿಯುವವ— ....

ಅ—ಅವನು ಲೆಡ್ಜರ್‌ನಲ್ಲಿ ನೋಡ್ತಾನೆ. ಕ— ....

ಅ—ನಾನು ಎಲ್ಲ ಹಣವನ್ನು S.B. ಖಾತೆಯಲ್ಲಿ ಇಡ್ತೀನಿ. ಕ— ....

ಅ—ನೀವು ಬರ್ತೀರಿ ಅಂತ ಅವನಿಗೆ ತಿಳಿಸ್ತೀನಿ. ಕ— ....

ಅ—ಮ್ಯಾನೇಜರ್ ಅವರು ನಿಮ್ಮನ್ನು ಕರೀತಾರೆ. ಕ— ....

ಅ—ಫೀಲ್ಡ್ ಆಫೀಸರ್ ಅವರು ರೈತರನ್ನು ಸಾಯಂಕಾಲ ಕಾಣ್ತಾರೆ. ಕ— ....

ಅ—ಆಳು ತೋಟದಲ್ಲಿ ಹಸುಗಳನ್ನು ಹುಡುಕ್ತಾನೆ. ಕ— ....

BUILD-UP DRILL

1. ಅ—ಕಾಶಿಯಿಂದ ದೆಹಲಿ ಬೊಂಬಾಯಿ ಮಾರ್ಗವಾಗಿ ಬೆಂಗಳೂರಿಗೆ ವಾಪಸ್ ಬರ್ತೀನಿ. ಕ— ....

ಅ—ವಾಪಸ್ ಬರ್ತೀನಿ ಕ— ....

ಅ—ಬೆಂಗಳೂರಿಗೆ ಕ— ....

ಅ—ಬೊಂಬಾಯಿ ಮಾರ್ಗವಾಗಿ ಕ— ....

ಅ—ದೆಹಲಿ ಕ— ....

ಅ—ಕಾಶಿಯಿಂದ ಕ— ....

2. ಅ—ನೀವೊಬ್ಬರೇ ಪ್ರವಾಸ ಹೋಗ್ತೀರೋ ನಿಮ್ಮ ಜೊತೆ ಇನ್ನೂ ಯಾರಾದ್ರೂ ಬರ್ತಾರೂ ? ಕ— ....

ಅ—ಯಾರಾದ್ರೂ ಬರ್ತಾರೋ ಕ— ....

ಅಧ್ಯಾಪಕ—ಇನ್ನೂ ಕಲಿಯುವವ— ....

ಅ—ನಿಮ್ಮ ಜೊತೆ ಕ— ....

ಅ—ಪ್ರವಾಸ ಹೋಗ್ತೀರೋ ಕ— ....

ಅ—ನೀವೊಬ್ಬರೇ ಕ— ....

3. ಅ—ಈ ಊರಲ್ಲಿ ನಿಮ್ಮ ಸ್ವಂತದ್ದು ಮನೆ ಆಗಲಿ ಜಮೀನಾಗಲಿ ಇಲ್ಲವಾ ? ಕ— ....

ಅ—ಜಮೀನಾಗಲಿ ಇಲ್ಲವಾ ಕ— ....

ಅ—ಮನೆ ಆಗಲಿ ಕ— ....

ಅ—ಸ್ವಂತದ್ದು ಕ— ....

ಅ—ನಿಮ್ಮ ಕ— ....

ಅ—ಈ ಊರಲ್ಲಿ ಕ— ....

4. ಅ—ಒಂದು ಸರ, ಉಂಗುರ, ಓಲೆ, ಮೂಗುತಿ, ಜಡೆಬಿಲ್ಲೆಗಳು ಇವೆ. ಕ— ....

ಅ—ಇವೆ ಕ— ....

ಅ—ಜಡೆ ಬಿಲ್ಲೆಗಳು ಕ— ....

ಅ—ಮೂಗುತಿ ಕ— ....

ಅ—ಓಲೆ ಕ— ....

ಅ—ಉಂಗುರ ಕ— ....

ಅ—ಸರ ಕ— ....

ಅ—ಒಂದು ಕ— ....

5. ಅಧ್ಯಾಪಕ— ಇಷ್ಟು ಚಿನ್ನದ ಮೇಲೆ ನಾವು ಮೂರು ಸಾವಿರ ರೂಪಾಯಿ ಸಾಲ ಕೊಡಬಹುದು. ಕಲಿಯುವವ— ....

ಅ—ಕೊಡಬಹುದು ಕ— ....

ಅ—ಸಾಲ ಕ— ....

ಅ—ರೂಪಾಯಿ ಕ— ....

ಅ—ಮೂರು ಸಾವಿರ ಕ— ....

ಅ—ನಾವು ಕ— ....

ಅ—ಚಿನ್ನದ ಮೇಲೆ ಕ— ....

ಅ—ಇಷ್ಟು ಕ— ....

ಅ—ಕನ್ನಡದಲ್ಲಿ ಎಲ್ಲ ತರಕಾರಿಗಳ ಕೊನೆಯಲ್ಲಿ ಕಾಯಿ ಅಂತ ಯಾಕೆ ಬರುತ್ತೆ ಸಾರ್ ? ಕ— ....

ಅ—ಬರುತ್ತೆ ಸಾರ್ ಕ— ....

ಅ—ಯಾಕೆ ಕ— ....

ಅ—ಕಾಯಿ ಅಂತ ಕ— ....

ಅ—ಕೊನೆಯಲ್ಲಿ ಕ— ....

ಅ—ತರಕಾರಿಗಳ ಕ— ....

ಅ—ಎಲ್ಲ ಕ— ....

ಅ—ಕನ್ನಡದಲ್ಲಿ ಕ— ....

RESPONSE DRILL

ಅಧ್ಯಾಪಕ—ನಿಮ್ಮ ಬ್ಯಾಂಕಿನಲ್ಲಿ ಯಾವ ಯಾವ ಸಾಲಗಳು ಸಿಕ್ಕುತ್ವೆ ? ಕಲಿಯುವವ— ....

ಅ—ನಿಮ್ಮ ಬ್ಯಾಂಕಿನಲ್ಲಿ ಎಲ್ಲ ಪ್ರವಾಸಿಗಳೂ ಪ್ರವಾಸಿ ಚೆಕ್ ಕೊಳ್ತಾರಾ ? ಕ— ....

ಅ— ವಿದೇಶಿ ಪ್ರವಾಸಿಗಳೂ ನಿಮ್ಮ ಬ್ಯಾಂಕಿನಲ್ಲಿ ಚೆಕ್ ಮುರಿಸ್ತಾರಾ ? ಕ— ....

ಅ—ನೀವು ಲೆಕ್ಕವನ್ನು ಸರಿಯಾಗಿ ನೋಡ್ತೀರಾ ? ಕ— ....

ಅ—ನಿಮ್ಮ ಬ್ಯಾಂಕಿನಲ್ಲಿ ಜನರು ಚಿನ್ನವನ್ನು ಅಡವು ಇಡ್ತಾರಾ ? ಕ— ....

ಅ—ನಾಳೆ ಹಣ ಬೇಕಾದ್ರೆ ಇವತ್ತೇ ವ್ಯಾಪಾರಿಗಳು ನಿಮಗೆ ತಿಳಿಸ್ತಾರಾ ? ಕ— ....

ಅ—ರೈತರು ನಿಮ್ಮನ್ನು ಹಳ್ಳಿಗೆ ಕರೀತಾರಾ ? ಕ— ....

ಅ—ರೈತರು ತಮ್ಮ ಹಳ್ಳಿಯಲ್ಲಿ ನಿಮ್ಮನ್ನು ಚೆನ್ನಾಗಿ ಕಾಣ್ತಾರಾ ? ಕ— ....

ಅ—ನಿಮ್ಮ ಲೆಡ್ಜರ್‌ನಲ್ಲಿ ನನ್ನ ಖಾತೆಯನ್ನು ಹುಡುಕ್ತೀರಾ ? ಕ— ....

ಅ—ನಿಮ್ಮ ಊರಿನ ಮಾರ್ಕೆಟ್ಟಿಲ್ಲಿ ಯಾವ ಯಾವ ತರಕಾರಿ ಸಿಕ್ಕುತ್ವೆ ? ಕ— ....

ಅ—ಈಗ ಮೈಸೂರು ಮಾರ್ಕೆಟ್ಟಿನಲ್ಲಿ ಯಾವ ಯಾವ ಹಣ್ಣುಗಳು ಸಿಕ್ಕುತ್ವೆ. ಕ— ....

EXERCISE

I Write both affermative and negative answers to the following questions.

1 ನಿಮ್ಮ ಬ್ಯಾಂಕಿನಲ್ಲಿ ಕುರಿ ಸಾಲ ಸಿಕ್ಕುತ್ತಾ ?

2 ನೀವು ದಿನವೂ ಮಾರ್ಕೆಟ್ಟಿನಲ್ಲಿ ತರಕಾರಿ ಕೊಳ್ತೀರಾ ?

3 ನಾನು ಒಂದು ಸಾವಿರ ರೂಪಾಯಿ ಡ್ರಾಫ್ಟ್‌ಅನ್ನು ಮುರಿಸಲಾ ?

4 ನೀವು ಎಲ್ಲಾ ಭಾಷೆಯ ಚಲನ ಚಿತ್ರಗಳನ್ನು ನೋಡ್ತೀರಾ ?

5 ನಿಮ್ಮ ಬ್ಯಾಂಕಿನ ಬೀಗದ ಕೈಯನ್ನು ಸೇಫ್‌ನಲ್ಲಿ ಇಡ್ತೀರಾ ?

6 ರೈತರು ತಮ್ಮ ಕಷ್ಟಗಳನ್ನು ನಿಮಗೆ ವಿವರಿಸ್ತಾರಾ ?

7 ಮ್ಯಾನೇಜರ್ ಅವರು ತಮ್ಮ ರೂಮಿಗೆ ನಿಮ್ಮನ್ನು ಪ್ರತಿ ದಿನ ಕರೀತಾರಾ ?

8 ಸಾಹುಕಾರರು ನಿಮ್ಮನ್ನು ಚೆನ್ನಾಗಿ ಕಾಣ್ತಾರಾ ?

9 ನೀವು ಬಾಡಿಗೆ ಮನೆಯನ್ನು ಹುಡುಕ್ತಿರಾ ?

10 ನಿಮ್ಮ ಆಳುಗಳು ನಿಮ್ಮ ಸಲಹೆಯನ್ನು ಕೇಳ್ತಾರಾ ?

II Use the following words in your own sentences.

1 ಸಾಮಾನು

2 ಉದ್ದ

3 ಉದಾಹರಣೆ

4 ದವಸ ಧಾನ್ಯ

5 ಸಾಲು

6 ಬುದ್ಧಿ

7 ಕಾಲ

8 ವಿವಿಧ

9 ಬಗೆ

10 ಪ್ರವಾಸಿ

III Write the following numarals in words.

24,532	33,333
34,876	44,444
18,935	55,555
47,976	66,666
95,843	77,777
88,779	88,888
34,567	99,999
22,222	

IV Encircle the word that belong to the group.

1 ಕೊಡು ಬಿಡು ಹೊರಡು ದೂರು

2 ಕೆಂಪು ಮೋಸ ನೀಲಿ ಬಿಳಿ

3 ಹಿಂದೆ ಮುಂದೆ ರಸ್ತೆ ಬಲಗಡೆ

4 ಗಂಡ ಹೆಂಡತಿ ಮಗಳು ಜಾಣ

5 ಸೋರೆಕಾಯಿ ಬೆಂಡೆಕಾಯಿ ಹುರುಳಿಕಾಯಿ ತೆಂಗಿನಕಾಯಿ

V Answer the following questions.

1 ನಿಮ್ಮ ಹೋಟೆಲ್‌ನಲ್ಲಿ ಏನೇನು ತಿಂಡಿ ಸಿಕ್ಕುತ್ತೆ ?

2 ನಿಮ್ಮ ಅಂಗಡಿಯಲ್ಲಿ ಎಲ್ಲರೂ ತರಕಾರಿ ಕೊಳ್ತಾರಾ ?

3 ವಿದೇಶಿ ಪ್ರವಾಸಿಗಳೂ ಈ ತರಕಾರಿ ತಿನ್ತಾರಾ ?

4 ನೀವು ನನ್ನ ಖಾತೆಯನ್ನು ಸರಿಯಾಗಿ ನೋಡ್ತೀರಾ ?

5 ನಾಳೆ ಸಾಲ ಬೇಕಾದ್ರೆ ಇವತ್ತೇ ನೀವು ತಿಳಿಸ್ತೀರಾ ?

6 ರೈತರು ನಿಮ್ಮನ್ನು ಊರಿಗೆ ಕರೀತಾರಾ ?

7 ನಿಮ್ಮ ಅಂಗಡಿಯಲ್ಲಿ ನನ್ನ ಲೆಕ್ಕವನ್ನು ಹುಡುಕ್ತೀರಾ ?

8 ನಿಮ್ಮ ಹಳ್ಳಿಯ ಮಾರ್ಕೆಟ್ಟಲ್ಲಿ ಯಾವ ಯಾವ ತರಕಾರಿ ಸಿಕ್ಕುತ್ವೆ ?

9 ಈಗ ನಿಮ್ಮೂರಲ್ಲಿ ಯಾವ ಯಾವ ಹಣ್ಣು ಸಿಕ್ಕುತ್ವೆ ?

ಪಾಠ ಹನ್ನೆರಡು

ಭಾಗ ಒಂದು

ಹೇಗೆ ಹೇಗೆ ಉಳಿಸಲಿ

ರಾಮಯ್ಯ—ನಮಸ್ಕಾರ ಸ್ವಾಮಿ.

ಅಧಿಕಾರಿ—ನಮಸ್ಕಾರ, ಇಲ್ಲಿ ಕೂತ್ಕೊಳ್ಳಿ. ನನ್ನಿಂದ ಏನಾದರೂ ಸಹಾಯ ಆಗಬೇಕಾ ?

ರಾ—ಹೌದು ಸರ್ ನಿಮ್ಮಿಂದ ನನಗೆ ತುಂಬಾ ಸಹಾಯ ಆಗಬೇಕು. ನಾನು ಬ್ಯಾಂಕ್ ವ್ಯವಹಾರಕ್ಕೆ ಹೊಸಬ. ಅದನ್ನು ನನಗೆ ತಿಳಿಸ್ತಿರಾ ಸಾರ್, ನನಗೆ ಬ್ಯಾಂಕಿನ ಉಪಯೋಗವನ್ನು ತಿಳಿಸಿ ಸರ್.

ಅ—ತಿಳಿಸೋಣ ಅದಕ್ಕೇನೂ ಅಡ್ಡಿ ಇಲ್ಲ. ನೀವು ಯಾವುದರ ಬಗ್ಗೆ ತಿಳ್ಕೋಬೇಕು ತಿಳಿಸಿ.

ರಾ—ನಿಮ್ಮ ಬ್ಯಾಂಕಿನಲ್ಲಿ ನಾವು ಹೇಗೆ ಹಣ ಉಳಿಸಬಹುದು, ಇತರೆ ಯಾವ ರೀತಿಯಲ್ಲಿ ಬ್ಯಾಂಕಿನಿಂದ ಪ್ರಯೋಜನ ಪಡೆಯಬಹುದು ಅಂತ ತಿಳಿಸಿ.

ಅ—ಒಂದು ವಿಷಯ, ನೀವು ತಪ್ಪು ತಿಳೀಬೇಡಿ, ನಿಮ್ಮ ಮಾಸಿಕ ಆದಾಯ ಎಷ್ಟು ?

ರಾ—ನನ್ನ ತಿಂಗಳಿನ ಆದಾಯ ಇಷ್ಟು ಅಂತ ಹೇಗೆ ಹೇಳಲಿ ಸರ್. ವಾರ್ಷಿಕ ಆದಾಯ ಇಷ್ಟು ಅಂತ ಬೇಕಾದರೆ ಹೇಳಬಹುದು.

ಅ—ಹಾಗಾದರೆ ನಿಮ್ಮ ವಾರ್ಷಿಕ ಆದಾಯವನ್ನೇ ಹೇಳಿ.

ರಾ—ಸುಮಾರು ಮೂರು ನಾಲ್ಕು ಸಾವಿರ ರೂಪಾಯಿ ಆಗತ್ತೆ ಸಾರ್.

ಅ—ನೀವು ಎಲ್ಲ ರೀತಿಯ ಉಳಿತಾಯ ಖಾತೆಗಳ ಬಗ್ಗೆ ತಿಳ್ಕೋಬೇಕೋ ಅಥವಾ ಕೆಲವುಗಳ ಬಗ್ಗೆ ಸಾಕೋ ?

ರಾ— ಎಲ್ಲ ರೀತಿಯ ಖಾತೆಗಳ ಬಗ್ಗೆ ಹೇಳಿ ಸರ್.

ಅ—ಮುಖ್ಯವಾಗಿ ನಮ್ಮ ಬ್ಯಾಂಕಲ್ಲಿ ನೀವು ನಿಮ್ಮ ಉಪಯೋಗಕ್ಕಾಗಿ C.D. ಖಾತೆ S.B. ಖಾತೆ ತೆಗೀಬಹುದು. ಸಾಧ್ಯವಾದರೆ K.D. ಖಾತೆನೂ ತೆಗೀಬಹುದು. ಜನತಾ ಡಿಪಾಸಿಟ್ ಸ್ಕೀಂ ಅಂತನೂ ಒಂದು ಖಾತೆ ಇದೆ.

ರಾ—ಇಷ್ಟು ಸಾಕು ಸಾರ್, ನೀವು ಜಾಸ್ತಿ ಹೇಳಬೇಡಿ ನಾನು ಮರೀತೀನಿ.

LESSON 12

PART 1

MODES OF SAVING

Ramaiah—Namaskaara, Sir.

Officer—Namaskaara, please sit here. Do you want any help from me ?

R—Yes Sir. I want quite a little help from you. I am new to banking. Can you tell me about it ? Kindly tell me about the use of the bank, Sir.

O—I will tell you, there is no objection to it. Tell me what is it that you want to know about.

R—How can we save money in your bank ? Tell me, in what other ways can we get benefitted by the bank ?

O—If you don't mind there is one thing I'd like to know. What is your monthly income ?

R—How can I tell you my exact monthly income ? If necessary, I can tell you what my annual income is.

O—If so, tell me your annual income.

R—It would be, approximately 3-4 thousand rupees. Sir.

O—Do you want to know about all types of savings accounts or a few is enough ?

R—Tell me about all types of accounts.

O—You can open for your use, a current account or an S. B. account, if possible you can open an R. D. account also. There is yet another account by name janatha deposit scheme.

R—This is enough, sir. please don't tell more. I will forget it.

ಅ—ಎಸ್.ಬಿ. ಖಾತೆ ಒಂದು ಅನುಕೂಲಕರವಾದ ಖಾತೆ. ಕನಿಷ್ಠ 5 ರೂಪಾಯಿಯ ಠೇವಣಿಯಿಂದ ಈ ಖಾತೆಯನ್ನು ಪ್ರಾರಂಭಿಸಬಹುದು. ಐದು ರೂಪಾಯಿಯಿಂದ ಎಷ್ಟು ಹಣ ಬೇಕಾದರೂ ಖಾತೆಯಲ್ಲಿ ಇಡಬಹುದು.

ರಾ—ಐದು ರೂಪಾಯಿ ಠೇವಣಿಗೆ ಚೆಕ್‌ಬುಕ್ ಸೌಲಭ್ಯನೂ ಒದಗಿಸಿಕೊಡ್ತೀರಾ ?

ಅ—ಚೆಕ್‌ಬುಕ್ ಸೌಲಭ್ಯಕ್ಕೆ, ಕನಿಷ್ಠ ಐವತ್ತು ರೂಪಾಯಿ ಠೇವಣಿಯನ್ನು ಖಾತೆಯಲ್ಲಿ ಇಡಲೇಬೇಕು.

ರಾ—ಈ ಖಾತೆಯಿಂದ ನಾನು ಯಾವಾಗ ಬೇಕಾದರೂ ಹಣ ವಾಪಸ್ ತೆಗೋಬಹುದಾ ? ಹಣಕ್ಕೆ ನಾನೇ ಬರಬೇಕೋ, ಯಾರನ್ನಾದರೂ ಕಳಿಸಬಹುದೋ ?

ಅ—ನೀವು ಖಾತೆಯಲ್ಲಿ ಐವತ್ತು ರೂಪಾಯಿ ಕನಿಷ್ಠ ಠೇವಣಿಯನ್ನು ಇಡಿ. ನಾವು ಚೆಕ್‌ಬುಕ್ ಕೊಡ್ತೀವಿ. ನೀವು ಯಾರಿಗೆ ಬೇಕಾದರೂ ಚೆಕ್ ಕೊಡಬಹುದು, ಹಣಕ್ಕಾಗಿ ಯಾರನ್ನು ಬೇಕಾದರೂ ಬ್ಯಾಂಕಿಗೆ ಕಳಿಸಬಹುದು.

ರಾ—ಈ ಖಾತೆಯಲ್ಲಿ ಎಷ್ಟು ಬಡ್ಡಿ ಕೊಡ್ತೀರಿ, ಸರ್ ?

ಅ—ಈ ಖಾತೆಗೆ ತಕ್ಕ ಬಡ್ಡಿ ಕೊಡ್ತೀವಿ.

ರಾ—ಆರ್. ಡಿ. ಖಾತೆ ಏನು, ಸಾರ್ ?

ಅ—ಈ ಖಾತೆಗೆ ನೀವು ಪ್ರತಿ ತಿಂಗಳು ಹಣ ಕಟ್ತೀರಿ, ಐದೋ, ಹತ್ತೋ, ಐವತ್ತೋ, ನೂರೋ. ಹೀಗೆ ಅದು ಒಮ್ಮೆಲೇ ಒಟ್ಟಾಗಿ ಬಡ್ಡಿ ಸಹಿತ ನಿಮಗೆ ಸಿಕ್ಕುತ್ತೆ.

ರಾ—ಈ ಖಾತೆಯನ್ನು ಮಧ್ಯದಲ್ಲೇ ಮುಚ್ಚಬಹುದೋ, ಮುಚ್ಚಬಾರದೋ.

ಅ—ಈ ಖಾತೆಯನ್ನು ಯಾವಾಗ ಬೇಕಾದರೂ ನಿಲ್ಲಿಸಬಹುದು. ಹಣಾನೂ ವಾಪಸ್ ಸಿಕ್ಕುತ್ತೆ. ಆದರೆ ಬಡ್ಡಿ ಎರಡು ಪರ್ಸೆಂಟ್ ಕಡಿಮೆ ಕೊಡ್ತೀವಿ. ಇನ್ನೊಂದು ಖಾತೆ ಇದೆ, ಜನತಾ ಡಿಪಾಸಿಟ್ ಸ್ಕೀಂ ಅಂತ.

ರಾ—ಜನತಾ ಸರಕಾರದ ಖಾತೇನಾ ಸಾರ್ ?

ಅ—ಛೆ ! ಅದಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಹೆಸರು ಮಾತ್ರ ಒಂದೇ, ಅಷ್ಟೇ.

ರಾ—ಈ ಖಾತೆಯ ವಿವರವನ್ನು ಸ್ವಲ್ಪ ಹೇಳಿ, ಸರ್ ?

ಅ—ಈ ಖಾತೆಯಲ್ಲಿ ಕನಿಷ್ಠ ಎರಡು ರೂಪಾಯಿ ಠೇವಣಿಯನ್ನು ಇಡಬೇಕು. ಈ ಖಾತೆಯಲ್ಲಿ ಬ್ಯಾಂಕಿಗೆ ನೀವು ಬರಬೇಡಿ, ಬ್ಯಾಂಕ್ ನಿಮ್ಮ ಮನೆಗೆ ಬರತ್ತೆ. ನೀವು ನಮ್ಮ ಬ್ಯಾಂಕಲ್ಲಿ ಒಂದು ಖಾತೆ ತೆಗೀತೀರಿ, ನಾವು ನಿಮಗೆ ಒಂದು ಡಬ್ಬಿ ಕೊಡ್ತೀವಿ. ಆ ಡಬ್ಬಿ ನಿಮ್ಮ ಮನೇಲೇ ಇರುತ್ತೆ. ಆಗಾಗ ಆ ಡಬ್ಬಿಗೆ ನೀವು ಹಣ ಹಾಕಿ, ಹದಿನೈದು ದಿನಕ್ಕೆ ಒಮ್ಮೆ ನಿಮ್ಮ ಮನೆಗೆ ನಮ್ಮ ಅಧಿಕೃತ ಏಜೆಂಟ್

O—S.B. account is a convenient account with a minimum deposit of rupees 5 you can open an account. You can keep any amount of money, but not less than five in your account.

R—For five rupees will you let me have the cheque book facility also ?

O—For to avail yourself of the cheque book facility a minimum of fifty rupees has to be deposited.

R—Can I withdraw money from this accountat any time ? Should I come myself for money or can send somebody ?

O—You keep a minimum of fifty rupees as deposit in your account. We will give a cheque book to you. You can give anybody a cheque. You can send anybody to the bank for money.

R—How much interest do you give in this account, Sir ?

O—In this account, we give appropriate interest.

R—What is RD account, Sir ?

O—You'll pay amounts like rupees five, ten, fifty, hundred to this account. You will get the whole amount including interest, at a time.

R—Can I close this account in middle ?

O—You can close this account at any time, you will get back the money also. But we will give 2% interest less. There is another account by name janatha deposit scheme.

R—Is it a janatha govt. account, Sir ?

O—No. There is no relation between that and this. Only the name is the same.

R—Please give me the details of this account, Sir.

O—A minimum balance of ruppes two is to be kept in this account in this account. You do not come to the bank. Bank will come to you. Suppose that you open an account in our bank, we will give you a box. That box will be in your house itself. Keep putting money into the box, often

★

ಬರ್ತ್ತಾರೆ. ನಿಮ್ಮ ಎದುರೇ ಅವರು ಆ ಡಬ್ಬಿಯನ್ನು ತೆರೀತಾರೆ. ಆ ಹಣ ಇಲ್ಲಿಗೆ ತರ್ತ್ತಾರೆ. ಆ ಹಣಕ್ಕೆ ನಿಮಗೆ ಮನೆಯಲ್ಲೇ ರಸೀತಿ ಕೊಡ್ತಾರೆ. ಈ ಖಾತೆಯಲ್ಲಿ ನಿಮಗೆ ಬಡ್ಡಿ ಜಾಸ್ತಿ ಸಿಕ್ಕತ್ತೆ.

ರಾ—ಈ ಖಾತೆಯಿಂದ ನಾನು ಯಾವಾಗಬೇಕಾದರೂ ಹಣ ತೆಗೋಬಹುದಾ ಸರ್.

ಅ—ಈ ಖಾತೆಯಿಂದ ಏಳು ವರ್ಷದ ತನಕ ಹಣ ಸಿಕ್ಕಲ್ಲ.

ರಾ—ಹಾಗಾದರೆ ನಾನು ನನ್ನ ಹೆಸರಲ್ಲಿ ಒಂದು ಎಸ್.ಬಿ. ಖಾತೆ ತೆಗೀತೀನಿ, ನನ್ನ ಹೆಂಡತಿಯ ಹೆಸರಲ್ಲಿ ಆರ್.ಡಿ. ಖಾತೆ ತೆಗೀತೀನಿ, ನನ್ನ ಮಗನ ಹೆಸರಲ್ಲಿ ಒಂದು ಜನತಾ ಖಾತೆ ತೆಗೀತೀನಿ, ಸರ್.

ಅ—ಆಗಲಿ ತುಂಬಾ ಸಂತೋಷ. ಈ ಎಲ್ಲ ಫಾರಂಗಳನ್ನು ತೆಗೋಳಿ, ತುಂಬಿ.

ರಾ—ಅದೆಲ್ಲ ಕೊಡಿ ಸರ್. ನಾಳೆ ನಿಮ್ಮನ್ನು ಮತ್ತೆ ಭೇಟಿ ಆಗ್ತೀನಿ, ಸರ್.

ಅ—ನಮಸ್ಕಾರ.

ರಾ—ನಮಸ್ಕಾರ.

once in 15 days an official agent of our bank will come to your house He will open the box right in front of you. He will bring that money here. He will give you a receipt for that money in your house. In this account, Sir ?

R—Can I take money at any time from this account, Sir ?

O—No, you won't get any money from this account for seven years.

R—If that is the case, I will open an S.B. account in my name, an R.D. account in my wife's name. And a janatha deposit scheme in my son's name.

O—Allright Sir, fine. Please take all these forms. Fill them in.

R—Give me all of them, Sir. I will meet you again tomorrow, Sir.

O—Namaskaara.

R—Namaskaara.

ಅಭ್ಯಾಸ

I. ಬ್ಯಾಂಕಿನಲ್ಲಿ ಹೇಗೆ ಹೇಗೆ ಉಳಿಸಬಹುದು ?

II. ಪ್ರವಾಸಿಯು ಪ್ರವಾಸಿ ಚೆಕ್ ಮುರಿಸಬೇಕು, ಸಹಾಯ ಮಾಡಿ.

III. 'ಸ್ಟೇಟ್ ಬ್ಯಾಂಕ್ ಶಾಲೆಗೆ ಬರುತ್ತೆ' ಈ ಯೋಜನೆಯ ವಿವರವನ್ನು ಹತ್ತು ಸಾಲುಗಳಲ್ಲಿ ಬರೆಯಿರಿ.

IV. ಮಾರ್ಕೆಟ್ಟಿನಲ್ಲಿ ತರಕಾರಿಯವಳ ಮತ್ತು ನಿಮ್ಮ ಸಂಭಾಷಣೆಯನ್ನು ಬರೆಯಿರಿ.

V. ಚೆಕ್ ಪುಸ್ತಕದ ಸುರಕ್ಷತೆಯ ವಿವರ ತಿಳಿಸಿ.

VI. ನಿಮ್ಮ ಬ್ಯಾಂಕಿನಲ್ಲಿ ಹೊಸದಾಗಿ ಹೇಗೆ ಖಾತೆ ಪ್ರಾರಂಭ ಮಾಡಬಹುದು.

VII. ನಿಮ್ಮ ಮತ್ತು ಬೇರೆ ಶಾಖೆಯ ಮೇನೇಜರ್ ಮಧ್ಯದ ಟೆಲಿಫೋನ್ ಸಂಭಾಷಣೆ ಬರೆಯಿರಿ.

VIII. ಈ ಪದಗಳನ್ನು ಮಾದರಿಯಂತೆ ಬದಲಾಯಿಸಿ ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

ಮಾದರಿ : ಅತಿಥಿ — ಅತಿಥಿಗೆ — ಅತಿಥಿಯನ್ನು — ಅತಿಥಿಯಿಂದ — ಅತಿಥಿಯಲ್ಲಿ

1. ಉಳಿತಾಯ
2. ಉತ್ತರ
3. ತಿಂಗಳು
4. ಕೆಲವರು
5. ಬೀಗ
6. ಯೋಜನೆ
7. ಕುರ್ಚಿ
8. ತಲೆ
9. ನೀರು
10. ಅನ್ನ
11. ಗಂಡ
12. ಪ್ರಯಾಣ
13. ಮದುವೆ
14. ಒಡವೆ
15. ಅಸಲು
16. ಬಡ್ಡಿ

XI. ಸರಿಯಾದ ಅಂಕೆಯನ್ನು ಗುರುತಿಸಿ.

1	ಅರವತ್ತೆಂಟು	48	86	68	58
2	ನಲವತ್ತಾರು	56	36	66	46
3	ಇಪ್ಪತ್ತೊಂಭತ್ತು	29	92	79	59
4	ಎಂಭತ್ತೈದು	58	85	75	55
5	ಮೂವತ್ತೇಳು	27	37	47	57
6	ನಾಲ್ಕುನೂರ ಮೂವತ್ತೇಳು	347	437	743	734
7	ಒಂಭೈನೂರ ಎಪ್ಪತ್ನಾಲ್ಕು	215	512	521	121
8	ಎಂಟುನೂರ ಮೂವತ್ತೈದು	385	853	358	835
9	ಆರುನೂರ ಹದಿನಾರು	661	616	166	666
10	ಐದುನೂರ ಹನ್ನೆರಡು	215	512	521	125
11	ಎರಡು ಸಾವಿರದ ನಾಲ್ಕುನೂರ ಏಳು	2704	2407	7042	2704
12	ಎಂಟು ಸಾವಿರದ ಏಳುನೂರ ಮೂವತ್ನಾಲಕ್ಕು	4378	8374	7438	8734
13	ಏಳುಸಾವಿರದ ಒಂದನೂರ ಐವತ್ತೇಳು	7157	7517	1577	7715
14	ಒಂದುಸಾವಿರದ ಒಂಭೈನೂರ ಹತ್ತೊಂಭತ್ತು	1919	1991	1199	9911
15	ಆರು ಸಾವಿರದ ಆರನೂರ ಅರವತ್ತಾರು	6066	6006	6606	6666
16	ಹದಿನೆಂಟು ಸಾವಿರದ ನಾಲ್ಕುನೂರ ಎರಡು	18,204	18,402	18,042	18,240
17	ಇಪ್ಪತ್ತೈದು ಸಾವಿರದ ಐದುನೂರ ಮೂವತ್ನಾಲ್ಕು	25,543	25,354	25,435	25,534
18	ತೊಂಭತ್ತೆಂಟು ಸಾವಿರದ ನಾಲಕ್ಕು	98,004	98,400	98,040	98,940
19	ಎಂಭತ್ತು ಸಾವಿರದ ಎಳು	80,070	807,00	80,007	80,077
20	ಇಪ್ಪತ್ತೊಂಭತ್ತು ಸಾವಿರದ ನಾಲ್ಕುನೂರ ಮೂವತ್ತೊಂಭತ್ತು	29,349	29,439	29,943	29,394

ಪಾಠ ಹದಿಮೂರು

ಭಾಗ ಒಂದು

ಸಾಲ ತೆಗೆದುಕೊಳ್ಳೋದು ಸುಲಭ, ವಾಪಸ್ ಕೊಡೋದು ಕಷ್ಟ

ಅಧಿಕಾರಿ—ನಮಸ್ಕಾರ ನಾಯಕರೇ.

ನಾಯಕ—ನಮಸ್ಕಾರ ಸರ್

ಅ—ಈಗ ಏನು ಮತ್ತೆ ಸಾಲ ಬೇಕಾ ನಾಯಕರೇ ?

ನಾ—ಹಾಗೇನಿಲ್ಲ ಸರ್, ನಾವು ನಿಮ್ಮ ಹತ್ತಿರ ಬರೋದು ಬರೇ ಸಾಲಕ್ಕೇ ಅಂತ ನಿಮ್ಮ ಅಭಿಪ್ರಾಯನಾ ?

ಅ—ಇಲ್ಲವಾ ಮತ್ತೆ. ನಾನು ನಿಮ್ಮನ್ನ ಆರು ವರ್ಷದಿಂದ ಬಲ್ಲೆ. ನೀವು ಯಾವಾಗಲೂ ಬರೋದು ಸಾಲಕ್ಕೇನೇ. ನಿಮ್ಮ ಹಳ್ಳಿಯವರೆಲ್ಲರೂ ಬರೋದೂ ಸಾಲಕ್ಕೇನೇ. ಹೊಲಕ್ಕೆ ಅಂತ ಸಾಲ ತೆಗೊಳ್ಳೋದು ಮಗಳದೋ ಮಗನದೋ ಮದುವೆ ಮಾಡೋದು. ಇಲ್ಲ ಮಾರವಾಡಿಯ ಹಳೆಯ ಸಾಲ ತೀರಿಸೋದು. ಜೀವಮಾನವೆಲ್ಲ ಇದೇ ಮಾಡ್ತೀರಿ. ಇದೇ ನಿಮ್ಮ ಹಣೆಯಬರಹ.

ನಾ—ಯಾಕೋ ನಿಮಗೆ ತುಂಬಾ ಬೇಜಾರ ಆಗಿದೆ ಅಲ್ಲವಾ, ಸರ್ ?

ಅ—ಬೇಜಾರನೂ ಇಲ್ಲ, ಗೀಜಾರನೂ ಇಲ್ಲ, ತಲೆನೋವು ಅಷ್ಟೆ. ನಿಮ್ಮಿಂದ ಬಾಕಿ ವಸೂಲು ಮಾಡೋದರಲ್ಲಿ ನಾವು ಸಾಯ್ತೀವಿ.

ನಾ—ತಲೆ ನೋವು ಬೇಡ ಸಾರ್, ನಾನು ಹೇಳೋದನ್ನು ಸ್ವಲ್ಪ ಕೇಳಿ, ಸರ್.

ಅ—ನೀವು ಹೇಳೋದನ್ನ ಏನು ಕೇಳಬೇಕು ಸಾರ್. ಜಮೀನು ಅಭಿವೃದ್ಧಿ ಮಾಡೋದಕ್ಕೆ, ಎತ್ತುಕೊಂಡು ಕೊಳ್ಳೋದಕ್ಕೆ ಅಂತ ಸಾಲ ತೆಗೋತೀರಿ. ನಮ್ಮ ತನಿಖಾಧಿಕಾರಿಗೆ ನಿಮ್ಮ ಹಳ್ಳಿಯಲ್ಲಿ ನಿಮ್ಮದು ಅಂತ ಜಮೀನು ಕಾಣಲ್ಲ, ಎತ್ತು ಕಾಣಲ್ಲ. ನಿಮಗೆ ಜಾಮೀನು ಆದೋರ ಗತಿ ನಿಮಗೇ ಗೊತ್ತು. ಕಣ್ಣು ಕಾಣದೋರು, ಕಿವಿ ಕೇಳದೋರು, ಕಣ್ಣು ಕಾಣದೇ ನಿಮ್ಮಂಥವರಿಗೆ ಸಾಲ ಕೊಡಬೇಕು. ನಿಮಗೆ ಇತ್ತೀಚೆಗೆ ಯಾವುದಾದರೂ ಹೊಸ ಸಾಲದ ಹೆಸರು ತಿಳೀತಾ, ಹೇಗೆ ?

ನಾ—ಸಾರ್ ನನ್ನ ಬಗ್ಗೆ, ನಮ್ಮ ಊರಿನವರ ಬಗ್ಗೆ ಯಾರೋ ನಿಮಗೆ ಚಾಡಿ ಚುಚ್ಚಾರೆ ಸಾರ್. ನೀವು ಅಂಥಾ ಜನರ ಮಾತನ್ನ ಕೇಳೋದು, ನನ್ನನ್ನು ನಮ್ಮ ಹಳ್ಳಿಯವರನ್ನು ಈ ರೀತಿ ಬೈಯ್ಯೋದು ಸರಿಯಲ್ಲ ಸರ್. ನೀವೇನು ಸಾಲ ಬಿಟ್ಟಿ ಕೊಡಲ್ಲ. ನಾವು ನಿಮಗೆ ಬಡ್ಡಿ ತೆರೋದು ಜ್ಞಾಪಕ ಇದೆಯಾ ?

ಅ—ನನ್ನ ಮಾತಿಗೆ ಕೋಪ ಮಾಡ್ಕೋಬೇಡಿ, ನಾಯ್ಕರೇ.

LESSON 13

PART 1

EASY TO TAKE LOAN, TO REPAY DIFFICULT

Officer—Namaskaara, Mr. Naik.

Naik—Namaskaara, Sir.

O—Do you want a loan again now ?

N—Nothing of that sort, Sir. Do you think that we come to you only for loans ?

O—Then what ? I know you for the past six years. You always come only for loan. All your villagers also come only for loan. You take loan for cultivating the land. But you either use it for the marriage of a son or a daughter, or else repay an old loan of the Marvadi. You will do the same thing through out life. This is your fate.

N—You are somehow, not happy. Aren't you, Sir ?

O—No I'm not unhappy ; just a headache. In getting the loan returned from you, we have a tough time, that is all.

N—You don't have to have a headache, Sir. Please listen to what I say, Sir.

O—What is there to hear from you ? You take loans in order to develop the land, in order to purchase oxen. Our inspection officer can see neither your land nor your oxen. You know the fate of your own gaurantor. Only the blind or the deaf have to advance loans to people like you. Did you come to know the name of any new loan recently ?

N—Sir, someone has told tales to you about me and our villagers. It is not proper on your part to abuse me and our villagers by listening to people like them. You have not given loans free to us. You are well aware that we are paying interest ?

O—Don't get angry because of my words, Mr. Naik.

ನಾ—ನಿಮ್ಮ ಹತ್ತಿರ ಸಾಲ ತೆಗೊಳ್ಳೋದೂ ಬೇಡ. ಬಡ್ಡಿ ತೆರೋದೂ ಬೇಡ. ನಿಮ್ಮ ಮಾತು ಕೇಳೋದೂ ಮೊದಲೇ ಬೇಡ. ಮುಂದಿನ ಸೋಮವಾರ ನಾನು ಮತ್ತೆ ಬರ್ತೀನಿ. ನಮ್ಮ ಹಳ್ಳಿ ಜನ ಕೊಡೋದು ಎಷ್ಟು ಸಾಲ, ಎಷ್ಟುಬಡ್ಡಿ ಬಾಕಿ ಇದೆ, ಎಲ್ಲ ಲೆಕ್ಕಹಾಕಿ. ಅದನ್ನೆಲ್ಲ ಅವತ್ತಿಂದ ಒಂದು ತಿಂಗಳ ಒಳಗೆ ತೀರಿಸೋದು ನಮ್ಮ ಜವಾಬ್ದಾರಿ. ನಾನಿನ್ನು ಬರ್ತೀನಿ.

ಅ—ಕಾಫಿ ಕುಡೀರಿ, ನಾಯ್ಕರೇ.
ನಾ—ನಿಮ್ಮಲ್ಲಿ ಕಾಫಿ ಕುಡಿಯೋದೂ ಬೇಡ, ಇಲ್ಲಿಗೆ ಬರೋದೂ ಬೇಡ, ಬರ್ತೀನಿ ನಮಸ್ಕಾರ.
ಅ—ನಮಸ್ಕಾರ.

N—We neither want to take loans from you, nor do we want to pay interest to you. We don't want to listen to your words, in the first place. I will come again next monday. Please calculate how much loan and interest our villagers have to pay you. It is our responsibility to return all that within a month. I will take leave.

O—Please take coffee, Mr. Naik.

N—I want neither to take coffee, nor even to come here. See you Namaskaara.

O—Namaskaara.

PART 2

SURVEY

Officer—Namaskaara, Mr. Patel.

Patel—Namaskaara. It is the good fortune of the village that bank officials are coming to the village. Please come in, Sir. Let us go to the panchayt office. We'll talk there.

O—It is the duty of bankers to come to the village and help the villagers. It is you and not the government, that is paying us our salary. Now can you call the village worker, and the village accountant here.

P—They will be in the panchayat office, Sir.

O—What are the common needs of your villagers, Mr. Patel ?

P—We are not getting drinking water. There are no wells. It is usual for the cattle to walk 3 miles for water. We grow only rain crops.

O—Do you know anything about the rearing of new high breed crops.

P—But to grow such crops facilities are needed. Above all it should rain on time. All our crops are rain-dependent.

O—Take loans from us. Grow good crops. Get more yield.

P—You will of course advance loans. But no one repays on time.

O—What do you mean by on time ?

P—You see. Now the rainy season will start. We have to sow seeds. Then after a month we have to do transplantation. Then we have to feed the plants with fertilisers.

ಭಾಗ ಎರಡು

ಪರಿವೀಕ್ಷಣೆ

ಅಧಿಕಾರಿ— ನಮಸ್ಕಾರ, ಪಟೇಲರೇ.

ಪಟೇಲ— ನಮಸ್ಕಾರ. ಬ್ಯಾಂಕಿನೋರು ಹಳ್ಳಿಗೆ ಬರೋದು ಹಳ್ಳಿಯ ಅದೃಷ್ಟಾನೇ. ಬನ್ನಿ ಸ್ವಾಮಿ ಪಂಚಾಯ್ತಿ ಆಫೀಸಿಗೆ ಹೋಗೋಣ, ಅಲ್ಲೇ ಮಾತಾಡೋಣ.

ಅ— ಈಗಿನ ಕಾಲದಲ್ಲಿ ಬ್ಯಾಂಕಿನೋರು ಹಳ್ಳಿಗೆ ಬರೋದು, ಸಹಾಯ ಮಾಡೋದು, ಬ್ಯಾಂಕಿನವರ ಕರ್ತವ್ಯ. ನಮಗೆ ಸಂಬಳ ಕೊಡೋದು ಸರಕಾರ ಅಲ್ಲ, ನೀವು. ಈಗ ನಿಮ್ಮ ಹಳ್ಳಿಯ ಗ್ರಾಮಸೇವಕರನ್ನು ಗ್ರಾಮಲೆಕ್ಕಿಗರನ್ನು ಇಲ್ಲಿಗೆ ಕರೆಯೋದಕ್ಕೆ ಸಾಧ್ಯನಾ ?

ಪ— ಅವರು ಇರೋದೇ ಪಂಚಾಯ್ತಿ ಆಫೀಸಲ್ಲಿ ಸರ್.

ಅ— ನಿಮ್ಮ ಊರಿನ ಜನಗಳ ಸಾಮಾನ್ಯ ಅವಶ್ಯಕತೆಗಳು ಏನು, ಪಟೇಲರೇ ?

ಪ— ಕುಡಿಯೋದಕ್ಕೆ ನೀರು ಸಿಕ್ಕಲ್ಲ. ಭಾವಿಗಳು ಇಲ್ಲ. ಇನ್ನು ದನಕರುಗಳು ನೀರಿಗೆ 3 ಮೈಲಿ ನಡೆಯೋದು ಮಾಮೂಲು. ನಾವೆಲ್ಲ ಬೆಳೆಯೋದು ಮಳೆಯ ಫಸಲುಗಳು.

ಅ— ನಿಮಗೆ ಹೊಸ ತಳಿ ಹೈಬ್ರಿಡ್ ಬೆಳೆಗಳು ಬೆಳೆಯೋದು ಗೊತ್ತಾ, ಸ್ವಾಮಿ ?

ಪ— ಆದರೆ ಅದೆಲ್ಲ ಬೆಳೆಯೋದಕ್ಕೆ ಅನುಕೂಲತೆಗಳು ಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಸಮಯಕ್ಕೆ ಸರಿಯಾಗಿ ಮಳೆ ಬರಬೇಕು. ನಮ್ಮವು ಎಲ್ಲ ಮಳೆ ಆಧಾರಿತ ಬೆಳೆಗಳು.

ಅ— ನಮ್ಮಿಂದ ಸಾಲ ತೆಗೋಳಿ. ಒಳ್ಳೆ ಬೆಳೆ ಬೆಳೆಯಿರಿ. ಹೆಚ್ಚು ಇಳುವರಿ ಪಡೆಯಿರಿ.

ಪ— ನೀವೇನೋ ಸಾಲ ಕೊಡ್ತೀರಿ, ಆದರೆ ಸಮಯಕ್ಕೆ ಸರಿಯಾಗಿ ಕೊಡೋದಕ್ಕೆ ಯಾರೂ ಇಲ್ಲ.

ಅ— ಸಮಯಕ್ಕೆ ಸರಿಯಾಗಿ ಅಂದರೆ ಏನು ?

ಪ— ನೋಡಿ, ಈಗ ಮಳೆಗಾಲ ಶುರು ಆಗತ್ತೆ, ಬಿತ್ತನೆ ಮಾಡಬೇಕು. ಆಮೇಲೆ ಒಂದು ತಿಂಗಳಿಗೆ ನಾಟಿ ಮಾಡಬೇಕು. ಆಗ ಅದಕ್ಕೆ ಗೊಬ್ಬರಾನೂ ಹಾಕಬೇಕು.

ಅ—ನಿಮ್ಮ ಹೊಲಗಳಲ್ಲಿ, ಬೇರಿಗೆ, ಕಾಂಡಕ್ಕೆ, ತೆನೆಗೆ, ಎಲೆಗೆ, ಹೂವಿಗೆ, ಕಾಳಿಗೆ, ರೋಗ ಬರುತ್ತಾ ?

ಪ— ಹೌದು ಸ್ವಾಮಿ, ಎಲ್ಲದಕ್ಕೂ ರೋಗ ಬರುತ್ತೆ. ಅದಕ್ಕೆ ಬೇರೆ ಔಷಧಿ ಹೊಡೀಬೇಕು ಕಳೆ ಕೀಳಬೇಕು. ಇದಕ್ಕೆಲ್ಲ ತುಂಬಾ ಖರ್ಚು ಬರತ್ತೆ ಮಳೆಗಾಲದಲ್ಲಿನ ಸಾಲವನ್ನು ಚಳಿಗಾಲದಲ್ಲಿ ತೀರಿಸಬಹುದು.

ಅ—ನಮ್ಮ ಸಹಾಯವನ್ನು ಇದಕ್ಕೆಲ್ಲ ತೆಗೋಬಹುದಲ್ಲ.

ಪ—ನಿಮ್ಮ ಸಹಾಯನಾ ? ಚಳಿಗಾಲದ ಸಾಲ ಮಳೆಗಾಲಕ್ಕೆ ಬರುತ್ತೆ. ಮಳೆಗಾಲದ ಸಾಲ, ಬೇಸಗೆಯ ಕಾಲಕ್ಕೆ ಬರತ್ತೆ. ಸಮಯಕ್ಕೆ ಸರಿಯಾಗಿ ಏನೂ ಸಿಗಲ್ಲ. ಊಟಕ್ಕಿಲ್ಲದ ಉಪ್ಪಿನಕಾಯಿ...... ಅಂತ ಕನ್ನಡದಲ್ಲಿ ಗಾದೆ ಇದೆ, ಅದು ಗೊತ್ತೇ ಸ್ವಾಮೀ.

ಅ—ನೀವು ವರ್ಷಕ್ಕೆ ಎಷ್ಟು ಬೆಳೆ ಬೆಳೆಯೋದು.

ಪ—ನಾವು ವರ್ಷಕ್ಕೆ ಒಂದೇ ಬೆಳೆ ಬೆಳೆಯಲ್ಲ. ಎರಡು ಬೆಳೆ ಬೆಳೆಯೋದು ಸಾಧ್ಯ. ಛಳಿಗಾಲದಲ್ಲಿ ಒಂದು ಬೆಳೆ ಹಾಕ್ತೀವಿ, ಅದನ್ನು ಬೇಸಿಗೆ ಕಾಲದಲ್ಲಿ ಕಟಾವ್ ಮಾಡ್ತೀವಿ. ಮಳೆಗಾಲದಲ್ಲಿ ಒಂದು ಬೆಳೆ ಹಾಕ್ತೀವಿ ಅದನ್ನು ಛಳಿಗಾಲದಲ್ಲಿ ಕಟಾವ್ ಮಾಡ್ತೀವಿ.

ಅ—ನೋಡಿ, ಇವೆಲ್ಲ ಸಹಜ ತೊಂದರೆಗಳು. ಇಂತಹ ತೊಂದರೆಗಳು ಮುಂದೆ ಬರಬಾರದು. ಅದೇ ನಮ್ಮ ಉದ್ದೇಶ. ಅದಕ್ಕಾಗಿ ಈಗ ನಿಮ್ಮ ಹಳ್ಳಿಗೆ ನಮ್ಮ ವ್ಯವಸಾಯ ತಾಂತ್ರಿಕ ಅಧಿಕಾರಿಗಳು ಬರ್ತಾರೆ. ಇನ್ನು ಮೇಲೆ ನೀವು ನಗರಕ್ಕೆ ಬರೋದೇ ಬೇಡ. ಅವರೇ ಬೆಳೆ, ಮಳೆಗಾಲಗಳಿಗೆ ಸರಿಯಾಗಿ ಬರ್ತಾರೆ.

ಪ— ಅಭಿವೃದ್ಧಿ ಮಾಡಕ್ಕೆ ಹಳ್ಳಿಗಳನ್ನು ತಗೋತೀರಿ, ಆ ಸ್ಕೀಮಿನ ವಿಷಯ, ಏನು, ಸಾರ್ ?

ಅ—ನಮ್ಮ ಈ ಭೇಟಿಯ ಉದ್ದೇಶಾನೇ ಇದು. ಇವರೇ ನಿಮ್ಮ ಹಳ್ಳಿಯ ಸರ್ವೇ ಅಧಿಕಾರಿಗಳು. ಇವರು ವಿವರ ಸಂಗ್ರಹಿಸಕ್ಕೆ ನೀವೆಲ್ಲ ಸಹಾಯ ಮಾಡಬೇಕು.

ಪ—ಆಗಲಿ ಸರ್. ಅವರು ಬುಧುವಾರ ಇಲ್ಲೇ ಇರಲಿ, ನಾವು ಏನೇನು ಸಹಾಯ ಬೇಕೋ ಅದೆಲ್ಲ ಸಹಾಯನೂ ಮಾಡ್ತೀವಿ.

ಅ—ನಮಸ್ಕಾರ.

ಪ—ನಮಸ್ಕಾರ.

O—In your fields, do pests attack the roots, trunk, leaves, flowers and grains ?

P—Yes Sir, they will all be attacked by pests. We have to spray medicine on the diseased plants. We have to remove the weeds. All that involves lot of expenditure. We can return the loan of the rainy season in winter.

O—You can take our help for all such situations.

P—Your help ! If the loan is requested in winter, it'll arrive in the rainy season, and if it's requested in the rainy season, it will come in summer. We get nothing on time. You know the Kannada proverb.......

O—How many crops do you grow in a year ?

P—We are not growing only one crop in a year. We can grow two crops in a year. We sow a crop in the winter, and harvest it in summer. We sow one crop in the rainy season and harvest it in winter.

O—You see. All these are usual troubles. Such inconveniences should not come in the way in future. That is our aim. That's why now our agricultural technical officer will come to your village. In future you need not come to the city. They will come themselves at particular, required times, the time of rains and harvesting.

P—You select villages for your developmental programme. What are the details about that scheme, Sir ?

O—That infact is the aim of this visit. This is your village survey officer. You have to help him collect the details.

P—O.K. Sir. Let him be here for a week. We will give all the help that is required.

O—Namaskaara.

P—Namaskaara.

ಭಾಗ ಮೂರು

ದಿನಸಿ ಅಂಗಡಿ

ಶೆಟ್ಟರು—ನಮಸ್ಕಾರ ಮ್ಯಾನೇಜರೇ.
ಮೇನೇಜರ್—ನಮಸ್ಕಾರ ಶೆಟ್ಟರೇ. ಚೆನ್ನಾಗಿದ್ದೀರಾ ?

ಶೆ—ಯಾಕೆ ಸಾರ್, ಅಪರೂಪವಾಗಿ ನನಗೆ ಮುಖ ತೋರಿಸುತ್ತೀರಿ ?
ಮೇ—ದಿನಾ ಮುಖಾ ತೋರಿಸೋದಕ್ಕೆ ಆಗೋದಿಲ್ಲ. ಅದಕ್ಕೆ ಅಪರೂಪವಾಗಿ ತೋರಿಸ್ತೀನಿ.

ಶೆ—ನಮ್ಮಲ್ಲಿ ಏನಾದರೂ ಕೊಂಡುಕೊಳ್ಳೋದಕ್ಕೆ ಇದೆಯಾ ಸಾರ್ ?
ಮೇ—ಹೌದು ದಿನಸಿ ಸಾಮಾನುಗಳು ಬೇಕು. ಈ ಪಟ್ಟಿ ತಗೊಳ್ಳಿ. ಈ ಪಟ್ಟೀಲಿ ಬರೆದಿರೋದನ್ನು ಕೊಡಿ.
ಶೆ—ಈ ಪಟ್ಟಿಯಲ್ಲಿ ಬರೆದಿರೋದನ್ನು ಓದೋದಕ್ಕೆ ನನಗೆ ಬರಲ್ಲ ಸಾರ್, ಎಲ್ಲ ಇಂಗ್ಲೀಷ್‌ನಲ್ಲಿದೆ. ನೀವು ಹೇಳಿ ನಾನು ಕೊಡ್ತೀನಿ.

ಮೇ—ಎಲ್ಲಾ ಒಳ್ಳೇ ಸಾಮಾನನ್ನು ಕೊಡ್ಬೇಕು ಶೆಟ್ರೇ. ಹುಳಿತಿರೋದನ್ನು ಕೊಳೆತಿರೋದನ್ನು ಕೊಡಬಾರದು.
ಶೆ—ಹುಳಿತಿರೋದನ್ನು ಕೊಳೆತಿರೋದನ್ನು ಇಟ್ಕೊಳ್ಳೋದಕ್ಕೆ ಆಗತ್ತಾ ಸಾರ್. ಎಲ್ಲಾ ಹೊಸ ಮಾಲನ್ನೆ ನಾವು ಮಾರೋದು.

ಮೇ—ಎರಡು ಕೆ.ಜಿ. ತೊಗರಿಬೇಳೆ, ಒಂದು ಕೆ.ಜಿ. ಹೆಸರುಬೇಳೆ, ಅರ್ಧ ಕೆ.ಜಿ. ಕೊತ್ತಂಬರಿ, ಬೇರೆ ಬೇರೆ ತೂಕ ಮಾಡಬೇಕು. ಭದ್ರವಾಗಿ ಪ್ಯಾಕ್ ಮಾಡೋದಕ್ಕೆ ಹೇಳಿ. ಪ್ಯಾಕೆಟ್ ಒಡೀಕೊಬಾರದು.
ಶೆ—ಅದಕ್ಕೇನಂತೆ, ಪಾಲಿಥೀನ್ ಚೀಲದಲ್ಲಿ ಪ್ಯಾಕ್‌ಮಾಡೋಣ. ಹರಿಯೋದೂ ಇಲ್ಲ, ಒಡೆಯೋದೂ ಇಲ್ಲ.

ಮೇ—ನಿಮ್ಮಲ್ಲಿ ಹಸನಾದ ಮಸಾಲೆ ಸಾಮಾನು, ಅಂದರೆ ಚಕ್ಕೆ, ಲವಂಗ, ಮೆಣಸು, ಜೀರಿಗೆ, ದಾಲ್ಚಿನ್ನಿ ಗಸಗಸೆ, ಸಾಸುವೆ ಇವೆಯೋ ?
ಶೆ—ನೋಡಿ ಸ್ವಾಮಿ, ನಮ್ಮಲ್ಲಿ ಮಸಾಲೆ ಸಾಮಾನು ಬೇರೆ ಬೇರೇನೂ ಇದೆ, ಎಲ್ಲಾ ಮಸಾಲೆ ಸಾಮಾನುಗಳನ್ನೂ ಒಟ್ಟಾಗಿ ಸೇರಿಸಿರೋದೂ ಪ್ಯಾಕೆಟ್‌ಗಳು ಇವೆ. ನಿಮಗೆ ಯಾವುದು ಕೊಡೋಣ ಹೇಳಿ ?

PART 3

GROCERY SHOP

Shetty—Namaskaara, Mr. Manager.

Manager—Namaskaara, Mr. Shetty. How are you ?

S—Why ? You are seen very rarely, Sir.

M—I can't show my face daily. That is why, I see you rarely.

S—Is there anything you want to buy here, Sir ?

M—Yes, I have to purchase some provision. Take this list. Give whatever is written in this list.

S—I don't know how to read what is written in this list, Sir. It is in English. Please tell me, I will give you.

M—Give me good material, Mr. Shetty. Should not give anything rotten or spoiled.

S—How to keep rotten or spoiled things, Sir. We sell only new goods.

M—Two kg. toordal, one kg. green-gram, half kg. coriander weigh separately. Tell him to pack them tightly. The packet should not give way.

S—What is there ? We will pack in the polythelene bag. It will neither get torn nor broken.

M—Do you have good masala materials, that is mace, cloves, pepper, cummin seed, chinnamon, opium seed, sinapis dichotomd ?

S—You see, we have every condiment separately and we have packets containing all the masala material also. Tell me, which way you want it ?

ಮೋ—ನನಗೆ ಬೇರೆ ಬೇರೆ ಇರೋದನ್ನೇ ಕೊಡಿ. ಒಟ್ಟಾಗಿ ಸೇರಿಸಿರೋದು ಬೇಡ.

ಶೆ—ಇನ್ನೇನು ಕೊಡಲಿ ಸಾರ್ ?

ಮೋ—ನೂರು ಗ್ರಾಂ ಒಣ ದ್ರಾಕ್ಷಿ, ನೂರು ಗ್ರಾಂ ಗೋಡಂಬಿ, ಅರ್ಧ ಕೆ.ಜಿ. ಎಳ್ಳು ತೂಕ ಮಾಡಿ.

ಶೆ—ಇನ್ನೇನಾದರೂ ಕೊಡೋಣವೇ ಸಾರ್ ?

ಮೋ—ಒಂದು ಕೆ.ಜಿ. ಬೆಲ್ಲ, ಎರಡು ಕೆ.ಜಿ. ಸಕ್ಕರೆ, ಹತ್ತು ಕೆ.ಜಿ. ಗೋಧಿ ಕೊಡಿ.

ಶೆ—ಹಸನಾದ ಮೈಸೂರು ಸಣ್ಣ ಅಕ್ಕಿ ಇದೆ. ಐವತ್ತು ಕೆ.ಜಿ. ಕೊಡ್ಲಾ.

ಮೋ—ಇಷ್ಟೇ ಸಾಕು. ಇವನ್ನೆಲ್ಲ ಮನೆಗೆ ಸಾಗಿಸೋದಕ್ಕೆ ಒಂದು ಗಾಡಿ ತರಿಸಿ.

ಶೆ—ಸಾಕಾ, ಇದೆಲ್ಲ ನಾನು ಮನೆಗೆ ಬಿಲ್ ಜೊತೆಗೆ ಆಳಿನ ಕೈಲಿ ಕಳಿಸ್ತೀನಿ.

ಮೋ—ನಮಸ್ಕಾರ.

ಶೆ—ನಮಸ್ಕಾರ.

M— Give them separately. I don't want all in one packet.

S—What else shall I give ?

M—Hundred grams dry grapes, hundred grams cashewnuts, half kg. thill please weigh.

S—Shall I give anything more, Sir.

M—Please give one kilo Jaggary, two kilo sugar, ten kilo wheat.

S—We have very good Mysoresanna rice. Shall I give fifty kgs ?

M—This is enough. Kindly get a cart to transport these things .mehno

S—A cart is not necessary, Sir. I will send all these alog with the bill through the attender.

M—Namaskaara.

S—Namaskaara.

★

DRILLS

REPETITION DRILL

ಅಧ್ಯಾಪಕ—ಸಾಲ ತೆಗೊಳ್ಳೋದು ಸುಲಭ, ವಾಪಸ್ ಕೊಡೋದು ಕಷ್ಟ, ಅಲ್ವಾ. ಕಲಿಯುವವ— ....

ಅ—ಹೌದು ಹೌದು ಸಾಲ ತೆಗೊಳ್ಳೋದು ಸುಲಭ, ವಾಪಸ್ ಕೊಡೋದು ಕಷ್ಟ. ಕ— ....

ಅ—ನಾವು ನಿಮ್ಮ ಹತ್ತಿರ ಬರೋದು ಬರೀ ಸಾಲಕ್ಕೆ ಅಂತ ನಿಮ್ಮ ಅಭಿಪ್ರಾಯನಾ ? ಕ— ....

ಅ—ಹೌದು ನೀವು ಯಾವಾಗಲೂ ಬರೋದು ಸಾಲಕ್ಕೇನೇ. ಕ— ....

ಅ—ಸಾಲ ಯಾತಕ್ಕೆ ತೆಗೊಳ್ತೀರಿ ? ಕ— ....

ಅ—ಹೊಲ ಮಾಡೋದಕ್ಕೆ ಸಾಲ ತೆಗೊಳ್ತೀವಿ. ಕ— ....

ಅ—ಹೊಲ ಮಾಡೋದಕ್ಕೆ ಸಾಲ ತೆಗೊಳ್ಳೋದು ಮಗಳದೋ ಮಗನದೋ ಮದುವೆ ಮಾಡೋದು ? ಕ— ....

ಅ—ಅದೂ ಇಲ್ಲ ಅಂದ್ರೆ ಮಾರವಾಡಿಯ ಹಳೆಯ ಸಾಲ ತೀರಿಸೋದು. ಕ— ....

ಅ—ನಿಮ್ಮಿಂದ ಬಾಕಿ ವಸೂಲಿ ಮಾಡೋದು ತುಂಬಾ ಕಷ್ಟ ಅಲ್ವಾ? ಕ— ....

ಅ—ಹಾಗೇನೂ ಇಲ್ಲ, ನಮ್ಮಿಂದ ಬಾಕಿ ವಸೂಲಿ ಮಾಡೋದು ಕಷ್ಟ ಏನೂ ಇಲ್ಲ. ಕ— ....

ಅ—ನಾನು ಹೇಳೋದನ್ನ ಸ್ವಲ್ಪ ಕೇಳಿ. ಕ— ....

ಅ—ನೀವು ಹೇಳೋದನ್ನ ನಾನು ಯಾಕೆ ಕೇಳಬೇಕು ? | ಕ— ....

ಅ—ಕಿವಿ ಕೇಳದವರು ಕಣ್ಣು ಕಾಣದವರು ನಿಮ್ಮಂತಹವರಿಗೆ ಸಾಲ ಕೊಡಬೇಕು ಅಷ್ಟೆ. | ಕ— ....

ಅ—ನಿಮಗೆ ಇತ್ತೀಚೆಗೆ ಯಾವುದಾದರೂ ಹೊಸ ಸಾಲದ ಹೆಸರು ತಿಳೀತಾ ?

ಅ—ಇಲ್ಲ ಸಾರ್ ಅಂತದ್ದೇನೂ ಇಲ್ಲ. | ಕ— ....

ಅ—ನೀವು ನಮ್ಮ ಹಳ್ಳಿಯವರನ್ನು ಈ ರೀತಿ ಬೈಯ್ಯೋದು ಸರಿ ಅಲ್ಲ ಸಾರ್. | ಕ— ....

ಅ—ನಾವು ನಿಮಗೆ ಒಡ್ಡಿ ತೆರೋದು ಜ್ಞಾಪಕ ಇದೆ ತಾನೆ. | ಕ— ....

ಅ—ನಿಮ್ಮಲ್ಲಿ ಕಾಫಿ ಕುಡಿಯೋದೂ ಬೇಡ, ಇಲ್ಲಿಗೆ ಬರೋದೂ ಬೇಡ. | ಕ— ....

ಅ—ಗ್ರಾಮ ಸೇವಕರನ್ನು, ಗ್ರಾಮ ಲೆಕ್ಕಿಗರನ್ನು ಇಲ್ಲಿಗೆ ಕರೆಯೋದಕ್ಕೆ ಸಾಧ್ಯಾನಾ ? | ಕ— ....

ಅ—ಇಲ್ಲಿ ಕುಡಿಯೋದಕ್ಕೆ ನೀರು ಸಿಕ್ಕತ್ತಾ ? | ಕ— ....

ಅ—ನಿಮಗೆ ಹೊಸತಳಿ ಹೈಬ್ರೀಡ್ ಬೆಳೆಗಳು ಬೆಳೆಯೋದಕ್ಕೆ ಗೊತ್ತಾ ? | ಕ— ....

ಅ—ಅದೆಲ್ಲ ಬೆಳೆಯೋದಕ್ಕೆ ಅನುಕೂಲತೆಗಳು ಬೇಕು. ಆ ಅನುಕೂಲತೆಗಳು ನಮ್ಮಲ್ಲಿ ಇಲ್ಲ. | ಕ— ....

ಅ—ನೀವೇನೋ ಸಾಲ ಕೊಡ್ತೀರಿ, ಆದರೆ ಸಮಯಕ್ಕೆ ಸರಿಯಾಗಿ ಸಾಲ ಕೊಡೋದಕ್ಕೆ ಯಾರೂ ಇಲ್ಲ. | ಕ— ....

ಅ—ಬೆಳೆಗೆ ಔಷಧಿ ಹೊಡೆಯೋದಕ್ಕೆ ತುಂಬಾ ಖರ್ಚು ಆಗುತ್ತಾ ? | ಕ— ....

ಅಧ್ಯಾಪಕ—ಇಲ್ಲಿ ಇರೋದೆಲ್ಲ ಒಳ್ಳೆಯ ಅಕ್ಕಿನಾ? ಕಲಿಯುವವ— ....

ಅ—ಹೌದು, ಅಲ್ಲಿ ಇರೋದೆಲ್ಲ ಒಳ್ಳೆ ಅಕ್ಕೀನೇ. ಕ— ....

ಅ—ಎಲ್ಲ ಮಸಾಲೆ ಸಾಮಾನೂ ಸೇರಿಸಿರೋದು ಒಂದು ಪೊಟ್ಣ ಕೊಡಿ. ಕ— ....

SUBSTITUTION DRILL

1. ಅ - ವ್ಯಾಪಾರಗಾರರು ಸಾಲ ತೀರಿಸೋದಕ್ಕೆ ಬ್ಯಾಂಕಿಗೆ ಹೋಗ್ತಾರೆ. ಕ— ....

ಅ—ಕೊಡು ಕ— ....

ಅ—ಕೇಳು ಕ— ....

ಅ—ತರು ಕ— ....

ಅ—ತೆಗೊಳ್ಳು ಕ— ....

ಅ—ತೆರು ಕ— ....

ಅ—ಮಾಡು ಕ— ....

ಅ—ಹೇಳು ಕ— ....

2. ಅ—ನಾನು ಔಷಧಿ ಕೊಳ್ಳೋದಕ್ಕೆ ಸಹಾಯ ಮಾಡಲಾ? ಕ— ....

ಅ—ಮಾರು ಕ— ....

ಅ—ನೋಡು ಕ— ....

ಅ—ಹಾಕು ಕ— ....

ಅಧ್ಯಾಪಕ—ಹುಡುಕು ಕಲಿಯುವವ— ....

ಅ—ಇಡು ಕ— ....

ಅ—ಬದಲಾಯಿಸು ಕ— ....

ಅ—ವಿಚಾರಿಸು ಕ— ....

ಅ—ಮಾಡು ಕ— ....

ಅ—ಬಿಡು ಕ— ....

ಅ—ತಿನ್ನು ಕ— ....

ಅ—ಕುಡಿ ಕ— ....

3. ಅ—ಇದನ್ನು ನೋಡೋದು ಒಳ್ಳೆಯದು ಕ— ....

ಅ—ಕೊಳ್ಳು ಕ— ....

ಅ—ಮುಗಿಸು ಕ— ....

ಅ—ಇಡು ಕ— ....

ಅ—ಹಾಕು ಕ— ....

ಅ—ತಿಳಿಸು ಕ— ....

ಅ—ಕರಿ ಕ— ....

ಅ—ಹುಡುಕು ಕ— ....

ಅ—ಹೇಳು ಕ— ....

ಅ—ಮಾಡು ಕ— ....

ಅಧ್ಯಾಪಕ—ಕೊಡು	ಕಲಿಯುವವ— ....
ಅ—ಬಿಡು	ಕ— ....
ಅ—ಹಿಡಿ	ಕ— ....
ಅ—ತಿನ್ನು	ಕ— ....
ಅ—ಕುಡಿ	ಕ— ....
ಅ—ಬೈಯ್ಯು	ಕ— ....
ಅ—ಚುಚ್ಚು	ಕ— ....
ಅ—ಕೇಳು	ಕ— ....
ಅ—ಬೆಳಿ	ಕ— ....
4. ಅ—ನೀನು ಕಾಗದ ಬರೆಯೋವರಲ್ಲಿ ನಾನು ಬರ್ತೀನಿ.	ಕ— ....
ಅ—ಓದು	ಕ— ....
ಅ—ನೋಡು	ಕ— ....
ಅ—ಕೇಳು	ಕ— ....
ಅ—ಹುಡುಕು	ಕ— ....
ಅ—ಕೊಡು	ಕ— ....
ಅ—ಕಲಿಯು	ಕ— ....
ಅ—ಹಾಕು	ಕ— ....
ಅ—ತರು	ಕ— ....
ಅ—ಹೊಡೆ	ಕ— ....

5. ಅಧ್ಯಾಪಕ—ನೀವು ಹೇಳೋದನ್ನು ಯಾಕೆ ಕೇಳಬೇಕು ? ಕಲಿಯುವವ— ....

ಅ—ನೋಡು ಕ— ....

ಅ—ಬರು ಕ— ....

ಅ—ಹೋಗು ಕ— ....

ಅ—ನಡಿ ಕ— ....

ಅ—ಹುಡುಕು ಕ— ....

ಅ—ಅಳು ಕ— ....

ಅ—ನಗು ಕ— ....

ಅ—ಕೊಡು ಕ— ....

ಅ—ಇರು ಕ— ....

ಅ—ತರು ಕ— ....

ಅ—ಕರಿ ಕ— ....

ಅ—ಓಡಾಡು ಕ— ....

ಅ—ಬೈಯ್ಯು ಕ— ....

BUILD-UP DRILL

1. ಅ—ನಾವು ನಿಮ್ಮ ಹತ್ತಿರ ಬರೋದು ಸಾಲಕ್ಕೆ ಅಂತ ನಿಮ್ಮ ಅಭಿಪ್ರಾಯಾನಾ ? ಕ— ....

ಅ—ಅಭಿಪ್ರಾಯಾನಾ ಕ— ....

ಅಧ್ಯಾಪಕ—ನಿಮ್ಮ ಕಲಿಯುವವ— ....

ಅ—ಸಾಲಕ್ಕೆ ಅಂತ ಕ— ....

ಅ—ಬರೋದು ಕ— ....

ಅ—ನಿಮ್ಮ ಹತ್ತಿರ ಕ— ....

ಅ—ನಾವು ಕ— ....

2. ಅ—ಜಮೀನು ಅಭಿವೃದ್ಧಿ ಮಾಡೊದಕ್ಕೆ, ಎತ್ತು, ಕೊಂಡುಕೊಳ್ಳೋದಕ್ಕೆ ಅಂತ ಸಾಲ ತೆಗೋತೀರಿ. ಕ— ....

ಅ—ತೆಗೋತೀರಿ ಕ— ....

ಅ—ಸಾಲ ಕ— ....

ಅ—ಕೊಂಡುಕೊಳ್ಳೋದಕ್ಕೆ ಅಂತ ಕ— ....

ಅ—ಎತ್ತು ಕ— ....

ಅ—ಅಭಿವೃದ್ಧಿ ಮಾಡೋದಕ್ಕೆ ಕ— ....

ಅ—ಜಮೀನು ಕ— ....

3. ಅ—ನಿಮ್ಮ ಹತ್ತಿರ ಸಾಲ ತಗೊಳ್ಳೋದೂ ಬೇಡ ಬಡ್ಡಿ ತೆರೋದೂ ಬೇಡ. ಕ— ....

ಅ—ಬೇಡ ಕ— ....

ಅ—ಬಡ್ಡಿ ತೆರೋದೂ ಕ— ....

ಅ—ಸಾಲ ತೆಗೊಳ್ಳೋದು ಕ— ....

ಅ—ನಿಮ್ಮ ಹತ್ತಿರ ಕ— ....

4. ಅಧ್ಯಾಪಕ—ಬ್ಯಾಂಕಿನವರು ನಮ್ಮ ಹಳ್ಳಿಗೆ ಬರೋದು ಹಳ್ಳಿಯ ಅದೃಷ್ಟಾನೇ. ಕಲಿಯುವವ — ....

ಅ—ಅದೃಷ್ಟಾನೇ ಕ— ....

ಅ—ಹಳ್ಳಿಯ ಕ— ....

ಅ—ಬರೋದು ಕ— ....

ಅ—ನಮ್ಮ ಹಳ್ಳಿಗೆ ಕ— ....

ಅ— ಬ್ಯಾಂಕಿನವರು ಕ— ....

5. ಅ—ಬೆಳೆಗೆ ಔಷಧಿ ಹೊಡೆಯೋದಕ್ಕೆ ತುಂಬಾ ಖರ್ಚಾಗುತ್ತಾ ? ಕ— ....

ಅ—ಖರ್ಚಾಗುತ್ತಾ ಕ— ....

ಅ—ತುಂಬಾ ಕ— ....

ಅ—ಹೊಡೆಯೋದಕ್ಕೆ ಕ— ....

ಅ—ಔಷಧಿ ಕ— ....

ಅ—ಬೆಳೆಗೆ ಕ— ....

6. ಅ—ಎಲ್ಲಾ ಮಸಾಲೆ ಸಾಮಾನೂ ಸೇರಿಸಿರೋದು ಒಂದು ಪೊಟ್ಟಣ ಕೊಡಿ. ಕ— ....

ಅ—ಕೊಡಿ ಕ— ....

ಅ—ಪೊಟ್ಟಣ ಕ— ....

ಅ—ಒಂದು ಕ— ....

ಅ—ಸೇರಿಸಿರೋದು ಕ— ....

ಅಧ್ಯಾಪಕ—ಮಸಾಲೆ ಸಾಮಾನೂ   ಕಲಿಯುವವ— ....

ಅ—ಎಲ್ಲಾ   ಕ— ....

RESPONSE DRILL

ಅ—ನನ್ನ ಸಾಲದ ಅರ್ಜಿಯನ್ನ
ಬದಲಾಯಿಸೋದಕ್ಕೆ ಆಗತ್ತಾ ?   ಕ— ....

ಅ—ನೀವು ಆಳನ್ನ ವಿಚಾರಿಸೋದನ್ನ ನಾನು
ಕೇಳಲಾ ?   ಕ— ....

ಅ—ಈಗ ಬಸ್ಸಿಗೆ ಕಾಯೋದಕ್ಕೆ ಸಮಯ
ಇದೆಯಾ ?   ಕ— ....

ಅ—ಅವರಿಗೆ ಕುಳಿತುಕೊಳ್ಳೋದಕ್ಕೆ ಕುರ್ಚಿ
ಕೊಡಲಾ ?   ಕ— ....

ಅ—ನಿಮಗೆ ಹೇಳೋದಕ್ಕೆ ಕೇಳೋದಕ್ಕೆ ಯಾರೂ
ಇಲ್ವಾ ?   ಕ— ....

ಅ—ಮುಂಚಿನ ಹಳ್ಳಿಯ ಸರ್ವೆ ಮಾಡೋದಕ್ಕೆ
ಯಾರು ಹೋಗ್ತಾರೆ.   ಕ— ....

ಅ—ನೀವು ಬ್ಯಾಂಕಿಗೆ ಹೋಗೋದರಲ್ಲೇ
ಮ್ಯಾನೇಜರ್ ಬರ್ತಾರಾ ?   ಕ— ....

ಅ—ನನ್ನ ಕೈಗೆ ಉಳಿತಾಯದ ಹಣ ಬರೋದರಲ್ಲಿ
ಬಡ್ಡಿ ಎಷ್ಟು ಸೇರತ್ತೆ ?   ಕ— ....

ಅ—ಅವರು ಶೇಖಡ ಎರಡೂವರೆ ಬಡ್ಡಿ
ಕೊಡೋದು ನಿಮಗೆ ಗೊತ್ತಾ ?   ಕ— ....

ಅ—ಅವರು ಪ್ರವಾಸಿ ಚೆಕ್ ಕೊಳ್ಳೋದಕ್ಕೆ
ಬ್ಯಾಂಕಿಗೆ ಬರ್ತಾರಾ ?   ಕ— ....

ಅ—ಅವರು ಡ್ರಾಫ್ಟ್ ಮುರಿಸೋದಕ್ಕೆ ಎಲ್ಲಿಗೆ
ಹೋಗ್ತಾರೆ ? ಕ— ....

ಅ—ಹಳ್ಳಿಯವರಿಗೆ ಸಹಿ ಹಾಕೋದಕ್ಕೆ ಗೊತ್ತೋ
ಬೆರಳು ಗುರುತು ಹಾಕೋದಕ್ಕೆ ಗೊತ್ತೊ ? ಕ— ....

ಅ—ಹಳ್ಳಿಯವರಿಗೆ ರೂಲ್ಸ್‌ಗಳು ತಿಳಿಸೋದಕ್ಕೆ
ನಿಮಗೆ ಕನ್ನಡ ಚೆನ್ನಾಗಿ ಗೊತ್ತಾ ? ಕ— ....

ಅ—ಲೆಡ್ಜರ್ ಹುಡುಕೋದಕ್ಕೆ ಸ್ಟೋರ್ಸ್‌ಗೆ
ಯಾರು ಹೋಗ್ತಾರೆ? ಕ— ....

ಅ—ನಿಮಗೆ ಕನ್ನಡದಲ್ಲಿ ಬೈಯ್ಯೋದಕ್ಕೆ ಗೊತ್ತಾ? ಕ— ....

ಅ—ಜೋಳದ ಹೊಲಕ್ಕೆ ಔಷಧಿ ಹೊಡೆಯೋದಕ್ಕೆ
ಹೇಳಲ್ವಾ? ಕ— ....

ಅ—ನಿಮ್ಮ ಸಾಲ ಕಳೆ ಕೀಳೋದರಲ್ಲಿ ಸಿಕ್ಕುತ್ತಾ ? ಕ— ....

EXERCISES

I Choose the appropriate forms of the three forms given below each sentence to complete the sentence correctly.

ಹುಡುಗರು ——— ನಿಮ್ಮ ಹತ್ತಿರ ಬರ್ತಾರಾ ?
(ಸಾಲ ತಗೊಳ್ಳೋದನ್ನು, ಸಾಲ ತಗೊಳ್ಳೋದಕ್ಕೆ, ಸಾಲ ತಗೊಳ್ಳೋದು)

2 ನೀವು ಈಗ ——— ಯಾವ ಖಾತೆಯು ಒಡ್ಡಿ ?
(ಕೊಡೋದು, ಕೋಡೋದರಲ್ಲಿ, ಕೊಡೋದನ್ನು)

3 ನೀವು ಈ ರೀತಿ ——— ಸರಿಯಲ್ಲ.
4. ಅಧ್ಯಾಪಕ—ಹಳ್ಳಿಯ ಬಡಗಿಗಳು ನಮ್ಮ ಬ್ಯಾಂಕಿನ ಸಾಲಗಳ ಬಗ್ಗೆ ವಿವರವಾಗಿ ವಿಚಾರಿಸಿದರು. ಕಲಿಯುವವ— ....

ಅ—ಹಳ್ಳಿಯ ಬಡಗಿಗಳು ವಿಚಾರಿಸಿದರು ಕ— ....

ಅ—ವಿವರವಾಗಿ ಕ— ....

ಅ—ಸಾಲಗಳ ಬಗ್ಗೆ ಕ— ....

ಅ—ಬ್ಯಾಂಕಿನ ಕ— ....

ಅ—ನಮ್ಮ ಕ— ....

5. ಅ—ದೇವರ ದಯೆಯಿಂದ ಬೆಂಕಿ ನಮ್ಮ ಅಂಗಡಿಗೆ ಮಾತ್ರ ಹರಡಿತು, ಬೇರೆಯವರ ಅಂಗಡಿಗೆ ಹರಡಲಿಲ್ಲ. ಕ— ....

ಅ— ದೇವರ ದಯೆಯಿಂದ ಹರಡಲಿಲ್ಲ ಕ— ....

ಅ—ಅಂಗಡಿಗೆ ಕ— ....

ಅ—ಬೇರೆಯವರ ಕ— ....

ಅ—ಅಂಗಡಿಗೆ ಮಾತ್ರ ಹರಡಿತು ಕ— ....

ಅ—ನಮ್ಮ ಕ— ....

ಅ—ಬೆಂಕಿ ಕ— ....

EXERCISES

I Use the following words in your own sentences.

1	ಅಪಘಾತ	6	ಹರಾಜು
2	ನಿರಾಶೆ	7	ನೆಗೆದುಬೀಳು
3	ಬಂಡವಾಳ	8	ಪುಡಿ
4	ಪಾಲುಗಾರ	9	ಚೀಟಿ
5	ದಿವಾಳಿ	10	ಸಿರಿ

II Match the following.

A		B	
1	ನಾನು	a) ನಿಂತವು	( )
2	ನಾವು	b) ನಿಂತಿರಿ	( )
3	ನೀನು	c) ನಿಂತಿತು	( )
4	ನೀವು	d) ನಿಂತೆವು	( )
5	ಅವನು	e) ನಿಂತೆ	( )
6	ಅವಳು	f) ನಿಂತಳು	( )
7	ಅವರು	g) ನಿಂತನು	( )
8	ಅದು	h) ನಿಂತರು	( )
9	ಅವು	i) ನಿಂತಿತು	( )

III Conjugate the following verbs and use them in your own sentences.

1 ಮುಚ್ಚು	6 ಮಾರು
2 ಆಡು	7 ತುಂಬು
3 ಹಾಕು	8 ಬೀಳು
4 ತೀರಿಸು	9 ಉಳಿ
5 ವಹಿಸಿಕೊಳ್ಳಿ	10 ಬಿಡು

IV Match the following.

A	B	
1 ನಾನು	a) ಕೆಟ್ಟ್ಯರಾ	( )
2 ನಾವು	b) ಕೆಟ್ಟಿತಾ	( )
3 ನೀನು	c) ಕೆಟ್ಟ್ಯವಾ	( )
4 ನೀವು	d) ಕೆಟ್ಟ್ಯಳಾ	( )
5 ಅವನು	e) ಕೆಟ್ಟ್ಯನಾ	( )
6 ಅವಳು	f) ಕೆಟ್ಟ್ಯರಾ	( )
7 ಅವರು	g) ಕೆಟ್ಟ್ಯೆಯಾ	( )
8 ಅದು	h) ಕೆಟ್ಟ್ಯವಾ	( )
9 ಅವು	i) ಕೆಟ್ಟ್ಯೆನಾ	( )

V R Write the following sentences in the negative.

1 ಬ್ಯಾಂಕಿನ ಫೀಲ್ಡ್ ಆಫೀಸರ್ ಅವರು ನನ್ನನ್ನು ಕರೆದರು.

2 ರಾಮೇಗೌಡನ ಮಗ ಕಾರ್ಡಿನಮೇಲೆ ಮೂರು ಸಹಿಮಾಡಿದನು.

3 ಅವನು ಎಲ್ಲ ಸಾಲದ ಹಣವನ್ನೂ ತೀರಿಸಿದನು.

4 ಇವತ್ತು ಪ್ರವಾಸಿಯೊಬ್ಬನು ಐದು ಸಾವಿರ ರೂಪಾಯಿಗಳ ಪ್ರವಾಸಿ ಚೆಕ್ಕನು ಮುರಿಸಿದ.

5 ಬ್ಯಾಂಕಿನಲ್ಲಿ ಎಲ್ಲರ ಹಿಂದಿನ ವರ್ಷದ ಖಾತೆಯ ಸಂಖ್ಯೆಗಳನ್ನು ಬದಲಾಯಿಸಿದರು.

6 ಅವನು ಊರಿಗೆ ಹೋಗಕ್ಕೆ ಬಸ್ಸನ್ನು ತುಂಬಾ ಕಾದನು.

7 ಅವರು ಹೈದರಾಬಾದಿನಿಂದ ಬ್ಯಾಂಕಿಗೆ ಹಣವನ್ನು ತಂದರು.

8 ಭೀಮನ ಹಳ್ಳಿಯ ಎಲ್ಲ ರೈತರೂ ಬೆಳೆ ಸಾಲವನ್ನು ತೆಗೆದುಕೊಂಡರು.

9 ಅವರ ಫಾರಂನ ಎಲ್ಲ ಕುರಿಗಳೂ ಚೆನ್ನಾಗಿವೆ.

10 ನಿಮ್ಮ ಸಾಲದ ಅರ್ಜಿ ಸಮಯಕ್ಕೆ ಸರಿಯಾಗಿ ಕೈ ಸೇರಿತು.

IV Write both interrogative and negative forms of the following sentences.

1 ನಿಮ್ಮ ಬ್ಯಾಂಕಿನಿಂದ ಬಡವರಿಗೆ ಸಾಲ ಕೊಟ್ಟರಿ.

2 ಸಾಹುಕಾರರು ನಿಮ್ಮ ಬ್ಯಾಂಕಿನಲ್ಲಿ ಹೊಸ ಖಾತೆಯನ್ನು ಪ್ರಾರಂಭ ಮಾಡಿದರು.

3 ಫೀಲ್ಡ್ ಆಫೀಸರ್‌ಗಳು ಹಳ್ಳಿಗೆ ಹೋದರು.

4 ಸಾಲದ ಹಣದಿಂದ ಕುರುಬರು ಕುರಿಗಳನ್ನು ಕೊಂಡರು.

5 ಎಲ್ಲ ಆಳುಗಳೂ ಕಷ್ಟಪಟ್ಟು ಹೊಲದಲ್ಲಿ ದುಡಿದರು.

6 ಅವರು ಪ್ರತಿದಿನ ಮನೆಯಿಂದ ಬ್ಯಾಂಕಿಗೆ ನಡೆದರು.

7 ಕೃಷ್ಣಪ್ಪನವರ ದಿನಸಿ ಅಂಗಡಿ ಬೆಂಕಿಯಲ್ಲಿ ಸುಟ್ಟಿತು.

8 ದಿನ ಪತ್ರಿಕೆಯಲ್ಲಿ ಕೆಟ್ಟ ಸುದ್ದಿಯನ್ನು ಓದಿದೆ.

9 ಆಳುಗಳು ಸಿಗರೇಟು ಸೇದಿದರು.

10 ಮಳೆಗಾಲದಲ್ಲಿ ರೈತರು ಹೊಲದಲ್ಲಿ ಸಜ್ಜೆಯನ್ನು ಬಿತ್ತಿದರು.

ಪಾಠ ಹದಿನೇಳು

ಪಟಾಕಿ ಅಂಗಡಿಗೆ ಬೆಂಕಿ ಬಿತ್ತು

ಸೋಮು—ಇವರೇ ಸರ್, ದಿನಸಿ ಅಂಗಡಿ ಕೃಷ್ಣಪ್ಪನವರು.

ಅಧಿಕಾರಿ—ಅಂದರೆ......

ಸೋ—ಮೊನ್ನೆ ದೀಪಾವಳಿ, ಹಿಂದಿನ ದಿನ ಸಂತೇಪೇಟೆಯಲ್ಲಿ ಒಂದು ಅಂಗಡಿ ಸುಟ್ಟಿತು, ಅಲ್ಲವಾ ಸರ್, ಇವರೇ ಆ ಅಂಗಡಿಯ ಮಾಲೀಕರು.

ಅ—ಓ ಅವರಾ ? ಬನ್ನಿ ಸರ್ ಕೂತ್ಕೊಳ್ಳಿ. ತಮಗೆ ತುಂಬಾ ಅನ್ಯಾಯ ಆಯಿತು. ನಮ್ಮ ಸೋಮು ನಿಮ್ಮ ಅಂಗಡಿ ವಿಚಾರ ಹೇಳಿದ. ನಾನೂ ಸಹ ಪತ್ರಿಕೇಲಿ ಓದಿದೆ. ತುಂಬ ದುಃಖ ಆಯಿತು.

ಕೃ—ನಿಮ್ಮನ್ನ ನೋಡಕ್ಕೆ, ಮೂರು ನಾಲ್ಕು ದಿನ ಬಂದೆ ಸರ್, ನೀವು ಮಾತ್ರ ಸಿಗಲಿಲ್ಲ.

ಅ—ನಾನು ರಜಾದಲ್ಲಿ ಇದ್ದೆ. ಬೆಳಿಗ್ಗೆ ಬಂದೆ. ಅದಿರಲಿ ನಿಮಗೆ ಏನು ಸಹಾಯ ಬೇಕೋ ಅದೆಲ್ಲ ಮಾಡೋಣ. ನಿಮ್ಮ ಅಂಗಡಿಗೆ ಬೆಂಕಿ ಹೇಗೆ ಬಿತ್ತು ?

ಕೃ—ದೀಪಾವಳಿ ಸಮಯ, ಅಂಗಡಿ ದಿನಸಿಯದು, ಆದರೂ ಜನಗಳ ಕಾಟಕ್ಕೆ ಈ ವರ್ಷ ಪಟಾಕಿ ಇಟ್ಟೆ.

ಅ—ಹಾಗಾದರೆ ಪಟಾಕಿಯಿಂದ ಬೆಂಕಿ ಬಿತ್ತು.

ಕೃ—ಹೌದು ಸರ್, ಯಾರೋ ಸಿಗರೇಟ್ ಹಚ್ಚಿದರು ಅನ್ನಿಸತ್ತೆ, ಅದರ ಕಿಡಿ ಪಟಾಕಿಗೆ ಹಾರಿದೆ. ಹಬ್ಬದ ಗಲಾಟೆ, ವ್ಯಾಪಾರದ ಭರಾಟೆ ಜೋರಾಗಿತ್ತು. ಗಲ್ಲಾದಲ್ಲಿ ನಾನಿರಲಿಲ್ಲ. ನನ್ನ ಮಗ ಇದ್ದ. ನಾನು ಗೋಡೌನಿನಲ್ಲಿ ಇದ್ದೆ.

ಅ—ಹೌದಾ ?

ಕೃ—ಹೌದು ಸರ್, ಅಷ್ಟರಲ್ಲಿ ಜನರು ಬೆಂಕಿ ಬೆಂಕಿ ಅಂತ ಕೂಗಿದರು. ನನ್ನ ಹೆಂಡತಿ ನನಗೂ ಸುದ್ದಿ ತಿಳಿಸಿದಳು, ಅಗ್ನಿಶಾಮಕ ದಳಕ್ಕೂ ಫೋನ್ ಮಾಡಿದಳು.

ಅ—ನಿಮ್ಮ ಮನೆ ಅಂಗಡಿಗೆ ಸೇರಿ ಇದೆಯಾ ?

ಕೃ—ಹೌದು ಸರ್, ಎರಡೂ ಒಟ್ಟಿಗೆ ಇದೆ. ಮನೆ ಅಂಗಡಿಯ ಹಿಂದೇ ಇದೆ. ಗೋಡೌನ್ ಮಾತ್ರ ಬೇರೆ ಕಡೆ ಇದೆ.

LESSON 17

THE CRACKER SHOP CAUGHT FIRE

Somu—He is Mr. Krishnappa of the grossary shop.

Officer—So ...... ?

S— On the day before Divali, one cracker shop got burnt in Santhepet. Did not it Sir ? He is the owner of that shop.

O— Oh ! Is this he ? Please come in, Sir, sit. You have incurred a great loss. Our Somu told me about your shop. I also read in the news-papers. I felt very sad.

K—I came three or four days to meet you, Sir. But I could not meet you.

O—I was on leave. Came only in the morning. Be that as it is. Let us give you whatever help you want. How did your shop catch fire ?

K—You see, this is the Divali season. Though the shop is a grossary, because people compelled me, I kept crackers also for sale.

O—It caught fire because of crackers, then ?

K—It seems someone has lit the cigarette. A spark has touched the crackers. Because of festival, business, was heavy. I was not on the cash counter. My son was on the cash counter. I was in the godown.

O—Is it ?

K—Yes, Sir. In the mean time, people shouted 'fire' 'fire'. My wife informed me also. She telephoned to the fire brigade also.

O—Is your shop attached to the house ?

K—Yes, Sir. Both are together. House is just behind the shop. Only the godown is in a different place,

ಅ—ಅಗ್ನಿಶಾಮಕ ದಳದವರು ಸಮಯಕ್ಕೆ ಸರಿಯಾಗಿ ಬಂದರಾ ?

ಕೃ—ಹೌದು ಸರ್, ಅವರೂ ಸಮಯಕ್ಕೆ ಸರಿಯಾಗಿ ಬಂದರು. ಸುತ್ತಮುತ್ತಲಿನ ಜನಾನೂ ತುಂಬಾ ಸಹಾಯ ಮಾಡಿದರು. ಆದರೆ ಅದೃಷ್ಟ ಕೆಟ್ಟದ್ದು, ಪಟಾಕಿ ಬೇರೆ, ಬೆಂಕಿ ಬೇಗ ಬೇಗ ಹರಡಿತು. ದೇವರ ದಯೆಯಿಂದ ಬೇರೆ ಅಂಗಡಿಗಳಿಗೆ ಹರಡಲಿಲ್ಲ.

ಅ—ನಿಮ್ಮ ಮನೆ ಹತ್ತಿರ ನೀರು ಮರಳು ಏನೂ ಸಿಗಲಿಲ್ಲವಾ ?

ಕೃ—ಜನ ಸಿಕ್ಕಪಟ್ಟೆ ನೀರು ಹಾಕಿದರು ಸರ್. ಆದರೂ ನನ್ನ ಅಂಗಡಿ ಸಂಪೂರ್ಣವಾಗಿ ಸುಟ್ಟಿತು.

ಅ—ನಿಮ್ಮ ಒಬ್ಬ ಆಳು ಆ ಬೆಂಕಿಯಲ್ಲಿ ಸತ್ತ, ಅಂತ ಕೇಳಿದೆ, ನಿಜಾನಾ ?

ಅ—ಹೌದು ಸರ್. ಅವನು ತುಂಬಾ ನಂಬಿಗಸ್ತ ಆಳು ಸರ್. ಅನ್ಯಾಯವಾಗಿ ನಾನು ಅವನನ್ನು ಕಳಕೊಂಡೆ.

ಅ—ನಮ್ಮ ಬ್ಯಾಂಕಿನಿಂದ ಎಷ್ಟು ಸಾಲ ಇತ್ತು. ಹಿಂದೆ ಏನಾದರೂ ತೀರಿಸಿದ್ದಿರಾ ?

ಕೃ—ನಿಮ್ಮ ಬ್ಯಾಂಕಿನಿಂದ ಹತ್ತು ಸಾವಿರ ರುಪಾಯಿ ಸಾಲ ಇತ್ತು, ಸರ್.

ಅ—ಅಂಗಡಿಗೆ ವಿಮೆ ಇತ್ತಾ ?

ಕೃ—ಹನ್ನೆರಡು ಸಾವಿರಕ್ಕೆ ವಿಮೆ ಇತ್ತು ಸರ್. ಅಂಗಡಿಯಲ್ಲಿ ಏನೂ ಉಳಿಯಲಿಲ್ಲ ಸರ್.

ಅ—ಆಗಲೇ ವಿಮೆಯ ಹಣ ಬಂತಾ? ಅಥವಾ ಇನ್ನೂ ಆ ಹಣ ಬರಲಿಲ್ಲವೋ ?

ಕೃ—ಆ ಹಣ ಇಷ್ಟು ಬೇಗ ಎಲ್ಲಿ ಬರತ್ತೆ, ಸರ್. ಅವರ ಪ್ರೊಸೀಜರ್ ಬಹಳ, ಮೊನ್ನೆ ತಾನೆ ಅವರ ಇನ್ಸ್‌ಪೆಕ್ಟರ್ ಮಹಜರ್ ಮಾಡಿದರು. ನಮ್ಮ ಆಳಿನದು ಜೀವ ವಿಮೆ ಇರಲಿಲ್ಲ. ಅವನಿಗೆ ಹೆಂಡತಿ ಮಕ್ಕಳು ಇದ್ದಾರೆ. ಅವರಿಗೆ ಮೊನ್ನೆ ನಾಲ್ಕು ಸಾವಿರ ರೂಪಾಯಿ ಕೊಟ್ಟೆ, ಒಟ್ಟಿನಲ್ಲಿ ನಾನು ಕೆಟ್ಟೆ.

ಅ—ಜೀವನದಲ್ಲಿ ಇಂತಹ ಘಟನೆಗಳು ಸಾಮಾನ್ಯ ಸಾರ್, ಅದಕ್ಕೆಲ್ಲ ಹೆದರಿ ಹೃದಯ ಕಳೆದುಕೊಳ್ಳ ಬಾರದು ಕೃಷ್ಣಪ್ಪ. ಈಗ ಏನು ಮಾಡಬೇಕು ಅಂತ ಇದೀರಿ. ನಮ್ಮಿಂದ ಏನಾದರೂ ಸಹಾಯ ಆಗಬೇಕಾ ?

ಕೃ—ನಿಮ್ಮನ್ನ ಸಹಾಯ ಕೇಳಕ್ಕೇ ಬಂದೆ, ಸಾರ್. ವಿಮೆಯಿಂದ ಹಣ ಸಿಕ್ಕತ್ತೆ, ಅಲ್ಲವಾ ಸಾರ್, ಅದನ್ನು ನಾನು ಬ್ಯಾಂಕಿಗೆ ಕಟ್ತೀನಿ. ನನ್ನ ಹಳೆಯ ಸಾಲವೆಲ್ಲ ತೀರತ್ತೆ. ನನ್ನ ಹತ್ತಿರ ಐದಾರು ಸಾವಿರ ಇದೆ. ಅದನ್ನು ಹಾಕ್ತೀನಿ. ನೀವು ಏನಾದರೂ ನನಗೆ ಹೆಚ್ಚು ಸಾಲ ಕೊಡಕ್ಕೆ ಸಾಧ್ಯನಾ.

ಅ—ನೀವು ಐದು ಸಾವಿರ ಸೇರಿಸಿ, ಅದಕ್ಕೆ ನಾವು ಹದಿನೈದು ಸಾವಿರ ಹಾಕ್ತೀವಿ. ಒಟ್ಟು ಇಪ್ಪತ್ತು ಸಾವಿರ ಆಗತ್ತೆ. ಹೊಸದಾಗಿನೇ ಅಂಗಡಿ ಪ್ರಾರಂಭಿಸಿರಿ.

O—Did the fire brigade people come in time ?

S—Yes sir. They also come in time. The people in the neighbourhood also helped us a lot. But our luck was bad. These crackers and the fire spread quickly. By the grace of God it did not spread to the other shops.

O—Didn't you get any sand or water near your house ?

K—People poured a lot of water, Sir. Even then my shop got burnt completely

O—I heard that one of your attenders died. Is it true ?

K—Yes, Sir. He was a very faithful servent, Sir. I lost him for no reason.

O—How much loan do you owe to our bank ? Have you repayed anything ?

K—I owe your bank a loan of ten thousand rupees, Sir.

O—Was the shop Insured ?

K—It was insured for twelve thousand rupees, Sir. Nothing remained in the shop, Sir.

O—Did you get the insurance money or not ?

K—How can that money come so early, Sir ? They have a lot of procedures. Only the day before yesterday their inspector did the investigation. My attender did not have any insurence. He has left behind his wife and children. I paid four thousand rupees to them, only recently. In short I am ruined.

K—Such incidents are common in life, Sir. One should not loose heart for such things. What do you propose to do now. Do you want any help from us ?

K—I infact come to ask you for help, Sir. Anyhow I will get some money from the insurence company. I will pay that to the bank. All my old loans will get cleared. I have some five-six thousand rupees. I will invest that too. Can you give me some loan, Sir ?

O—You add five thousand rupees. We will give you fifteen thousand rupees to it. I will be twenty thousand rupees in all. You can start a new shop.

ಕೃ—ಆಗಲಿ ಸಾರ್, ರೋಗಿ ಬಯಸಿದುದೂ ಹಾಲು ಅನ್ನ, ಡಾಕ್ಟರು ಹೇಳಿದುದೂ ಹಾಲು ಅನ್ನ, ಅಂತಾರೆ ಅಲ್ವಾ ಹಾಗೆ ಆಯಿತು.

ಅ—ಕೃಷ್ಣಪ್ಪನೋರೆ, ನಿಮಗೆ ನಮ್ಮಿಂದ ಸಾಲ ತೆಗೊಳ್ಳಕ್ಕೆ, ವಾಪಾಸ್ ಕೊಡಕ್ಕೆ ಕೆಲವು ರೂಲ್ಸ್ ಇವೆ. ಅವೆಲ್ಲವುಗಳ ಪರಿಚಯ ನಿಮಗೆ ಚೆನ್ನಾಗಿ ಇದೆ ಅಲ್ಲವಾ ?

ಕೃ—ಚೆನ್ನಾಗಿಯೇ ಇದೆ ಸಾರ್. ಎಲ್ಲ ಫಾರಂಗಳು ಕೊಡಿ ಸಾರ್, ನಾಳೆ ತುಂಬಿಸಿ ತರ್ತೀನಿ.

ಅ—ಆಗಲಿ ಈ ಫಾರಂಗಳು ತೆಗೋಳಿ, ಎಚ್ಚರಿಕೆಯಿಂದ ತುಂಬಿ.

ಕೃ—ಬರ್ತೀನಿ ಸಾರ್, ನಮಸ್ಕಾರ.

ಅ—ನಮಸ್ಕಾರ, ಹೋಗಿ ಬನ್ನಿ.

K—All right, Sir. "What doctor prescribed is the same as what the patient wanted."

O—Mr. Krishnappa, there are certain rules and regulations regarding taking and returning loans, I hope, you are familior with all those return

K—I know them well, Sir. Give me all the forms, Sir. I will fill them and tomorrow.

O—All right. Take those forms. Fill them carefully.

K—So, I will take leave. Namaskaara.

O—Namaskaara, see you.

EXERCISE

I Use the following words in your own sentences.

1. ದಿನಸಿ
2. ಸಂತೆಪೇಟೆ
3. ಮಾಲೀಕ
4. ಅನ್ಯಾಯ
5. ವರ್ಷ
6. ಬೆಂಕಿ
7. ಕಿಡಿ
8. ಛರಾಟೆ
9. ದಯೆ
10. ಮರಳು
11. ಜೀವವಿಮೆ
12. ಕಳೆದುಕೊಳ್ಳು
13. ಬಯಸು
14. ಪರಿಚಯ
15. ಕೆಲವು

II Construct five sentences on the model of the sentences given below.

1. ನಮ್ಮ ಸೋಮು, ನಿಮ್ಮ ಅಂಗಡಿ ವಿಚಾರ ಹೇಳಿದ ನಾನೂ ಸಹ, ಪತ್ರಿಕೆಯಲ್ಲಿ ಓದಿದೆ.
2. ಅಷ್ಟರಲ್ಲಿ ಜನರು ಬೆಂಕಿ ಬೆಂಕಿ ಅಂತ ಕೂಗಿದರು, ನನ್ನ ಹೆಂಡತಿ ನನಗೂ ಸುದ್ದಿ ತಿಳಿಸಿದರು.
3. ನಮ್ಮ ಬ್ಯಾಂಕಿನಿಂದ ಎಷ್ಟು ಸಾಲ ಇತ್ತು, ಹಿಂದೆ ಏನಾದರೂ ತೀರಿಸಿದ್ದಿರಾ ?
4. ಅವರಿಗೆ ಬೇರೆ, ಮೊನ್ನೆ ತಾನೆ 4 ಸಾವಿರ ರೂಪಾಯಿ ಕೊಟ್ಟೆ, ಒಟ್ಟಿನಲ್ಲಿ ನಾನು ಕೆಟ್ಟೆ.

III Write the negative sentences of the following sentences.

1. ರೋಗಿಯು ಹಾಲನ್ನು ಬಯಸಿದನು.
2. ಬೆಂಕಿಯು ಬೇಗ ಬೇಗ ಹರಡಿತು.

3. ಸಿಗರೇಟಿನಿಂದ ದೊಡ್ಡ ಕಿಡಿ ಹಾರಿತು.

4. ಬೆಂಗಳೂರಿನಲ್ಲಿ ಬೆಂಕಿಯಿಂದಾಗಿ ಬಹಳ ಅಂಗಡಿಗಳು ಸುಟ್ಟವು.

5. ಕಳ್ಳರು ನನ್ನ ಸೈಕಲ್ಲನ್ನು ಬ್ಯಾಂಕಿನ ಹತ್ತಿರ ಕದ್ದರು.

6. ಈ ಸಾರಿ ಭಾರಿ ಮಳೆಯಿಂದ ಬೆಳೆಗಳು ಹಾಳಾದವು.

7. ಜನರು ಕ್ಯೂನಲ್ಲಿ ಬಹಳ ಹೊತ್ತು ನಿಂತರು.

8. ಇವತ್ತು ಬೆಳಿಗ್ಗೆ ಬ್ಯಾಂಕು ಎಂಟು ಗಂಟೆಗೆ ಮುಚ್ಚಿತು.

9. ಅವರು ಚೆಕ್ ಪುಸ್ತಕವನ್ನು ಕಳೆದರು.

10. ಅವರು ತಮ್ಮ ಟೋಕನ್ ಅನ್ನು ಕೌಂಟರಿನಲ್ಲೇ ಮರೆತರು.

11. ನನ್ನ ಮಗಳು ಬೆಳಿಗ್ಗೆ ಆರು ಗಂಟೆಗೆ ಎದ್ದಳು.

12. ಅವರು ತಮ್ಮ ಮನೆಯ ಎಲ್ಲ ಸಾಮಾನನ್ನು ಸಾಗಿಸಿದರು.

13. ಈ ವರ್ಷ ಜೋಳ ಹುಳಿಯಿತು.

14. ಹೋದವಾರ ಹೊಲದಲ್ಲಿ ಕಳೆ ಕಿತ್ತೆವು.

15. ಮಾರ್ಕೆಟ್ಟಿನಲ್ಲಿ ಎಲ್ಲ ತರಕಾರಿಗಳೂ ಕೊಳೆತವು.

IV Write the following sentences in past tense.

1. ಭತ್ತದ ಗದ್ದೆಯನ್ನು ಕಟಾವು ಮಾಡ್ತೀವಿ.

2. ಬೆಳೆಗೆ ರೋಗ ಬರತ್ತೆ.

3. ಮ್ಯಾನೇಜರ್ ಅವರು ಸಂದೇಶವಾಹಕನಿಗೆ ಬೈತಾರೆ.

4. ನಿಮ್ಮ ಹಣಕ್ಕೆ ರಸೀತಿ ಕೊಡ್ತೀವಿ.

★

5. ಉಳಿತಾಯದಿಂದ ನಿಮ್ಮ ಹಣಕ್ಕೆ ತಕ್ಕ ಪ್ರತಿಫಲ ಪಡೀತೀರಿ.

6. ಅವನು ತರಕಾರಿ ತೂಕ ಹಾಕ್ತಾನೆ.

7. ಅವರು ಬೆಳಿಗ್ಗೆ ಬಸ್ಸನ್ನು ಹಿಡೀತಾರೆ.

8. ಪ್ರವಾಸಿಗರು ಬ್ಯಾಂಕಿನಲ್ಲಿ ಪ್ರವಾಸಿ ಚೆಕ್ಕು ಮುರಿಸ್ತಾರೆ.

9. ನಾನು ಪ್ರತಿದಿನ ಬ್ಯಾಂಕಿಗೆ ನಡೀತೀನಿ.

10. ನಿಮ್ಮ ಅರ್ಜಿಯನ್ನು ಪರಿಶೀಲಿಸ್ತೀನಿ.

V Conjugate the following verbs in past tense and present tense.

1. ನಡಿ.
2. ಮುಗಿ.
3. ಒಪ್ಪು.
4. ಒದಗಿಸು.
5. ದುಡಿ.
6. ಬೀಳು.
7. ಆರಿಸು.
8. ತೆಗಿ.
9. ಹೊಡುಕು.
10. ಕಾಣು
11. ಸೇರಿಸು.
12. ಕ್ಷಮಿಸು.

13. ತಿರುಗು,

14. ಕರಿ.

15. ಇರು.

16. ಕುಡಿ.

17. ತಿನ್ನು.

18. ಹೊರಡು.

19. ತಿಳಿಸು.

20. ಓಡಾಡು.

21. ಸಾಯು.

22. ನಗು.

23. ಅಳು.

24. ಕಾಯು.

25. ಇಡು.

ಪಾಠ ಹದಿನೆಂಟು

ಭಾಗ ಒಂದು

ರೇಷ್ಮೆ ಹುಳು ಸಾಕ್ತಾ‌ಇದೀನಿ

ಕೃಷ್ಣಪ್ಪ—ನಮಸ್ಕಾರ ಸರ್, ಏನು ತಾವು ಈ ಕಡೆ ಜೋರಾಗಿ ಹೋಗ್ತಾಇದೀರಿ ?

ಮ್ಯಾನೇಜರ್—ನಮಸ್ಕಾರ, ನಮ್ಮ ವಿಜಿಲೆನ್ಸ್ ವಿಭಾಗದವರು ನಂಜನಗೂಡಿಗೆ ಬ್ಯಾಂಕ್ ತನಿಖೆ ಮಾಡಕ್ಕೆ ಹೋಗ್ತಾ ಇದ್ದಾರೆ. ನಾನೂ ಸಹ ಅವರ ಜೊತೆ ಹೋಗ್ತಾಇದ್ದೀನಿ. ನೀವು ಇಲ್ಲಿ ಏನು ಮಾಡ್ತಾ ಇದೀರಿ.

ಕೃ—ಇಲ್ಲೇ ತಾಂಡವಪುರ ಗ್ರೈನರಿಗೆ ರೇಷ್ಮೆ ಮೊಟ್ಟೆ ಕೊಳ್ಳಕ್ಕೆ ಬಂದೆ, ಸರ್

ಮ್ಯಾ—ಯಾಕೆ ಭತ್ತ, ಕಬ್ಬು ಬೆಳೆಯೋದು ಸಾಕಾಯ್ತಾ ? ಸ್ವಲ್ಪ ಹೊಗೇಸೊಪ್ಪು ಗಿಡಗಳೂ ಇತ್ತು, ಅಲ್ಲವಾ ?

ಕೃ—ಈಗಿನ ಕಾಲಕ್ಕೆ ಅವೆಲ್ಲ ಲಾಭದಾಯಕ ಉದ್ಯಮಗಳು ಅಲ್ಲ ಸರ್, ಈಗ ಎಲ್ಲ ರೈತರೂ ರೇಷ್ಮೆ ಹುಳು ಸಾಕಕ್ಕೆ ಇಷ್ಟ ಪಡ್ತಾಇದಾರೆ. ಖರ್ಚೂ ಕಡಿಮೆ ಲಾಭನೂ ಜಾಸ್ತಿ.

ಮ್ಯಾ—ಹಾಗಾದರೆ ನೀವು ರೇಷ್ಮೆ ವ್ಯವಸಾಯಕ್ಕೆ ಯಾವಾಗ ಕೈ ಹಾಕಿದಿರಿ ?

ಕೃ— ಈಗಾಗಲೇ ಒಂದೂವರೆ ಎರಡು ವರ್ಷಗಳಿಂದ ಈ ಕೆಲಸ ಮಾಡ್ತಾಇದೀನಿ, ಸರ್.

ಮ್ಯಾ—ಈ ಉದ್ಯಮ ಹೇಗೆ ನಡೀತಾಇದೆ ? ಹೋದಿನ ವರ್ಷ ಲಾಭಗೀಭ ಚೆನ್ನಾಗಿ ಬಂತಾ ? ಬ್ಯಾಂಕಿನ ಸಾಲವನ್ನೇನಾದರೂ ಈ ಉದ್ಯಮಕ್ಕೆ ತೆಗೊಂಡಿರಾ ?

ಕೃ—ಸದ್ಯಕ್ಕೆ ಉದ್ಯಮ ಚೆನ್ನಾಗಿ ನಡೀತಾಇದೆ, ಹೋದ ವರ್ಷ ನಾಲ್ಕೈದು ಸಾವಿರ ರೂಪಾಯಿ ಲಾಭ ಬಂತು. ಬ್ಯಾಂಕಿನ ಸಾಲ ಮೂರು ಸಾವಿರ ರೂಪಾಯಿ ಇತ್ತು, ಅದನ್ನೆಲ್ಲ ತೀರಿಸಿದೆ.

ಮ್ಯಾ—ನೀವು ಯಾವಾಗಲೂ ಇದೇ ಗ್ರೈನರಿಯಿಂದ ಮೊಟ್ಟೆ ತೆಗೋತಾಇದೀರಾ ?

ಕೃ—ಸಾಮಾನ್ಯವಾಗಿ ಇದೇ ಗ್ರೈನರಿಯಿಂದ ಮೊಟ್ಟೆ ತೆಗೋತೀನಿ ಸರ್, ಕೆಲವೊಮ್ಮೆ ಚನ್ನಪಟ್ಟಣ ಗ್ರೈನರಿ ಯಿಂದಾನೂ ಮೊಟ್ಟೆ ತರಿಸ್ತಾಇರ್ತೀನಿ.

LESSON 18

PART I

I AM REARING SILK WORMS

Krishnappa—Namaskaara, Sir. What's the matter, Sir ? You are going so fast this side ?

Manager—Namaskaara. People from the vigilance department are going to Nanjanagudu for bank inspection. I am also going along with them. What are you doing here ?

K—I just came here, to Thandavapura grainary to purchase eggs.

M—Why ? You got tired, growing paddy and sugarcane ? You had some tobaccoo plants also. Didn't you ?

K—Nowadays all those occupations are not profitable, Sir. Now all the farmers like to rear silk worms. Expenditure is less and profit is more.

M—If so, when did you start your business of sericulture ?

K—I've been doing this for the last 1 - 2 years.

M—How is it going now ? Did you reap good profit in the previous year ? Did you take any loan from the bank for the professions ?

K—For the present it's going on well, Sir. The previous year I got a profit of 4 to 5 thousand Rs. I had a bank loan of 3 thousand Rs I repaid that.

M—Do you always take eggs from this grainary ?

K—Normally, I take eggs from this grainary only. Sometimes I get eggs from the Channapattana granary also.

ಮ್ಯಾ—ನೀವು ಎಷ್ಟು ಎಕರೆಯಲ್ಲಿ ಹಿಪ್ಪುನೇರಳೆ ಬೆಳೀತಾ ಇದೀರಿ.

ಕೃ—ಇಲ್ಲ ಸರ್, ನನ್ನ ಹೊಲದಲ್ಲಿ ಹಿಪ್ಪುನೇರಳೆ ಬೆಳೀತಾ ಇಲ್ಲ, ನಮ್ಮ ಊರಲ್ಲಿ ಕೆಲವರು ಹಿಪ್ಪುನೇರಳೆ ಬೆಳೀತಾ ಇದಾರೆ. ಆದರೆ ಹುಳ ಸಾಕ್ತಾ ಇಲ್ಲ, ನಾನು ಅಂತಹವರ ಹತ್ತಿರ ಕೊಳ್ತಾ ಇದೀನಿ.

ಮ್ಯಾ—ನಿಮಗೆ ಬೇಕಾಗುವಷ್ಟು ಹಿಪ್ಪುನೇರಳೆ ಅವರ ಹತ್ತಿರ ಸಿಕ್ಕುತ್ತೆ ತಾನೆ ?

ಕೃ— ಹೌದು ಸಾರ್, ಸಿಕ್ಕತ್ತೆ ನಾನೇನೂ ಬೇರೆಯಾಗಿ ಬೆಳೆಯ ಬೇಕಾಗಿಲ್ಲ.

ಮ್ಯಾ—ಹುಳಗಳಿಗೆ ರೋಗಗೀಗ ಬರ್ತಾ ಇರತ್ತಾ.

ಕೃ—ಆಗಾಗ ರೋಗ ಬರ್ತಾ ಇರತ್ತೆ ಸಾರ್, ಕೆಲವು ಸಾರಿ ಬರಲ್ಲ. ರೋಗಗಳಿಂದ ಏನೂ ನಮಗೆ ತೊಂದರೆ ಆಗ್ತಾ ಇಲ್ಲ.

ಮ್ಯಾ—ನಿಮಗೆ ರೇಷ್ಮೆ ವ್ಯವಸಾಯದಲ್ಲಿ ಏನಾದರೂ ತರಬೇತಿ ಸಿಕ್ಕಿದೆಯಾ ?

ಕೃ—ನನಗೇನೂ ಈ ವ್ಯವಸಾಯದಲ್ಲಿ ತರಬೇತಿ ಸಿಕ್ಕಿಲ್ಲ ಸರ್, ಅಲ್ಲಿ ಇಲ್ಲಿ ಅನುಭವ ಇದೆ. ಆದರೆ ನನ್ನ ಒಬ್ಬ ಮಗ B.Sc.,Ag. ಅವನೇ ಎಲ್ಲ ಎಚ್ಚರಿಕೆಯಿಂದ ನೋಡ್ಕೋತಾ ಇದಾನೆ ನನಗೇನೂ ಕಷ್ಟ ಕೊಡ್ತಾ ಇಲ್ಲ.

ಮ್ಯಾ—ಆಗಲೇ ನಿಮಗೆ ಅಷ್ಟು ದೊಡ್ಡ ಮಗ ಇದಾನಾ ?

ಕೃ—ಇದೇನ್ ಸಾರ್ ಹೀಗೆ ಕೇಳ್ತಾ ಇದೀರಿ, ಒಬ್ಬ ಮಗಳ ಮದುವೆ ಎರಡು ವರ್ಷದ ಹಿಂದೇನೇ ಮಾಡಿದೆ ಇವನಿಗೂ ಹೆಣ್ಣು ನೋಡ್ತಾ ಇದೀನಿ. ಈ ಕಾರ್ತೀಕದಲ್ಲಿ ಮದುವೆ ಮಾಡ್ತಾ ಇದೀನಿ.

ಮ್ಯಾ—ಈಗ ನಿಮ್ಮ ತಂದೆತಾಯಂದಿರು ಏನು ಮಾಡ್ತಾ ಇದಾರೆ ?

ಕೃ—ಅವರು ಊರಲ್ಲೇ ಮನೆಕಡೆ ಉಸ್ತುವಾರಿ ನೋಡ್ಕೊತಾ ಇದಾರೆ ಸರ್.

ಮ್ಯಾ—ನಾನು ಬರ್ತೀನಿ ಕೃಷ್ಣಪ್ಪ ತಡ ಆಗ್ತಾ ಇದೆ.

ಕೃ—ಓಹೋ ಹೋಗಿಬನ್ನಿ ಸರ್. ಸುಮ್ಮಗೆ ತಮ್ಮನ್ನು ನಾನು ತಡೆದೆ.

ಮ್ಯಾ—ಯಾವಾಗಲಾದರೂ ಮನೆಕಡೆ ಮಗನ ಜೊತೆ ಬನ್ನಿ.

ಕೃ—ಆಗಲಿ ಸರ್ ಬರ್ತೀನಿ ನಮಸ್ಕಾರ.

ಮ್ಯಾ—ನಮಸ್ಕಾರ.

M—In how many acres are you growing Mulberry ?

K—No, Sir. I am not growing Mulberry in my land. Some people in our village are growing Mulberry, but are not rearing silkworms. I am buying from such people.

M—Can you get as much mulberry as you want from them ?

K—Yes, sir. I do get. I need not grow separately.

M—Do worms get sick ?

K—They get sick now and then, Sir. Some times they don't. We are not put in to trouble by these diseases.

M—Have you got any training in sericulture ?

K—I have not got any training in this, Sir. I have some experience from here and there. But one of my sons in a B.Sc.,Ag., He is looking after this very carefully. He is not bothering me.

M—You have a son as old as that already ?

K—What's this Sir ? You are asking such questions. I performed the marriage of one of my daughters two years ago. I am in search of a girl for this fellow too. I am performing his marriage in this karthika.

M—What are your father and mother doing now !

K—They are looking after the management of the house in the village.

M—I will take leave of you Mr. Krishnappa. It is getting late.

K—Oh ! See you, Sir. I stopped you, unnecessarily.

M—Come to our house sometime along with your son.

K—All right, Sir. I will come. Namaskaara.

M—Namaskaara

ಭಾಗ ಎರಡು

ನಾನು ಮದುವೆ ಆಗ್ತಾ ಇದೀನಿ; ನನ್ನ ಮದುವೆಗೆ ಬನ್ನಿ.

ಸುರೇಶ್—ಏನಯ್ಯಾ ಗೋಪಾಲ್ ಖುಷಿಯಾಗಿ ಏನೋ ಹಂಚ್ತಾ ಇದೀಯ ?
ಗೋಪಾಲ್—ನಾನು ಯಾವಾಗಲೂ ಖುಷಿಯಾಗಿಯೇ ಇರ್ತೀನಿ. ಲಗ್ನ ಪತ್ರಿಕೆ ಹಂಚ್ತಾ ಇದೀನಿ.

ಸು—ಯಾರ ಮದುವೆಯ ಲಗ್ನಪತ್ರಿಕೆನಯ್ಯ ?
ಗೋ—ಯಾರದೋ ಮದುವೆಯ ಲಗ್ನಪತ್ರಿಕೆಯನ್ನ ನಾನು ಯಾಕೆ ಹಂಚಲಿ, ನನ್ನ ಮದುವೆಯ ಲಗ್ನ ಪತ್ರಿಕೇನೆ ಹಂಚ್ತಾ ಇದೀನಿ.

ಸು—ಯಾರನ್ನ ಮದುವೆ ಆಗ್ತಾ ಇದೀಯ. ಯಾವಾಗ ಮದುವೆ ಆಗ್ತಾ ಇದೀಯಾ. ಎಲ್ಲಾ ಗುಟ್ಟಾಗಿಯೇ ಯೋಜನೆ ಹಾಕಿದೀಯಾ ?
ಗೋ—ಯಾರು, ಏನು, ಎಲ್ಲ ಮದುವೆಗೆ ಬಾ ಅಲ್ಲಿ ತಿಳಿಯುತ್ತೆ.

ಸು—ಬರಲ್ಲ ಅಂತ ಯಾರು ಹೇಳಿದರು. ಹುಡುಗಿ ಯಾರು ಅಂತ ಹೇಳು. ನಿನ್ನ ಗಂಟೇನೂ ಹೋಗಲ್ಲ.
ಗೋ—ಆ ಹುಡುಗಿ ನಿನಗೂ ಗೊತ್ತು. ನೀನು ಇಲ್ಲೇ ನೋಡಿದೀಯೆ. ನಮ್ಮ ಬ್ಯಾಂಕಿನಲ್ಲಿ ಅವಳ ಅಕೌಂಟ್ ಸಹ ಇದೆ. ಆಗಾಗ ಬ್ಯಾಂಕಿಗೆ ಬರ್ತಾ ಇರ್ತಾಳೆ.

ಸು—ಯಾರೋ ನನಗೆ ಜ್ಞಾಪಕ ಬರ್ತಾ ಇಲ್ಲ, ಹೇಗೆ ಇದಾಳೆ ಹೇಳು.
ಗೋ—ತೆಳ್ಳಗೆ, ಬೆಳ್ಳಗೆ, ಉದ್ದಕ್ಕೆ, ಇದಾಳೆ ನೋಡು, ಅದೇ ಸರಸ್ವತೀಪುರದ ಸುಬ್ರಹ್ಮಣ್ಯಂ ಅವರ ಮಗಳು.

ಸು—ಓ ತಿಳೀತು ಬಿಡು. ಪರವಾಗಿಲ್ಲವೇ, ನೀನು ಬ್ಯಾಂಕಿನ ವ್ಯವಹಾರದ ಜೊತೆಗೆ ಈ ಖಾಸಗೀ ವ್ಯವಹಾರನೂ ಸಕ್ಸಸ್‌ಫುಲ್ ಆಗಿ ನಡೆಸಿದೆ. ಸ್ಮಾರ್ಟ್ ಆಗಿ ಇದೀಯ, ಯಾರಾದರೂ ಮದುವೆ ಆಗ್ತಾರೆ
ಗೋ—ಪ್ರೇಮ ವಿವಾಹ ಅಲ್ಲಪ್ಪ, ನನ್ನ ತಂದೆ ತಾಯಿ ಅವಳ ತಂದೆ ತಾಯಿ ಒಪ್ಪಿದರು. ಮದುವೆ ಮಾಡಕ್ಕೆ ತೀರ್ಮಾನಿಸಿದರು. ನನಗೂ ಅವಳಿಗೂ ಮೊದಲು ಏನೂ ಅಂಥಾ ಪರಿಚಯ ಇರಲಿಲ್ಲ ಮುಖ ಪರಿಚಯ ಇತ್ತು ಅಷ್ಟೇ.

PART 2

I AM MARRYING; KINDLY ATTEND MY MARRIAGE.

Suresh—What, Mr Gopal ? You are distributing something very happily.
Gopal—I am always happy. I am distributing wedding cards.

S—Whose wedding cards ?

G—Why should I distribute the wedding cards of the marriage of some others. I am distributing my own wedding cards.

S—Whom are you marrying ? When are you marrying ? You are doing every thing secretely.

G—You come for the marriage. You will come to know who and what of things.

S—Who told you that I will not come ? Tell me, who the girl is ? You will not loose anything.

G—You also know that girl. You have seen her here itself. She has an account also in our bank. Now and then she will be coming to the bank.

S—I am unable to recall. How is she ?

G—She is lean, fair and tall. She is the daughter of Saraswathipura's Subramaniam.

S—Oh ! I remember. You have done your personal business also succesfully along with bank business. You are smart, any one will marry you.

G—It is not a love marriage. My father and mother, her father and mother have agreed to the marriage. Earlier she and myself did not know each other very well. We were just acquaintances.

ಸು—ಈಗ ಆ ಹುಡುಗಿ ಕೆಲಸದಲ್ಲಿ ಇದ್ದಾಳೋ ಓದ್ತಾಇದ್ದಾಳೋ ?

ಗೋ—ಈ ಮಾರ್ಚಿನಲ್ಲಿ ಎಂ.ಎ. ಮುಗಿಸಿದಳು. ಇಲ್ಲೇ ಕಾಲೇಜಲ್ಲಿ Lecturer-postಗೆ ಅರ್ಜಿ ಹಾಕಿದಳು. ಸದ್ಯಕ್ಕೆ ಮನೆಯಲ್ಲೇ ಇದ್ದಾಳೆ. ಕೆಲಸಗಿಲಸಕ್ಕೆ ಹೋಗ್ತಾಇಲ್ಲ.

ಸು—ಇವತ್ತಲ್ಲ-ನಾಳೆ ಕೆಲಸ ಸಿಗತ್ತೆ. ಇಬ್ಬರೂ ದುಡೀತೀರಿ. ಮಜವಾಗಿ ಇರಬಹುದು. ಮದುವೆಗಾಗಿ ಭರ್ಜರಿಯಾಗಿ ಸಿದ್ಧತೆ ಇರಬೇಕಲ್ಲವಾ ?

ಗೋ—ಅದು ಮಾತ್ರ ಇಲ್ಲಪ್ಪ, ತುಂಬಾ ಸರಳ ಮದುವೆ. ನಾನು ನನ್ನ ಭಾವಿಹೆಂಡತಿ ಇಬ್ಬರೂ ನಿಮ್ಮೆಲ್ಲರನ್ನೂ ಮದುವೆಗೆ ಬನ್ನಿ ಅಂತಾ ಕರೀತಾಇದೀವಿ. ಬನ್ನಿ ಊಟ ಹೊಡೀರಿ. ನನ್ನ ಕಡೆಯಿಂದ ಐವತ್ತು ಅವಳ ಕಡೆಯಿಂದ ಐವತ್ತು ಸುಮಾರು ಒಂದು ನೂರು ಜನ ಬರ್ತಾ ಇದಾರೆ ಅಷ್ಟೆ. ಒಂದೇ ದಿವಸ ಸೆಲಬ್ರೇಷನ್.

ಸು—ಸರೀಪ್ಪ ನಿನ್ನ ಮದುವೆಗೆ ನಾನು ಬರಲ್ವಾ, ಬಂದೇ ಬರ್ತೀನಿ.

ಗೋ—ಇಲ್ಲಿ ನಿಂತು ಏನು ಮಾಡ್ತೀಯಾ ಬಾ ಬ್ಯಾಂಕ್‌ಗಾದರೂ ಹೋಗೋಣ.

ಸು—ಬೇಡಪ್ಪ ಇವೆಲ್ಲ ಏನೂ ಹಂಚಬೇಕು. ನಾನು ಒಂದು ತಿಂಗಳು ರಜೆಯಲ್ಲಿ ಇದೀನಿ, ಸಾಯಂಕಾಲ ಮನೇಕಡೆ ಬಾ ಅಲ್ಲೇ ಇರ್ತೀನಿ.

ಗೋ—ಆಗಲಿ ಬರ್ತೀನಿ.

S —Does she have a job or is she studying ?

G— She completed M.A., this March. She has applied for lecturer's post in the college. For the time being she is at home and shc is not going for any job.

S—If not today tomorrow she will get the job. Both of you will earn. You can be happy. There may be very good preparation for the marriage. Is n't there ?

G—Nothing of that kind. Very simple marriage. I and my would-be-wife are requesting you to come for our marriage. Come and have a nice lunch.

Fifty members from my side and fifty members from her side are coming for the marriage. Only one day celebration, certainly.

S—All right. I will certainly come for your marriage.

G—What are you doing standing here ? Come let us go to the bank.

S—No I have to distribute all these. I am on leave for a month. Come home in the evening . I will be there only .

G—All right. I will come.

DRILLS

REPETITION DRILL

ಅಧ್ಯಾಪಕ—ಯಾಕೆ ಸಾರ್ ತಾವು ಈ ಕಡೆ ಜೋರಾಗಿ ಹೋಗ್ತಾಇದೀರಿ	ಕಲಿಯುವವ— ....
ಅ— ನಂಜನಗೂಡಿಗೆ ಬ್ಯಾಂಕ್ ತನಿಖೆಗೆ ಹೋಗ್ತಾಇದೀನಿ.	ಕ— ....
ಅ—ತಾವು ಇಲ್ಲಿ ಏನು ಮಾಡ್ತಾಇದ್ದೀರಿ.	ಕ— ....
ಅ—ನಾನು ಇಲ್ಲಿ ರೇಷ್ಮೆ ಮೊಟ್ಟೆ ಕೊಳ್ತಾ ಇದ್ದೀನಿ.	ಕ— ....
ಅ—ಯಾಕೆ, ಈಗ ರೇಷ್ಮೆಹುಳು ಸಾಕಕ್ಕೆ ರೈತರು ಇಷ್ಟ ಪಡ್ತಾಇದ್ದಾರೆ.	ಕ— ....
ಅ—ರೇಷ್ಮೆ ಕೈಗಾರಿಕೆಯಿಂದ ಖರ್ಚು ಕಡಿಮೆ, ಲಾಭಾನೂ ಜಾಸ್ತಿ. ಆದ್ದರಿಂದ ಎಲ್ಲರೂ ಅದನ್ನೇ ಮಾಡ್ತಾಇದ್ದಾರೆ.	ಕ— ....
ಅ—ಈಗ ಈ ಉದ್ಯಮ ಹೇಗೆ ನಡೀತಾಇದೆ.	ಕ— ....
ಅ—ನನಗೇನೊ ಈ ಉದ್ಯಮ ಚೆನ್ನಾಗೇ ನಡೀತಾ ಇದೆ.	ಕ— ....
ಅ—ನೀವು ಯಾವಾಗಲೂ ಇದೇ ಗ್ರೈನರಿಯಿಂದ ಮೊಟ್ಟೆ ತಗೋತಾಇದೀರಾ ?	ಕ— ....
ಅ—ಹೌದು ಸಾರ್, ಸಾಮಾನ್ಯವಾಗಿ ಇದೇ ಗ್ರೈನರಿಯಿಂದ ಮೊಟ್ಟೆ ತೆಗೋತಾಇದೀನಿ.	ಕ— ....
ಅ—ನೀವು ಎಷ್ಟು ಎಕರೆಯಲ್ಲಿ ಹಿಪ್ಪುನೇರಳೆ ಬೆಳೀತಾಇದೀರಿ.	ಕ— ....

ಅಧ್ಯಾಪಕ—ನಾನು ನನ್ನ ಹೊಲದಲ್ಲಿ ಹಿಪ್ಪುನೇರಳೆ ಬೆಳೀತಾಇಲ್ಲ. ಕಲಿಯುವವ— ....

ಅ—ಹಾಗಾದರೆ, ಹಿಪ್ಪುನೇರಳೆಗೆ ಏನು ಮಾಡ್ತಾ ಇದೀರಿ. ಕ— ....

ಅ—ನಮ್ಮೂರಲ್ಲಿ ಕೆಲವರು ಹಿಪ್ಪುನೇರಳೆ ಬೆಳೀತಾ ಇದಾರೆ. ಆದರೆ ಹುಳ ಸಾಕ್ತಾಇಲ್ಲ. ಅಂತಹವರ ಹತ್ತಿರ ನಾನು ಕೊಳ್ತಾಇದೀನಿ. ಕ— ....

ಅ—ಈಗ ನಿಮ್ಮ ತಂದೆ ತಾಯಿ ಎಲ್ಲ ಏನು ಮಾಡ್ತಾಇದ್ದಾರೆ, ಕ— ....

ಅ—ಅವರು ಊರಲ್ಲೇ ಮನೆಕಡೆ ಉಸ್ತುವಾರಿ ನೋಡ್ತಾಇದ್ದಾರೆ. ಕ— ....

ಅ— ಈ ಕೈಗಾರಿಕೆಯಿಂದ ಎಷ್ಟು ಜನಕ್ಕೆ ಅನುಕೂಲ ಆಗ್ತಾಇದೆ. ಕ— ....

ಅ—ಈ ಕೈಗಾರಿಕೆಯಿಂದ ಅರವತ್ತು ಜನಕ್ಕೆ ಅನುಕೂಲ ಆಗ್ತಾಇದೆ. ಕ— ....

ಅ—ನಿಮ್ಮಲ್ಲಿ ಈಗ ಎಷ್ಟು ಜನ ಚಾಪೆ ಹೆಣೀತಾ ಇದ್ದಾರೆ. ಕ— ....

ಅ—ನಮ್ಮಲ್ಲಿ ಈಗ ನಲವತ್ತು ಜನ ಚಾಪೆ ಹೆಣೀತಾಇದ್ದಾರೆ. ಕ— ....

ಅ—ಈ ನಲವತ್ತು ಜನದಲ್ಲಿ ಎಷ್ಟು ಜನ ಕೆಲಸ ಕಲೀತಾಇದ್ದಾರೆ. ಕ— ....

ಅ—ಕಚ್ಚಾ ಮಾಲುಗಳೆಲ್ಲ ಸುಲಭವಾಗಿ ಸಿಗ್ತಾ ಇವೆಯಾ ? ಕ— ....

ಅ—ಕೆಲವು ಸುಲಭವಾಗಿ ಸಿಗ್ತಾ ಇವೆ. ಕೆಲವು ಸುಲಭವಾಗಿ ಸಿಕ್ತಾ ಇಲ್ಲ. ಕ— ....

ಅಧ್ಯಾಪಕ— ಒಣ್ಣಾನಾ ಬ್ಲಾಕಲ್ಲಿ ಕೊಳ್ತಾಇದೀನಿ.	ಕಲಿಯುವವ— ....
ಅ— ನೀವು ಉತ್ಪಾದನೆಗಳನ್ನ ಬೇರೆ ಊರಿಗೆ ಕಳಿಸ್ತಾಇಲ್ವ.	ಕ— ....
ಅ— ಇಲ್ಲ, ನಾನು ಬೇರೆ ಊರಿಗೆ ಕಳಿಸ್ತಾಇಲ್ಲ. ನಾನು ಇಲ್ಲೆ ಮಾರ್ತಾಇದೀನಿ.	ಕ— ....
ಅ— ನೀವು ಯಾಕೆ ಸಾಲದ ಕಂತು ಕಟ್ತಾಇಲ್ಲ.	ಕ— ....
ಅ— ಬಡ್ಡಿಗೆ ಬಡ್ಡಿ ಸೇರ್ತಾಇದೆ ಎಲ್ಲಾ ಒಟ್ಟಾಗಿ ಚಕ್ರ ಬಡ್ಡಿಯಾಗಿ ಬೆಳೀತಾಇದೆ.	ಕ— ....
ಅ— ಈಗ ಸ್ವಲ್ಪ ತೊಂದರೆ, ಮುಂದಿನ ತಿಂಗಳು ಕಟ್ತೀನಿ.	ಕ— ....
ಅ— ನಾನು ಮದುವೆ ಆಗ್ತಾಇದೀನಿ, ನನ್ನ ಮದುವೆಗೆ ಬರ್ತೀರಾ.	ಕ— ....
ಅ— ನೀನು ಏನು ಹಂಚ್ತಾ ಇದೀಯ ?	ಕ— ....
ಅ— ನಾನು ನನ್ನ ಲಗ್ನಪತ್ರಿಕೆ ಹಂಚ್ತಾಇದೀನಿ.	ಕ— ....
ಅ— ನೀನು ಯಾರನ್ನ ಮದುವೆ ಆಗ್ತಾಇದೀಯ	ಕ— ....
ಅ— ನಾನು ಒಬ್ಬ ಹುಡುಗೀನ ಮದುವೆ ಆಗ್ತಾ ಇದೀನಿ.	ಕ— ....
ಅ— ಆ ಹುಡುಗಿ ಕೆಲಸದಲ್ಲಿ ಇದಾಳೊ, ಓದ್ತಾ ಇದಾಳೊ.	ಕ— ....
ಅ— ಅವಳು ಓದ್ತಾನೂ ಇಲ್ಲ, ಕೆಲಸದಲ್ಲೂ ಇಲ್ಲ, ಮನೇಲಿ ಇದಾಳೆ.	ಕ— ....

SUBSTITUTION DRILL

1. ಅಧ್ಯಾಪಕ—ನಾನೀಗ ಚಾಪೆ ಕೇಂದ್ರಾನ ಹುಡುಕ್ತಾ ಇದೀನಿ. ಕಲಿಯುವವ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

2. ಅ—ನಾನು ಅಸಲು, ಬಡ್ಡಿ, ಚಕ್ರಬಡ್ಡಿ, ತೀರಿಸಕ್ಕೆ ತಿಳಿಸ್ತಾ ಇದ್ದೀನಿ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅಧ್ಯಾಪಕ—ಅದು	ಕಲಿಯುವವ— ....
ಅ—ಅವು	ಕ— ....
3. ಅ—ನಾನು ಬ್ಯಾಂಕಿನ ರೂಲ್ಸ್‌ಗಳನ್ನು ತಪ್ಪದೇ ಅನುಸರಿಸ್ತಾಇದ್ದೀನಿ.	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
4. ಅ—ನಾನು ಈಗ ಸರ್ಕಾರಿ ಬಸ್ಸಿಗೆ ಹೋಗಕ್ಕೆ ಕಾಯ್ತಾಇದ್ದೀನಿ.	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....

ಅಧ್ಯಾಪಕ—ಅದು	ಕಲಿಯುವವ— ....
ಅ—ಅವು	— ....
5. ಅ—ನಾನು ಈಗ ಯಾರಿಗೂ ಹೆಚ್ಚು ಹಣ ಸಾಲ ಕೊಡ್ತಾ ಇಲ್ಲ.	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
6. ಅ—ನಾನು ಯಾವಾಗಲೂ ಸುಳ್ಳು ಹೇಳ್ತಾ ಇರ್ತೀನಿ.	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....

★

ಅಧ್ಯಾಪಕ—ಅವರು ಕಲಿಯುವವ— ....

ಅ—ಅದು ಕ— ....

ಅ—ಅವು ಕ— ....

7. ಅ—ನಾನು ಬ್ಯಾಂಕಿನ ಎಲ್ಲ ಕಾಗದಗಳಿಗೂ ಉತ್ತರ ಬರೀತಾಇರ್ತೀನಿ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

8. ಅ—ನಾನು ಇವರಿಗೆ ಚಾಪೆ ಹೆಣೆಯುವುದನ್ನು ಕಲಿಸ್ತಾಇರ್ತೀನಿ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅಧ್ಯಾಪಕ—ಅವರು	ಕಲಿಯುವವ— ....
ಅ—ಅದು	ಕ— ....
ಅ—ಅವು	ಕ— ....
9. ಅ—ನಾನು ಪ್ರತಿದಿನ ಬ್ಯಾಂಕ್ ತನಿಖೆಗೆ ಹೋಗ್ತಾ ಇರಲ್ಲ.	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
10. ಅ—ನಾನು ಹೊಲದಲ್ಲಿ ಹಿಪ್ಪುನೇರಳೆ ಬೆಳೀತಾ ಇದೀನಾ ?	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....

ಅಧ್ಯಾಪಕ—ಅವರು ಕಲಿಯುವವ — ....

ಅ—ಅದು ಕ— ....

ಅ—ಅವು ಕ — ....

11. ಅ—ನಾನು ಬ್ಯಾಂಕಿನಲ್ಲಿ ಸಿಕ್ತಾಇರ್ತೀನಾ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

TRANSFORMATION DRILL

● Transform the following into negative.

ಅ—**ಮ್ಯಾನೇಜರ್** ಅವರು ನಿಮ್ಮನ್ನೆಲ್ಲ ಒಳಗೆ ಕರೀತಾಇದ್ದಾರೆ. ಕ— ....

ಅ—ಸಹಕಾರ ಸಂಘದವರು ನಿಮ್ಮ ಉತ್ಪಾದನೆಗಳನ್ನು ಕೊಳ್ತಾಇದ್ದಾರೆ. ಕ— ....

ಅ—ಚಾಪೆ ಹೆಣೆಯಕ್ಕೆ ಕೆಲಸಗಾರರು ಸಾಲ ಕೇಳ್ತಾಇದ್ದಾರೆ. ಕ— ....

ಅ—ನೀವು ಸಾಲ ಕೊಡಲ್ಲ ಅಂದಿರಿ, ಬುಟ್ಟಿ ಹೆಣೆಯುವವಳು ಅಳ್ತಾ ಇದಾಳೆ.	ಕಲಿಯುವವ—	....
ಅ—ಶರತ್ ಅವರು ಲಗ್ನಪತ್ರಿಕೆ ಹಂಚ್ತಾ ಇದ್ದಾರೆ	ಕ—	....
ಅ—ಆ ಹಳ್ಳಿಯ ರೈತರೆಲ್ಲರೂ ಸರಿಯಾಗಿ ಕಂತು ಕಟ್ತಾ ಇದ್ದಾರೆ.	ಕ—	....
ಅ—ಅದು ನಿಮ್ಮ ಹೊರೆಯನ್ನು ಇಳಿಸ್ತಾ ಇದೆ.	ಕ—	....
ಅ—ನೀವು ಎಲ್ಲ ಕಾನೂನುಗಳನ್ನೂ ಬದಲಾಯಿಸ್ತಾ ಇದೀರಾ ?	ಕ—	....
ಅ—ಅಕೌಂಟೆಂಟರು ಯಾವ ರೂಮಿನಲ್ಲಿ ಕೂತ್ಕೋತಾ ಇದಾರೆ ?	ಕ—	....
ಅ—ನೀವು ಈಗ ನನ್ನ ಸಾಲಕ್ಕೆ ಎಷ್ಟು ಬಡ್ಡಿ ಹಾಕ್ತಾ ಇದೀರಿ ?	ಕ—	....
ಅ—ಈಗ ಜೀಪು ಎಲ್ಲಿಗೆ ಹೊರಡ್ತಾ ಇದೆ ?	ಕ—	....
ಅ—ನೀವು ಹಳ್ಳಿಯಿಂದ ನನಗೆ ಏನು ತರ್ತಾ ಇದ್ದೀರಿ ?	ಕ—	....
ಅ—ಸಾಲ ವಾಪಸ್ ಕೊಡಕ್ಕೆ ಒಪ್ಪಿಸ್ತಾ ಇದ್ದೀನಿ.	ಕ—	....
ಅ—ಒಳ್ಳೆ ಬೆಳೆ ಬೆಳೆಯಕ್ಕೆ ಬ್ಯಾಂಕಿಂದ ಬೆಳೆ ಸಾಲ ತಗೋತಾ ಇದ್ದೀನಿ.	ಕ—	....
ಅ—ಪ್ರತಿದಿನ ನಾನು ಬ್ಯಾಂಕಿಗೆ ನಡೀತಾ ಇದೀನಿ.	ಕ—	....
ಅ—ಈ ಹಳ್ಳಿಯಲ್ಲಿ ಯಾರು ಯಾರು ಸರಿಯಾಗಿ ಸಾಲ ತೀರಿಸ್ತಾ ಇಲ್ಲ ?	ಕ—	....
ಅ—ನಿಮ್ಮೂರಲ್ಲಿ ಭತ್ತದ ಕಳೆ ಕೀಳ್ತಾ ಇದ್ದೀರಿ, ಅಲ್ವ ?	ಕ—	....

ಅಧ್ಯಾಪಕ—ನಮ್ಮೂರಲ್ಲಿ ರೋಗದಿಂದ ಕೋಳಿಗಳು ಸಾಯ್ತಾಇವೆ. ಕಲಿಯುವವ— ....

ಅ—ನಾವೆಲ್ಲರೂ ನಿಮ್ಮ ಜೊತೆಗೆ ತುಂಬಾ ಸಹಕರಿಸ್ತಾಇದ್ದೀವಿ. ಕ— ....

EXPANTION DRILL

1. ಅ—ನಾನು ವಿಜಿಲೆನ್ಸ್ ವಿಭಾಗದವರ ಜೊತೆ ನಂಜನಗೂಡಿಗೆ ಬ್ಯಾಂಕ್ ತನಿಖೆ ಮಾಡಕ್ಕೆ ಹೋಗ್ತಾಇದ್ದೀನಿ. ಕ— ....

ಅ—ನಾನು ಹೋಗ್ತಾಇದೀನಿ. ಕ— ....

ಅ—ತನಿಖೆ ಮಾಡಕ್ಕೆ ಕ— ....

ಅ—ಬ್ಯಾಂಕ್ ಕ— ....

ಅ—ನಂಜನಗೂಡಿಗೆ ಕ— ....

ಅ—ವಿಭಾಗದವರ ಜೊತೆ ಕ— ....

ಅ—ವಿಜಿಲೆನ್ಸ್ ಕ— ....

2. ಅ—ಕೃಷ್ಣಪ್ಪನವರು ಈಗಾಗಲೇ ಒಂದೂವರೆ ಎರಡು ವರ್ಷಗಳಿಂದ ರೇಷ್ಮೆಹುಳು ಸಾಕ್ತಾಇದ್ದಾರೆ. ಕ— ....

ಅ—ಕೃಷ್ಣಪ್ಪನವರು ಸಾಕ್ತಾಇದ್ದಾರೆ. ಕ— ....

ಅ—ರೇಷ್ಮೆಹುಳು ಕ— ....

ಅ—ವರ್ಷಗಳಿಂದ ಕ— ....

ಅ—ಎರಡು ಕ— ....

ಅಧ್ಯಾಪಕ— ಒಂದೊವರೆ	ಕಲಿಯುವವ— ....
ಅ—ಈಗಾಗಲೆ	ಕ— ....
3. ಅ—ಅವರಿಗೆ ಕೆಲಸದ ಕಲಿಕೆ ಸಮಯದಲ್ಲಿ ದಿನಕ್ಕೆ ಎಷ್ಟು ಕೂಲಿ ಕೊಡ್ತೀರಿ?	ಕ— ....
ಅ—ಅವರಿಗೆ ಕೊಡ್ತೀರಿ	ಕ— ....
ಅ—ಎಷ್ಟು ಕೂಲಿ	ಕ— ....
ಅ—ದಿನಕ್ಕೆ	ಕ— ....
ಅ—ಕಲಿಕೆ ಸಮಯದಲ್ಲಿ	ಕ— ....
ಅ—ಕೆಲಸದ	ಕ— ....
4. ಅ—ಅವಳು ಸರ್ಕಾರಿ ಕೆಲಸದಲ್ಲಿ ಇದ್ದಾಳೋ ಕಾಲೇಜಿನಲ್ಲಿ ಓದ್ತಾ ಇದ್ದಾಳೋ ?	ಕ— ....
ಅ—ಅವಳು ಓದ್ತಾ ಇದ್ದಾಳೋ	ಕ— ....
ಅ—ಕಾಲೇಜಿನಲ್ಲಿ	ಕ— ....
ಅ—ಕೆಲಸದಲ್ಲಿ ಇದ್ದಾಳೋ	ಕ— ....
ಅ—ಸರ್ಕಾರಿ	ಕ— ....

EXERCISES

I Choose the appropriate form from the three forms given below each sentence to complete the sentence correctly.

1. ಅವರು ಬೆಂಗಳೂರಿಗೆ ———
   (ಹೋಗ್ತಾಇದಾರೆ, ಹೋಗ್ತಾಇದ್ದೀವಿ, ಹೋಗ್ತಾಇದ್ದನು.)

2. ಅವನು ಪ್ರತಿದಿನವೂ ಬ್ಯಾಂಕಿಗೆ ———
   (ಹೋಗ್ತಾಇರತ್ತೆ, ಹೋಗ್ತಾಇರ್ತಾನೆ, ಹೋಗ್ತಾಇರ್ತಾರೆ.)

3. ಅವರೆಲ್ಲರೂ ಸಿನಿಮಾ ———
   (ನೋಡ್ತಾಇದಾರೆ, ನೋಡ್ತಾಇರತ್ತೆ, ನೋಡ್ತಾಇರ್ತಾನೆ.)

4. ನೀವು ಯಾವಾಗಲೂ ಇದೇ ಫಾರಂನಿಂದ ಮೊಟ್ಟೆ ——— ?
   (ತಗೋತಾಇದೀರಾ, ತಗೋತಾಇರ್ತಾನಾ, ತಗೋತಾಇರತ್ತಾ.)

5. ನಾನು ದಿನಾ ತರಕಾರಿಯನ್ನು ಮಾರ್ಕೆಟ್‌ನಲ್ಲಿ ———
   (ಕೊಳ್ತಾಇವೆ, ಕೊಳ್ತಾಇದೆ, ಕೊಳ್ತಾಇರ್ತೀನಿ.)

6. ಸ್ಟೇಟ್ ಬ್ಯಾಂಕು ನಮ್ಮ ಊರಿಗೆ ಬಂತು, ಆದುದರಿಂದ ಎಲ್ಲರಿಗೂ ಅನುಕೂಲ———
   (ಆಗ್ತಾಇದ್ದ, ಆಗ್ತಾಇವೆ, ಆಗ್ತಾಇದೆ.)

7. ನಾನು ನೋಡಿದಾಗ ಅವಳು ಚಾಪೆ ———
   (ಹೆಣೀತಾಇದ್ದಳು, ಹೆಣೀತಾಇದ್ದರು, ಹೆಣೀತಾಇದ್ದಾರೆ.)

8. ನಿಮ್ಮ ಹಣಕ್ಕೆ ಬಡ್ಡಿಗೆ ಬಡ್ಡಿ ———
   (ಬೆಳೀತಾಇದ್ದ, ಬೆಳೀತಾಇದೆ, ಬೆಳೀತಾಇವೆ.)

II Convert the following verbs into present continuous tense and use them in your own sentences.

1. ಮಾಡು.

2. ತಿನ್ನು.

3. ಓದು.

4. ಹಿಡಿ.

5. ಓಡು.

6. ಕಳಿಸು.

7. ತಗೋ.

8. ಬೆಳಿ.

9. ಕೊಳ್ಳು.

10. ನೋಡು.

III Rewrite the following sentences into negative.

1 ಸೋಮನ ಹಳ್ಳಿಗೆ ಬ್ಯಾಂಕ್ ತನಿಖೆಗೆ ಹೋಗ್ತಾ ಇದೀನಿ.

2 ನಾನು ಈಗ ಮಾರ್ಕೆಟ್‌ನಲ್ಲಿ ತರಕಾರಿ ಕೊಳ್ತಾ ಇದೀನಿ.

3 ಅವರು ಪ್ರತಿದಿನದಂತೆ ಬ್ಯಾಂಕಲ್ಲಿ ಕೆಲಸ ಮಾಡ್ತಾ ಇದಾರೆ.

4 ನೀವು ಭತ್ತವನ್ನು ಎಷ್ಟು ಎಕರೆಯಲ್ಲಿ ಬೆಳೀತಾ ಇದೀರಿ?

5 ನಿಮ್ಮ ಫಾರಂನಲ್ಲಿ ಎಷ್ಟು ಕೋಳಿಗಳನ್ನು ಸಾಕ್ತಾ ಇದೀರಿ?

6 ನೀನು ದನಗಳ ಫಾರಂನಲ್ಲಿ ಏನು ಮಾಡ್ತಾ ಇದೀಯ?

7 ಅವರು ವಾರಕ್ಕೆ ಎರಡು ಸಿನಿಮಾ ನೋಡ್ತಾ ಇದಾರೆ.

8 ಮಕ್ಕಳೆಲ್ಲಾ ಸೇರಿ ಕ್ರಿಕೆಟ್ ಆಟ ಆಡ್ತಾ ಇದಾರೆ.

9 ಮೇನೇಜರ್ ಅವರು ಫೀಲ್ಡ್ ಆಫೀಸರ್ ಅವರನ್ನು ಹಳ್ಳಿಗೆ ಕಳಿಸ್ತಾಇದಾರೆ.

10 ನಮ್ಮ ಬ್ಯಾಂಕಿನ ಫೀಲ್ಡ್ ಆಫೀಸರ್‌ರವರು ಮದುವೆ ಆಗ್ತಾಇದಾರೆ.

IV Match the following.

1

	A		B	
1	ನಾನು	a)	ಇದೀಯ	( )
2	ನಾವು	b)	ಇದಾನೆ	( )
3	ನೀನು	c)	ಇದಾರೆ	( )
4	ನೀವು	d)	ಇದೀನಿ	( )
5	ಅವನು	e)	ಇದೆ	( )
6	ಅವಳು	f)	ಇದ್ದೀವಿ	( )
7	ಅವರು	g)	ಇವೆ	( )
8	ಅದು	h)	ಇದ್ದೀರಿ	( )
9	ಅವು	i)	ಇದಾಳೆ	( )

2

	A		B	
1	ನಾನು	a)	ಮಾಡ್ತೀಯ	( )
2	ನಾವು	b)	ಮಾಡ್ತಾನೆ	( )
3	ನೀನು	c)	ಮಾಡ್ತಾಳೆ	( )

A	B	
4 ನೀವು	d) ಮಾಡತ್ತೆ	( )
5 ಅವನು	e) ಮಾಡ್ತೀನಿ	( )
6 ಅವಳು	f) ಮಾಡ್ತಾರೆ	( )
7 ಅವರು	g) ಮಾಡ್ತೀವಿ	( )
8 ಅದು	h) ಮಾಡತ್ವೆ	( )
9 ಅವು	i) ಮಾಡ್ತೀರಿ	( )

ಪಾಠ ಹತ್ತೊಂಭತ್ತು

ಭಾಗ ಒಂದು

ಹೈನುಗಾರಿಕೆ

ತಿಮ್ಮಪ್ಪ— ಒಳಗೆ ಬನ್ನಿ ಸರ್, ಇದೇ ನಮ್ಮ ಹೊಸ ಫಾರಂ.

ಅಧಿಕಾರಿ— ಈ ಫಾರಂಗೆ ನೀವು ಎಷ್ಟು ದಿನದ ಹಿಂದೆ ಬಂದ್ರಿ. ಇದಕ್ಕಿಂತ ಮೊದಲು ನೀವು ಎಲ್ಲಿ ಫಾರಂ ನಡೆಸ್ತಾ ಇದ್ರಿ.

ತಿ— ಇಲ್ಲಿಗೆ ಬರಕ್ಕೆ ಮೊದಲು ನಾವು ಊರಿನ ಒಳಗೆ ಫಾರಂ ನಡೆಸ್ತಾ ಇದ್ವಿ.

ಅ— ಅಲ್ಲಿಂದ ಇಲ್ಲಿಗೆ ನೀವು ಯಾಕೆ ಬಂದ್ರಿ ?

ತಿ— ಪ್ರಾರಂಭದಲ್ಲಿ ನಾವು ನಾಡ ಹಸುಗಳನ್ನು ಸಾಕ್ತಾ ಇದ್ವಿ. ಅವು ಸಾಕಷ್ಟು ಹಾಲನ್ನು ಕೊಡ್ತಾ ಇರಲಿಲ್ಲ. ಮೇವನ್ನು ಮಾತ್ರ ಸಿಕ್ಕಾಪಟ್ಟೆ ಮೇಯ್ತಾ ಇದ್ವು. ಲಾಭಾನೇ ಬರ್ತಾ ಇರಲಿಲ್ಲ. ನಷ್ಟ ಮಾತ್ರ ಆಗ್ತಾ ಇತ್ತು. ಆದ್ದರಿಂದ ಜಾತಿ ಹಸುಗಳ ಈ ಫಾರಂಅನ್ನು ಪ್ರಾರಂಭಿಸಿದೆವು.

ಅ— ಈ ಫಾರಂಅನ್ನು ಹೇಗೆ ಪ್ರಾರಂಭಿಸಿದಿರಿ.

ತಿ— ಇತ್ತೀಚೆಗೆ ಸರಕಾರದಿಂದ ಬ್ಯಾಂಕಿನ ಮೂಲಕ ಸಹಾಯಧನ ಸಿಕ್ತು. ಜೊತೆಗೆ ನಾವೂ ಸಹ ನಮ್ಮ ಫಾರಂಅನ್ನು ವಿಸ್ತರಿಸಕ್ಕೆ ಯೋಚಿಸ್ತಾ ಇದ್ವಿ. ಮರೀಗೌಡರು ಈ ಎರಡು ಎಕರೆ ಜಮೀನು ಮಾರ್ತಾ ಇದ್ರು. ನಾವು ನಮ್ಮ ಹಳೇ ಫಾರಂಅನ್ನು ಮಾರಿದಿವಿ ಹೊಸ ಪಾರಂಅನ್ನು ಪ್ರಾರಂಭಿಸಿದಿವಿ.

ಅ— ನಿಮ್ಮ ಹಿಂದಿನ ಫಾರಂ ಅನುಭವಕ್ಕೂ ಈಗಿನ ಈ ಫಾರಂ ಅನುಭವಕ್ಕೂ ವ್ಯತ್ಯಾಸ ಏನಾದರೂ ಇದೆಯಾ ?

ತಿ— ವ್ಯತ್ಯಾಸಕ್ಕೇನು ಸರ್, ತುಂಬಾ ಇದೆ. ಹಿಂದೆ ನಾವೇ 8-10 ಜನ ಒಂದಾಗಿ ಫಾರಂ ನಡೆಸ್ತಾ ಇದ್ವಿ. ಈ ಊರಿನ ಕೆಲಭಾಗದ ಮಟ್ಟಿಗೆ ಹಾಲು, ಮೊಸರು, ಬೆಣ್ಣೆ, ತುಪ್ಪ ಉತ್ಪಾದಿಸ್ತಾ ಇದ್ವಿ. ಈಗ ಹೊಸ ಡೈರಿಗೆ ಈ ತಾಲ್ಲೂಕಿನ ಹಳ್ಳಿಜನ ಹಾಲು ಉತ್ಪಾದಕರು ಸದಸ್ಯರಾದರು. ಹೆಚ್ಚು ಕಡಿಮೆ ಈ ತಾಲ್ಲೂಕಿಗೆಲ್ಲ ಹಾಲು, ಮೊಸರು, ಬೆಣ್ಣೆ, ತುಪ್ಪ ಒದಗಿಸ್ತೀವಿ.

LESSON 19

PART I

MILK INDUSTRY

Thimmappa—Please come in, Sir. This is our new farm.

Field Officer—How many days ago did you come to this farm? Where were you running the farm earlier?

T—Before coming here we were running a farm inside the village.

F—Why did you come here from there?

T—Earlier we were rearing the country cows, those were not giving us sufficient milk. They were eating a lot of fodder. We were not at all getting any profit, we were running under loss. So we started this farm of the through bred cows.

F—How did you start this farm?

T—Recently we got a government loan through the bank. Along with that we were also thinking of expanding the farm. Mr. Marigowda was to sell two acres of land. We sold our old farm and started this new farm.

F—Is there any difference between your experience with the old farm and that with the new one?

T—There is a lot of difference, Sir. Earlier eight to ten of us were running the farm jointly. We were producing milk, curds, butter, ghee, which were sufficient to some parts of this place. Now many of the milk producers of this taluk became the members of this new dairy We. supply milk, curds, butter, ghee to almost the whole taluk.

ಅ— ಸಂತೋಷ, ಈ ರೀತಿಯ ಸಹಕಾರೀ ಕಾರ್ಯಕ್ರಮಗಳು ಬಹಳ ಅವಶ್ಯಕ. ಇಂಥಹುದೇ ಸಹಕಾರಿ ಕಾರ್ಯಕ್ರಮ ಗುಜರಾತ್‌ನ ಆನಂದ್‌ನಲ್ಲಿ ನಡೀತಾ ಇದೆ. ಅದೂ 25 ವರ್ಷದಿಂದ ನಡೀತಾನೇ ಇದೆ.

ತಿ— ನೋಡಿ ಸರ್, ಮೊದಲು ದನಗಳಿಗೆ ಮೇವು ಒದಗಿಸೋದು, ರಾಸುಗಳ ರೋಗಗಳಿಗೆ ಔಷಧಿ ಒದಗಿಸೋದು, ಎಲ್ಲಕ್ಕಿಂತ ಹೆಚ್ಚಾಗಿ ಅವುಗಳನ್ನು ಸರಿಯಾಗಿ ನೋಡಿಕೊಳ್ಳೋದು ತುಂಬಾ ಕಷ್ಟ ಆಗ್ತಾ ಇತ್ತು. ಆದರೆ ಈಗ ಆ ಕಷ್ಟಗಳೆಲ್ಲ ಇಲ್ಲ.

ಅ— ಲಾಭಾಂಶವನ್ನೆಲ್ಲ ಹೇಗೆ ಹಂಚಿಕೊಳ್ತೀರಿ ?

ತಿ— ಮೊದಲ ವರ್ಷದ ಲಾಭಾಂಶದಲ್ಲಿ ಇಷ್ಟು, ಅಂತ ಹೇಳಿ ವಾರ್ಷಿಕ ಅಭಿವೃದ್ಧಿಗೆ ಬೇರೆ ಇಡ್ತಾ ಇದ್ವಿ. ಬಾಕಿ ಹಣನ ಆರೂ ಜನ ಸಮನಾಗಿ ಹಂಚಿಕೊಳ್ತಾ ಇದ್ವಿ. ಆದರೆ ಈಗ ಎಲ್ಲ ಸದಸ್ಯರಿಗೂ ಶೇರು ಹಣಕ್ಕೆ ತಕ್ಕನಾಗಿ ಲಾಭಾಂಶನ ಹಂಚ್ತಾ ಇದೀವಿ.

ಅ— ಮೊದಲು ನಿಮ್ಮ ಫಾರಂ ಕೆಲಸಗಾರರಿಗೆ ಬೋನಸ್ ಕೊಡ್ತಾ ಇದ್ದಿರಾ ?

ತಿ— ಇಲ್ಲ, ಮೊದಲು ನಾವು ನಮ್ಮ ಫಾರಂ ಕೆಲಸಗಾರರಿಗೆ ಬೋನಸ್ ಕೊಡ್ತಾ ಇರಲಿಲ್ಲ, ಏಕೆಂದರೆ ಅವರೆಲ್ಲರೂ ದಿನಗೂಲಿ ಆಳುಗಳು. ಆದರೆ ಈಗ ನಮ್ಮ ಎಲ್ಲ ಕೆಲಸಗಾರರಿಗೂ 8% ಬೋನಸ್ ಕೊಡ್ತಾ ಇದೀವಿ.

ಅ— ಬಹಳ ಒಳ್ಳೆಯದು, ಏಕೆಂದರೆ ಅವರ ಕೆಲಸದಿಂದಾನೇ ನಿಮಗೆ ಲಾಭ ಬರೋದು. ನಿಮ್ಮಲ್ಲಿ ಯಾರಾದರೂ ಪಶುವೈದ್ಯರು ಇದಾರಾ ?

ತಿ— ಹೌದು ಸರ್, ಒಬ್ಬರು full time ಪಶುವೈದ್ಯರು ನಮ್ಮ ಫಾರಂನಲ್ಲಿ ಕೆಲಸಕ್ಕೆ ಇದಾರೆ. ಇಬ್ಬರು ಕಾಂಪೌಂಡರ್‌ಗಳು ಸಹ ಅವರ ಸಹಾಯಕ್ಕಾಗಿ ಇದಾರೆ.

ಅ— ನಿಮ್ಮ ಫಾರಂ ಚೆನ್ನಾಗಿ ಇದೆ. ಆಧುನಿಕವಾಗಿಯೂ ಇದೆ. ನಾನು ಬರ್ತೀನಿ, ನಮಸ್ಕಾರ.

ತಿ— ನಮಸ್ಕಾರ, ಮತ್ತೆ ಬನ್ನಿ ಸರ್.

ಅ— ಆಗಲಿ, ನೋಡೋಣ.

F—Fine. This type of co-operative work is essential. This type of work is going on in Anand of Gujarat. It has been going on for the past 25 years.

T—You see, Sir, earlier it was very difficult to supply fodder to the cattle, to supply medicine for the cattle, and above all to lookafter them. But now all those difficulties are no longer there.

F—How do you get the profit distributed?

T—Earlier we were keeping some part of the profit aside as amount for development for the whole year. We used to get the rest of the money distributed among the six of us equally. But now all the profit is being distributed among all the share holders according to their share.

F—Were you giving bonus to the farm workers earlier?

T—No. Earlier we were not giving bonus to the workers of our farm. Because all of them were daily wagers. But now we are giving eight percent of bonus to all the workers.

F—Very good, because of their work only you get profit. Is there any veterinary doctor with you?

T—Yes, Sir. One full-time veterinary doctor's with us. Two compounders are also there to assist him.

F—Your farm is good. It is modern too. I will take leave of you. Namaskaara.

T—Namaskaara. Please come again.

F—All right let me see.

ಭಾಗ ಎರಡು

ಸಂದರ್ಶನ

ಅಧಿಕಾರಿ— ನಮಸ್ಕಾರ, ನಿಮ್ಮ ಹೆಸರು ಏನು ? ಕೂತ್ಕೊಳಿ.
ಸತೀಶ—ನಮಸ್ಕಾರ ಸರ್. ನನ್ನ ಹೆಸರು ಸತೀಶ.

ಅ—ನಿಮ್ಮ ವಿದ್ಯಾರ್ಹತೆ ಏನು ?
ಸ—ನಾನು ಅರ್ಥಶಾಸ್ತ್ರದಲ್ಲಿ ಸ್ನಾತಕ ಸರ್.

ಅ—ಅರ್ಥಶಾಸ್ತ್ರದ ಜೊತೆ ಬೇರೆ ಯಾವ ಯಾವ ವಿಷಯಗಳನ್ನು ಓದಿದಿರಿ ?
ಸ—ಅರ್ಥಶಾಸ್ತ್ರದ ಜೊತೆ ಸಮಾಜಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಓದಿದೆ ಸರ್.

ಅ— ಯಾವ ದರ್ಜೆಯಲ್ಲಿ ತೇರ್ಗಡೆಯಾದಿರಿ ?
ಸ—ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದೆ ಸರ್.

ಅ— ಯಾವ ಕಾಲೇಜಿನಲ್ಲಿ ಓದ್ತಾ ಇದ್ದಿರಿ ?
ಸ—ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ಓದ್ತಾ ಇದ್ದೆ, ಸರ್.

ಅ—ಇದಕ್ಕೆ ಮೊದಲು ನೀವು ಎಲ್ಲಾದರೂ ಕೆಲಸಮಾಡ್ತಾ ಇದ್ದಿರಾ ?
ಸ—ಹೌದು ಸರ್, ನಾನು ಇದಕ್ಕೆ ಮೊದಲು ಒಂದು ಕಬ್ಬಿಣದ ಕಾರ್ಖಾನೆಯಲ್ಲಿ ಅಕೌಂಟೆಂಟ್ ಕೆಲಸ ಮಾಡ್ತಾ ಇದ್ದೆ.

ಅ—ಎಷ್ಟು ವರ್ಷ ಅಕೌಂಟೆಂಟ್ ಕೆಲಸ ಮಾಡ್ತಾ ಇದ್ದಿರಿ ?
ಸ— ಎರಡು ವರ್ಷ ಅಕೌಂಟೆಂಟ್ ಕೆಲಸ ಮಾಡ್ತಾ ಇದ್ದೆ, ಸರ್.

ಅ— ಸಧ್ಯಕ್ಕೆ ನೀವು ಎಲ್ಲಿ ಕೆಲಸ ಮಾಡ್ತಾ ಇದ್ದೀರಿ ?
ಸ— ಸಧ್ಯಕ್ಕೆ ನಾನು ಒಂದು ಖಾಸಗೀ ಕಾಲೇಜಿನಲ್ಲಿ ಹಂಗಾಮಿ ಉಪನ್ಯಾಸಕ, ಸರ್.

ಅ—ಈ ಕೆಲಸಕ್ಕೆ ನೀವು ಏಕೆ ಅರ್ಜಿ ಹಾಕಿದಿರಿ ?
ಸ—ನನಗೆ executive ಕೆಲಸ ಅಂದರೆ ತುಂಬಾ ಇಷ್ಟ. ಯಾಕಂದ್ರೆ ಜನಗಳ ಜೊತೆ ಬೆರೆಯಬಹುದು, ಅವರಿಗೆ ಕೈಲಾದ ಸಹಾಯ ಮಾಡಬಹುದು. ಕೆಲಸ ತೃಪ್ತಿ ಕೊಡತ್ತೆ. ಆದ್ದರಿಂದ ಈ ಕೆಲಸಕ್ಕೆ ಅರ್ಜಿಹಾಕಿದೆ.

PART 2

INTERVIEW

Officer—Namaskaara, What is your name ? Please sit.
Satish—Namaskaara, Sir. My name is Satish.

O—What is your educational qualification ?
S—Iam an MA in economics, Sir.

O—What else did you study along with economics ?
S—Along with economics, I studied Sociology and Political Science.

O—In which grade did you pass ?
S—I passed in the first grade, Sir.

O—In which college were you studying ?
S—I was studying in the government college at Bangalore, Sir.

O—Were you working anywhere earlier ?
S—Yes, Sir. Earlier, I was working in a Iron and steel factory as an accoutant.

O—How many years did you work as an accountant ?
S—I worked as an accountant for two years.

O—For the present where are you working ?
S—For the time being I am working in a college as a temporary lecturer.

O—Why did you apply for this job ?
S—I like the executive job. Because I can mix with people, can help them to the extent possible. The job gives satisfaction. So I applied for this job.

★

ಅ—ನಿಮ್ಮ ಮನೆಯಲ್ಲಿ ಬೇರೆಯಾರಿಗಾದರೂ ಕೆಲಸವಿದೆಯೇ ?

ಸ—ನಮ್ಮ ತಂದೆ ರಿಟೈರ್ಡ್ ಅರಣ್ಯಾಧಿಕಾರಿ. ಅವರಿಗೆ ಒಂದು ವರ್ಷದ ಹಿಂದೆ ನಿವೃತ್ತಿ ಆಯಿತು. ನನ್ನ ತಮ್ಮನೂ ಎಂ.ಎ. ಅವನು ಮೊದಲು ಸಹಕಾರಿ ಸಂಘದಲ್ಲಿ ಕೆಲಸ ಮಾಡ್ತಾಇದ್ದ. ಈಗ ಅವನನ್ನ ಕೆಲಸದಿಂದ ತೆಗೆದರು. ಆದುದರಿಂದ ಅವನು ನಿರುದ್ಯೋಗಿ. ನನ್ನ ಅಕ್ಕ ಮದುವೆಗೆ ಮೊದಲು ಸ್ಟೆನೋ ಕೆಲಸ ಮಾಡ್ತಾಇದ್ದಳು. ಈಗ ಅವಳು ಗಂಡನ ಮನೆಯಲ್ಲಿ ಇದ್ದಾಳೆ. ನಮ್ಮ ಸಂಸಾರದ ಜೀವನ ಪೂರ್ತಿ ನಮ್ಮ ತಂದೆಯವರ ಪೆನ್ಶನ್ ಮೇಲೆ ನಡಿತಾಇದೆ, ಸರ್.

ಅ— ನಾವು ನಿಮಗೆ ಈ ಕೆಲಸ ಕೊಡಲ್ಲ ಅನ್ನಿ, ಆಗ ಏನು ಮಾಡ್ತೀರಿ ?

ಸ— ಏನೂ ಮಾಡಲ್ಲ ಸರ್, ಈಗಿನ ಹಾಗೆ ನಿರುದ್ಯೋಗಿ, ಹಂಗಾಮಿ ಉದ್ಯೋಗಿ ಆಗಿರ್ತೀನಿ, ಅಷ್ಟೇ. ದಯವಿಟ್ಟು ಕೆಲಸ ಕೊಡಿ. ನನಗೆ, ನಮ್ಮ ಸಂಸಾರಕ್ಕೆ ಅನುಕೂಲ ಆಗತ್ತೆ.

ಅ—ಸರಿ, ನೀನಿನ್ನು ಹೋಗಬಹುದು.

ಸ—ನಮಸ್ಕಾರ ಸರ್.

ಅ—ನಮಸ್ಕಾರ.

O—Does any body in your house in any job ?

S—My father is a retired forest officer. He retired two years ago. My brother is also an M.A. Earlier he was working in a co-operative society. Now they removed him from the job. So he is now jobless. My sister was working as a steno before her marriage. Now she is in her husband's house. All our family gets its livelihood on my father's pension, Sir.

O—Suppose that we don't give you this job, what will you do ?

S—Nothing, I will remain an unemployed youth or a temporary emplayee. That is all. Please give me the job. It will help me and our family.

O—All right now, you can go.

S—Namaskaara.

O—Namaskaara.

DRILLS

REPETITION DRILL

ಅಧ್ಯಾಪಕ—ಇದಕ್ಕಿಂತ ಮೊದಲು ನೀವು ಎಲ್ಲಿ ಫಾರಂ ನಡೆಸ್ತಾ‌ಇದ್ದಿರಿ ?	ಕಲಿಯುವವ—	....
ಅ—ಇದಕ್ಕಿಂತ ಮೊದಲು ನಾವು ಊರೊಳಗೆ ಫಾರಂ ನಡೆಸ್ತಾ‌ಇದ್ವಿ.	ಕ—	....
ಅ—ನೀವು ಮೊದಲು ಎಂಥಾ ಹಸುಗಳನ್ನು ಸಾಕ್ತಾ‌ಇದ್ರಿ ?	ಕ—	....
ಅ—ನಾವು ಮೊದಲು ನಾಡ ಹಸುಗಳನ್ನು ಸಾಕ್ತಾ‌ಇದ್ವಿ.	ಕ—	....
ಅ—ಅವು ಹಾಲನ್ನು ಸಾಕಷ್ಟು ಕೊಡ್ತಾ‌ಇರಲಿಲ್ಲ.	ಕ—	....
ಅ—ಅವು ಮೇವನ್ನು ಮಾತ್ರ ಸಿಕ್ಕಾಪಟ್ಟೆ ಮೇಯ್ತಾ‌ಇದ್ವು.	ಕ—	....
ಅ—ನಾವು ನಮ್ಮ ಫಾರಂ ಅನ್ನು ವಿಸ್ತರಿಸಕ್ಕೆ ಯೋಚಿಸ್ತಾ‌ಇದ್ವಿ.	ಕ—	....
ಅ—ಮರೀಗೌಡರು ಈ ಎರಡು ಎಕರೆ ಜಮೀನನ್ನು ಮಾರ್ತಾ‌ಇದ್ರು.	ಕ—	....
ಅ—ಈ ಊರಿನ ಕೆಲಭಾಗದ ಮಟ್ಟಿಗೆ ಹಾಲು, ಮೊಸರು, ಬೆಣ್ಣೆ, ತುಪ್ಪ ಒದಗಿಸ್ತಾ‌ಇದ್ವಿ.	ಕ—	....
ಅ—ಹಸುಗಳನ್ನು ಚೆನ್ನಾಗಿ ನೋಡಿಕೊಳ್ಳಲು ತುಂಬಾ ಕಷ್ಟ ಆಗ್ತಾ‌ಇತ್ತು.	ಕ—	....
ಅ—ವರ್ಷದ ಲಾಭಾಂಶದಲ್ಲಿ ಇಷ್ಟು ಅಂತ ವಾರ್ಷಿಕ ಅಭಿವೃದ್ಧಿಗೆ ಬೇರೆ ಇಡ್ತಾ‌ಇದ್ವಿ.	ಕ—	....

ಅಧ್ಯಾಪಕ—ಮೊದಲು ನಿಮ್ಮ ಫಾರಂ ಕೆಲಸಗಾರರಿಗೆ ಬೋನಸ್ ಕೊಡ್ತಾ ಇದ್ರಾ ?		ಕಲಿಯುವವ—	....
ಅ—ಇಲ್ಲ, ಮೊದಲು ನಮ್ಮ ಫಾರಂ ಕೆಲಸಗಾರರಿಗೆ ಬೋನಸ್ ಕೊಡ್ತಾ ಇರಲಿಲ್ಲ.		ಕ—	....
ಅ—ಮೊದಲು ಹಾಲನ್ನು ಆಳುಗಳು ಕರೀತಾ ಇದ್ರು, ಈಗ ಮೆಷಿನ್‌ಗಳು ಹಾಲನ್ನು ಕರೀತಾ ಇವೆ.		ಕ—	....
ಅ—ನೀವು ಯಾವ ಕಾಲೇಜ್‌ನಲ್ಲಿ ಓದ್ತಾ ಇದ್ರಿ ?		ಕ—	....
ಅ—ನಾನು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದ್ತಾ ಇದ್ದೆ.		ಕ—	....
ಅ—ಇದಕ್ಕೆ ಮೊದಲು ನೀವು ಎಲ್ಲಾದರೂ ಕೆಲಸ ಮಾಡ್ತಾ ಇದ್ರಾ ?		ಕ—	....
ಅ—ಹೌದು, ಕಬ್ಬಿಣದ ಕಾರ್ಖಾನೆಯಲ್ಲಿ ಅಕೌಂಟೆಂಟ್‌ಆಗಿ ಕೆಲಸ ಮಾಡ್ತಾ ಇದ್ದೆ.		ಕ—	....
ಅ—ನೀವು ಒಳ್ಳೆಯ ಕೆಲಸ ಹುಡುಕ್ತಾ ಇದ್ದಿರಾ ?		ಕ—	....
ಅ—ಹೌದು, ನಾನು ಒಳ್ಳೆಯ ಕೆಲಸ ಹುಡುಕ್ತಾ ಇದ್ದೆ.		ಕ—	....
ಅ—ಆ ಊರಿನ ಎಲ್ಲ ಬಡವರೂ ಸಾಲಕ್ಕೆ ಅರ್ಜಿ ಹಾಕ್ತಾ ಇದ್ರ ?		ಕ—	....
ಅ—ಹಳೆಯ ಮ್ಯಾನೇಜರ್ ಎಲ್ಲ ಅರ್ಜಿಗಳನ್ನೂ ವಿವರವಾಗಿ ಪರಿಶೀಲಿಸ್ತಾ ಇದ್ರ ?		ಕ—	....
ಅ—ಸಾಹುಕಾರರು ನಿಮಗೆ ಸುಲಭವಾಗಿ ಸಾಲ ಕೊಡ್ತಾ ಇದ್ರ ?		ಕ—	....

ಅಧ್ಯಾಪಕ— ಇಲ್ಲ, ಸಾಹುಕಾರರು ನಮಗೆ ಸುಲಭವಾಗಿ ಸಾಲ ಕೊಡ್ತಾ ಇರಲಿಲ್ಲ. ಕಲಿಯುವವ— ....

ಅ—ನಿನ್ನೆ ಮ್ಯಾನೇಜರ್ ನನ್ನನ್ನ ಹುಡುಕ್ತಾ ಇದ್ರ? ಕ— ....

ಅ— ಇಲ್ಲ, ಮ್ಯಾನೇಜರ್ ಅವರು ನನ್ನನ್ನು ಹುಡುಕ್ತಾ ಇರಲಿಲ್ಲ. ಕ— ....

SUBSTITUTION DRILL

1. ಅ—ನಾನು ಊರಿನ ಒಳಗೆ ಹಸುಗಳ ಫಾರಂ ನಡೆಸ್ತಾ ಇದ್ದೆ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

2. ಅ—ನಾನು ಮೊದಲು ನಾಡಹಸುಗಳನ್ನು ಸಾಕ್ತಾ ಇದ್ದೆ. ಕ— ....

ಅ—ನಾವು ಕ— ....

ಅ—ನೀನು ಕ— ....

ಅಧ್ಯಾಪಕ—ನೀವು	ಕಲಿಯುವವ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
3. ಅ—ನಾನು ಎಲ್ಲ ಕೆಲಸಗಾರರಿಗೂ ಬೋನಸ್ ಕೊಡ್ತಾ ಇದ್ದೆ.	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
4. ಅ—ನಾನು ಈ ಎರಡು ಎಕರೆ ಜಮೀನನ್ನು ಮಾರ್ತಾ ಇದ್ದೆ.	ಕ— ....
ಅ—ನಾವು	ಕ— ....

ಅಧ್ಯಾಪಕ—ನೀನು ಕಲಿಯುವವ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

5. ಅ—ನಾನು ಹಸುವಿನ ಹಾಲನ್ನು ಕರೆಯುತ್ತಾ ಇದ್ದೆನಾ ? ಕ— ....

ಅ—ನಾವು

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

6. ಅ—ನಾನು ಅಗ್ರಿಕಲ್ಚರ್ ಕಾಲೇಜಿನಲ್ಲಿ 1978ರಲ್ಲಿ ಓದ್ತಾ ಇದ್ದೆನಾ. ಕ— ....

ಅ—ನಾವು ಕ— ....

ಅಧ್ಯಾಪಕ—ನೀನು ಕಲಿಯುವವ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

7. ಅ—ನಾನು ಹಸುಗಳ ಫಾರಂನಲ್ಲಿ ಕೆಲಸ ಮಾಡ್ತಾ ಇರಲಿಲ್ಲ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

8. ಅ—ಅವರು ವರ್ಷದ ಲಾಭಾಂಶದಲ್ಲಿ ಶೇಖಡೆ ಹತ್ತರಷ್ಟನ್ನು ಹಸುಗಳ ಫಾರಂನ ಅಭಿವೃದ್ಧಿಗಾಗಿ ಇಡ್ತಾ ಇದ್ದರು. ಕ— ....

ಅ—ನಾವು ಕ— ....

ಅಧ್ಯಾಪಕ—ತಿಂಗಳು ಕಲಿಯುವವ — ....

ಅ—ಐದರಪ್ಟು ಕ— ....

ಅ—ಕೋಳಿಗಳ ಫಾರಂ ಕ— ....

ಅ—ಕೊಡ್ತಾಇದ್ವಿ ಕ— ....

9. ಅ—ಹಿಂದಿನ ವರ್ಷ ಒಬ್ಬರು ಪೂರ್ಣಾವಧಿ ಪಶುವೈದ್ಯರು ನಮ್ಮ ಫಾರಂನಲ್ಲಿ ದನಗಳ ಆರೋಗ್ಯ ಪರೀಕ್ಷಿಸ್ತಾಇದ್ದರು. ಕ— ....

ಅ—ಆ ಕ— ....

ಅ—ಇಬ್ಬರು ಕ— ....

ಅ—ಅವರು ಕ— ....

ಅ—ಕೋಳಿಗಳು ಕ— ....

ಅ—ವಿಚಾರಿಸು ಕ— ....

10. ಅ—ನನಗೆ ಫಾರಂ ನಡೆಸೋದರಿಂದ ತುಂಬಾ ನಷ್ಟ ಆಗ್ತಾಇರಲಿಲ್ಲ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅಧ್ಯಾಪಕ—ಅದು ಕಲಿಯುವವ— ....

ಅ—ಅವು ಕ— ....

TRANSFORMATION DRILL

Transform the following into negative.

ಅ—ಸೋಮು ಸ್ಟೇಶನರಿ ಅಂಗಡಿಯಲ್ಲಿ ಕಾರ್ಬನ್ ಪೇಪರ್ ಕೊಳ್ತಾ ಇದ್ದ. ಕ— ....

ಅ—ದೊಡ್ಡ ದೊಡ್ಡ ಊರುಗಳಲ್ಲಿ ವಿದೇಶಿ ಪ್ರವಾಸಿಗಳು ಪ್ರವಾಸಿಚೆಕ್ ಮುರಿಸ್ತಾ ಇದ್ರು. ಕ— ....

ಅ—ಮ್ಯಾನೇಜರ್ ಅವರು ಸಾಲಗಾರರಿಗೆ ಆಗಾಗ ಕಾಗದ ಹಾಕ್ತಾ ಇದ್ರು. ಕ— ....

ಅ—ಸಾಲ ತೆಗೊಳ್ಳಕ್ಕೆ ಮೊದಲು ಸಾಹುಕಾರರು ನನನ್ನು ತುಂಬಾ ಕಾಣ್ತಾ ಇದ್ರು. ಕ— ....

ಅ—ಹಿಂದಿನ ಮ್ಯಾನೇಜರ್ ಅವರು ಆಗಾಗ ನಮ್ಮ ನಮ್ಮ ಕೆಲಸಗಳನ್ನು ಬದಲಾಯಿಸ್ತಾ ಇದ್ದರು. ಕ— ....

ಅ—ಯಾರು ನಿಮಗೆ ಕಾಯ್ತಾ ಇದ್ರು ? ಕ— ....

ಅ—ಕುಂಬಾರರು ಆ ಗುಡಿಸಲ ಒಳಗೆ ಕುಳಿತು ಕೊಳ್ತಾ ಇದ್ದರು. ಕ— ....

ಅ—ಕಳ್ಳ ಅವತ್ತು ರಸ್ತೆಯಲ್ಲಿ ಓಡಾಡ್ತಾ ಇದ್ದ. ಕ— ....

ಅ—ಮೊದಲು ನೀವು ಸಾಲ ಸಮಯಕ್ಕೆ ಸರಿಯಾಗಿ ತೀರಿಸ್ತಾ ಇದ್ರಿ. ಕ— ....

ಅ—ಹಳ್ಳಿಯ ಜನರು ಬ್ಯಾಂಕಿನ ಜೊತೆ ಸಹಕರಿಸ್ತಾ ಇದ್ದರು. ಕ— ....

EXPANTION DRILL

1. ಅಧ್ಯಾಪಕ—ನಾಡಹಸುಗಳು ಜಾತಿ ಹಸುಗಳಿಗಿಂತ ಜಾಸ್ತಿ ಮೇವನ್ನು ಯಾವಾಗಲೂ ಮೇಯ್ತಾ ಇದ್ದವು. ಕಲಿಯುವವ— ....

ಅ—ನಾಡಹಸುಗಳು ಮೇಯ್ತಾ ಇದ್ದವು. ಕ— ....

ಅ—ಯಾವಾಗಲೂ ಕ— ....

ಅ—ಮೇವನ್ನು ಕ— ....

ಅ—ಜಾಸ್ತಿ ಕ— ....

ಅ—ಜಾತಿ ಹಸುಗಳಿಗಿಂತ ಕ— ....

2. ಅ—ನಾವು ಈ ಊರಿನ ಕೆಲಭಾಗದ ಮಟ್ಟಿಗೆ ಹಾಲು, ಮೊಸರು, ಬೆಣ್ಣೆ, ತುಪ್ಪ ಉತ್ಪಾದಿಸ್ತಾ ಇದ್ವಿ. ಕ— ....

ಅ—ನಾವು ಉತ್ಪಾದಿಸ್ತಾ ಇದ್ವಿ ಕ— ....

ಅ—ತುಪ್ಪ ಕ— ....

ಅ—ಬೆಣ್ಣೆ ಕ— ....

ಅ—ಮೊಸರು ಕ— ....

ಅ—ಹಾಲು ಕ— ....

ಅ—ಕೆಲಭಾಗದ ಮಟ್ಟಿಗೆ ಕ— ....

ಅ—ಈ ಊರಿನ ಕ .. ..

3. ಅಧ್ಯಾಪಕ—ನಾನು ಇದಕ್ಕೆ ಮೊದಲು ಒಂದು ಕಬ್ಬಿಣದ ಕಾರ್ಖಾನೆಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡ್ತಾ ಇದ್ದೆ. ಕಲಿಯುವವ— ....

ಅ—ನಾನು ಕೆಲಸ ಮಾಡ್ತಾ ಇದ್ದೆ ಕ— ....

ಅ—ಅಕೌಂಟೆಂಟ್ ಆಗಿ ಕ— ....

ಅ—ಕಾರ್ಖಾನೆಯಲ್ಲಿ ಕ— ....

ಅ—ಕಬ್ಬಿಣದ ಕ— ....

ಅ—ಒಂದು ಕ— ....

ಅ—ಇದಕ್ಕೆ ಮೊದಲು ಕ— ....

4. ಅ—ನನ್ನ ತಮ್ಮನೂ ಮೊದಲು ಸರಕಾರಿ ಸಂಘ ಒಂದರಲ್ಲಿ ದಿನಗೂಲಿಯ ಮೇಲೆ ಕೆಲಸ ಮಾಡ್ತಾ ಇದ್ದ. ಕ— ....

ಅ—ನನ್ನ ತಮ್ಮನೂ ಮಾಡ್ತಾ ಇದ್ದ ಕ— ....

ಅ—ಕೆಲಸ ಕ— ....

ಅ—ದಿನಗೂಲಿಯ ಮೇಲೆ ಕ— ....

ಅ—ಸಂಘ ಒಂದರಲ್ಲಿ ಕ— ....

ಅ—ಸರಕಾರಿ ಕ— ....

ಅ—ಮೊದಲು ಕ— ....

EXERCISE

I Fill in the blank with the appropriate form of the word given in the bracket.

1 ಇದಕ್ಕಿಂತ ಮೊದಲು ನೀವು ಯಾವ ಶಾಖೆಯಲ್ಲಿ ಕೆಲಸ ——— (ಮಾಡು)

2 ಕುರಿಗಳನ್ನು ಚೆನ್ನಾಗಿ ನೋಡಿಕೊಳ್ಳಲು ತುಂಬಾ ಕಷ್ಟ ——— (ಆಗು)

3 ಕಳೆದವರ್ಷ ನಮ್ಮ ಕೆಲಸಗಾರರಿಗೆ ಬೋನಸ್ ——— (ಕೊಡು)

4 ನೀವು ಏನಾದರೂ ಒಳ್ಳೆಯ ಕೆಲಸ ——— (ಹುಡುಕು)

5 ನಿನ್ನೆ ನಿಮ್ಮ ಸ್ನೇಹಿತರು ನಿಮ್ಮನ್ನು ——— (ಕೇಳು)

6 ನಾನು ಮೊದಲು ಊರಿನ ಹೊರಗೆ ಕೋಳಿ ಫಾರಂ ——— (ನಡೆಸು)

7 ನಾನು ಮೊದಲು ಕಾಲೇಜಿನಲ್ಲಿ ——— (ಓದು)

8 ನಾನು ನೆನ್ನೆ ರಾತ್ರಿ ಹೆಂಡತಿಗೆ ಕಾಗದ ——— (ಬರಿ)

9 ಅವನು ಬೆಂಗಳೂರಿಗೆ ಹೋಗುವ ಬಸ್ಸಿನಲ್ಲಿ ——— (ಹೋಗು)

10 ಅವರು ಒಂದು ಒಳ್ಳೆಯ ಕೋಳಿ ಫಾರಂ ಅನ್ನು ——— (ತೆಗೆ)

II Choose the appropriate form from the three forms given below each sentence to complete the sentence correctly.

1 ಕಳೆದ ವರ್ಷ ನಾವು ನಾಡ———ಸಾಕ್ತಾ ಇದ್ವಿ.
(ಹಸುಗಳಿಗೆ, ಹಸುಗಳನ್ನು, ಹಸುಗಳಿಂದ.)

2 ಇತ್ತೀಚೆಗೆ ಸರಕಾರದಿಂದ———ಮೂಲಕ ಸಹಾಯಧನ ಸಿಕ್ತು.
(ಬ್ಯಾಂಕಿನ, ಬ್ಯಾಂಕಿಂದ, ಬ್ಯಾಂಕನ್ನು.)

3 ಮೊದಲು ನಿಮ್ಮ ಕಾರ್ಖಾನೆ ಕೆಲಸಗಾರರಿಗೆ ಬೋನಸ್———?
(ಕೊಡುತ್ತೀರಾ, ಕೊಟ್ಟಿದ್ದಿರಾ, ಕೊಡ್ತಾ ಇದಿರಾ.)

4 ಇದೇ ರೀತಿ ಕೋಳಿ ಫಾರಂ ಅವರೂ——---
(ನಡಸಿದರು, ನಡೆಸುವಿರಿ.)

5 ಅವನು ದೆಹಲಿಗೆ——
(ಹೋಗುವುದನ್ನು, ಹೋಗೋದಕ್ಕೆ. ಹೋಗೋದರಿಂದ.)

6 ನೀವು ಮೊದಲು ಯಾವ———ಓದ್ತಾ ಇದ್ರಿ.
(ಕಾಲೇಜಿನಿಂದ, ಕಾಲೇಜಿನಲ್ಲಿ, ಕಾಲೇಜನ್ನು.)

III Frame as many sentences as possible from the frame by selecting one word from each column.

ನಾನು	ಮೊದಲು	ಊಟ ತಿಂಡಿ ಆಟ ಜಾಮೂನು	ಮಾಡ್ತಾ ಇದ್ದೆ ತಿನ್ತಾ ಇದ್ದೆ ಆಡ್ತಾ ಇದ್ದೆ ನೋಡ್ತಾ ಇದ್ದೆ

IV Transform the following into negative according to the model.

Model : ಇದಕ್ಕಿಂತ ಮೊದಲು ನಾವು ಊರೊಳಗೆ ಫಾರಂ ನಡೆಸ್ತಾ ಇದ್ವಿ.
ಇದಕ್ಕಿಂತ ಮೊದಲು ನಾವು ಊರೊಳಗೆ ಫಾರಂ ನಡೆಸ್ತಾ ಇರ್ಲಿಲ್ಲ.

1 ನೀವು ಮೊದಲು ಎಲ್ಲಾ ಹಸುಗಳನ್ನು ಸಾಕ್ತಾ ಇದ್ರಿ.

2 ಇವು ಹಾಲನ್ನು ಸಾಕಷ್ಟು ಕೊಡ್ತಾ ಇದ್ವು.

3 ಹಸುಗಳನ್ನು ನೋಡಿಕೊಳ್ಳಲು ತುಂಬಾ ಕಷ್ಟ ಆಗ್ತಾ ಇತ್ತು.

4 ನಾನು ಮಾನಸಗಂಗೋತ್ರಿಯಲ್ಲಿ 1977 ರಲ್ಲಿ ಓದ್ತಾ ಇದ್ದೆ.

5 ನಾನು ಎರಡು ವರ್ಷ ಅಕೌಂಟೆಂಟ್ ಕೆಲಸ ಮಾಡ್ತಾ ಇದ್ದೆ.

V Match the following.

A		B	
1)	ನಾನು	a)	ಇದ್ದಿರಾ
2)	ನಾವು	b)	ಇದ್ದರಾ
3)	ನೀನು	c)	ಇದ್ದನಾ
4)	ನೀವು	d)	ಇದ್ದಿತಾ
5)	ಅವನು	e)	ಇದ್ದೆನಾ
6)	ಅವಳು	f)	ಇದ್ದಾನಾ
7)	ಅವರು	g)	ಇದ್ದೆವಾ
8)	ಅದು	h)	ಇದ್ದೆಯಾ
9)	ಅವು	i)	ಇದ್ದಳಾ

ಪಾಠ ಇಪ್ಪತ್ತು

ಭಾಗ ಒಂದು

ವಾರ್ಷಿಕ ವರದಿ

ರಮೇಶ—ಸುರೇಶ್, ನಿಮ್ಮ ಹತ್ತಿರ ಮಾತಾಡೋದು ಇದೆ, ಇಲ್ಲಿ ಬನ್ನಿ.
ಸುರೇಶ್—ಒಂದು ನಿಮಿಷ ತಡೀರಿ ಸರ್, ಬಂದೆ.

ರ—ವಿಲೇಜ್ ಅಡಾಪ್ಶನ್ ಸ್ಕೀಂದು ಫೈಲ್ ತನ್ನಿ.
ಸು—ಎಲ್ಲ ಹಳ್ಳಿಗಳದನ್ನೂ ತರಲೋ ನನ್ನ ಹಳ್ಳಿಯದನ್ನು ಮಾತ್ರ ತರಲೋ ?
ರ—ಯಾವ ಯಾವ ಹಳ್ಳಿಯದು update ಆಗಿವೆ, ಅವೆಲ್ಲ ತನ್ನಿ.
ಸು—ಎಲ್ಲ ಹಳ್ಳಿಗಳವೂ update ಆಗಿವೆ ಸರ್, ಯಾವುದೂ ಬಾಕಿ ಉಳಿದಿಲ್ಲ.

ರ—ನಿಮ್ಮ ಹಳ್ಳಿಯಲ್ಲಿ ಯಾವ ಯಾವ ಸ್ಕೀಂ ತೆಗೊಂಡಿದ್ದೀವಿ ?
ಸು—ಮುಖ್ಯವಾಗಿ, "ಹೆಚ್ಚು ಇಳುವರಿ ಬೆಳೆ ಬೆಳೆಯಿರಿ" ಸ್ಕೀಂ ತೆಗೊಂಡಿದ್ದೀವಿ.

ರ—ಈ ಯೋಜನೆಯ ಉಪಯೋಗ ಎಷ್ಟು ಜನ ಪಡೆದಿದ್ದಾರೆ ?
ಸು—ಹದಿನೈದು ಬಡ ಕುಟುಂಬಗಳವರು ಇದರ ಪ್ರಯೋಜನ ಪಡೆದಿದ್ದಾರೆ, ಸರ್. ಅಂದರೆ ಕುಟುಂಬಕ್ಕೆ ಐದರಂತೆ ಒಟ್ಟು 75 ಜನರಿಗೆ ಈ ಯೋಜನೆಯ ಉಪಯೋಗ ನೇರವಾಗಿ ದೊರಕಿದೆ ಸರ್.

ರ—ಈ ಸ್ಕೀಂಅಲ್ಲಿ ಒಟ್ಟು ಎಷ್ಟು ಹಣ ಖರ್ಚು ಮಾಡಿದ್ದೀವಿ ?
ಸು—ಸ್ಕೀಮಲ್ಲಿ ಒಟ್ಟು ಒಂದು ಲಕ್ಷದ ಇಪ್ಪತ್ತೈದು ಸಾವಿರದ ಮೂರುನೂರಾ ನಲವತ್ತೊಂದು ರೂಪಾಯಿ ತೊಂಭತ್ತೆಂಟು ಪೈಸೆ ಖರ್ಚು ಮಾಡಿದ್ದೀವಿ ಸರ್.

ರ—ಕಳೆದ ಎಷ್ಟು ವರ್ಷಗಳಿಂದ ಈ ಜನರಿಗೆ ಸಹಾಯ ಮಾಡಿದ್ದೀವಿ ? ಎಷ್ಟು ಹಣ ವಾಪಸ್ ಬಂದಿದೆ ? ಎಷ್ಟು ಹಣ ವಾಪಸ್ ಬಂದಿಲ್ಲ ?
ಸು—ಹೆಚ್ಚು ಕಡಿಮೆ 1 ಲಕ್ಷದ 10 ಸಾವಿರದ ಐದುನೂರು ರೂಪಾಯಿ, ಅಸಲು, ಬಡ್ಡಿ, ಸಹಿತ ವಾಪಸ್ ಬಂದಿದೆ. ಇನ್ನೊಂದು ಸ್ವಲ್ಪ ಹಣ ಬರಬೇಕು, ಸರ್. ಅದನ್ನ ಮುಂದಿನ ಬೆಳೆಗೆ ಕೊಡ್ತೀವಿ ಅಂತ ಹೇಳಿದ್ದಾರೆ ಸರ್.

LESSON 20

PART I

ANNUAL REPORT

Ramesh—Mr. Suresh. I have something to talk to you about. Please come here.
Suresh—Please wait for a minute. I am coming.

R—Bring the file of the village adoption scheme.

S—Shall I bring the files of all the villages ? Or shall I bring only that of my village ?

R—Bring all the updated files.

S—The files of all the villages are updated, Sir. Nothing is due to be updated.

R—What are the schemes that we have taken up in your village ?

S—Mainly we have taken up the scheme, "Grow high yield variety of crops."

R—How many have got benefitted by this scheme ?

S—Fifteen poor families have got the benefit of this scheme, Sir. At the rate of five members per family, seventyfive people in all have got directly benefitted from this program.

R—In this scheme how much money have we spent in total ?

S—In this scheme a total of one lakh twentyfive thousand three hundred and fortyone rupees and nintyeight paise has been spent.

R—For the past how many years have we helped these people ? How much money has come back ? How much has not ?

S—Nearly one lakh ten thousand two hundred rupees of capital has come back along with the interest. Some more money has to be repaid. They have told us that they would pay in the next season.

ರ—ಮತ್ತೆ ಯಾವ ಯಾವ ಯೋಜನೆಗಳು ಈಊರಿನಲ್ಲಿ ಪ್ರಾರಂಭಿಸಿದ್ದೀವಿ ?

ಸು—ಗುಡಿಕೈಗಾರಿಕೆಗಳು ಅಥವಾ ಗೃಹಕೈಗಾರಿಕೆಗಳಿಗೆ ಸಹಾಯ ಒದಗಿಸಿದ್ದೀವಿ ಸರ್. ಈ ಯೋಜನೆಯಲ್ಲಿ ಕುಶಲಕೆಲಸಗಾರರಿಗೆ, ಅಂಗವಿಕಲರಿಗೆ, ನಿರಾಶ್ರಿತರಿಗೆ, ಅನಾಥರಿಗೆ ಸಹಾಯ ಮಾಡಿದ್ದೀವಿ ಸರ್.

ರ—ಈ ಯೋಜನೆಯಿಂದ ಎಷ್ಟು ಜನರಿಗೆ ಉಪಯೋಗ ಆಗಿದೆ ?

ಸು—ನಾಲ್ಕು ಚಾಪೆ ನೇಯ್ಗೆ ಸಂಸಾರಗಳಿಗೆ, ಐದು ಕಂಬಳಿ ನೇಯ್ಗೆ ಸಂಸಾರಗಳಿಗೆ, ಆರು ಕೈಮಗ್ಗದ ಬಟ್ಟೆ ತಯಾರಿಕೆ ಸಂಸಾರಗಳಿಗೆ, ಐದ. ದರ್ಜಿ ಸಂಸಾರಗಳಿಗೆ, ಎರಡು ಬಣ್ಣಗಾರಿಕೆ ಸಂಸಾರಗಳಿಗೆ, ಒಂದು ಸಾಬೂನು ತಯಾರಿಕೆ ಸಂಸಾರಕ್ಕೆ ಸಹಾಯ ಒದಗಿಸಿದ್ದೀವಿ.

ರ—ಈ ಎಲ್ಲರಿಗೂ ಸಹಾಯವನ್ನು ಧನ ರೂಪದಲ್ಲಿ ಒದಗಿಸಿದ್ದೀರೋ, ವಸ್ತು ರೂಪದಲ್ಲಿ ಒದಗಿಸಿದ್ದೀರೋ?

ಸು—ಕೆಲ ಸಂಸಾರಗಳಿಗೆ ಧನ ರೂಪದಲ್ಲಿ, ಇನ್ನೂ ಕೆಲ ಸಂಸಾರಗಳಿಗೆ ವಸ್ತು ರೂಪದಲ್ಲಿ, ಒದಗಿಸಿದ್ದೀವಿ ಸರ್.

ರ—ಮತ್ತೆ ಯಾವ ಕಾರ್ಯಕ್ರಮಾನೂ ಇಲ್ಲವಾ ?

ಸು—ಈ ಕಾರ್ಯಕ್ರಮಗಳೆಲ್ಲ ಅವಿದ್ಯಾವಂತ ನಿರುದ್ಯೋಗಿಗಳಿಗೆ. ಈ ಮುಂದಿನ ವರ್ಷದ ಕಾರ್ಯಕ್ರಮಗಳನ್ನು ವಿದ್ಯಾವಂತ ನಿರುದ್ಯೋಗಿಗಳಿಗಾಗಿ ಹಾಕ್ತಾಇದ್ದೀವಿ. ಒಂದೆರಡು ದಿನಗಳಲ್ಲಿ ಯೋಜನೆ ಪೂರ್ತಿ ಆಗತ್ತೆ, ಅದನ್ನು ನಿಮಗೆ ತೋರಿಸ್ತೀನಿ.

ರ—ಹೊಸ ಕಾರ್ಯಕ್ರಮ ಪ್ರಾರಂಭಿಸಕ್ಕೆ ಮೊದಲು ಹಳೆಯ ಬಾಕಿಗಳೆಲ್ಲ ಬರಬೇಕು. ಅದಕ್ಕೆ ತಕ್ಕ ಏರ್ಪಾಡುಗಳನ್ನು ಮೊದಲು ಮಾಡಿ. ಹಳೆ ಬಾಕಿ ಬರಕ್ಕೆ ಮೊದಲು, ಹೊಸ ಸಾಲ ಕೊಡಕ್ಕೆ ಹೋಗಬೇಡಿ. ಸಾಧ್ಯಆದಷ್ಟು ಅತೀ ಬಡ ಕುಟುಂಬಗಳಿಗೇ ಸಹಾಯ ಮಾಡಿ. ವಿದ್ಯಾವಂತ ನಿರುದ್ಯೋಗಿಗಳಿಗೆ ಯಾವ ರೀತಿ ಕಾರ್ಯಕ್ರಮ ಯೋಚಿಸ್ತಾಇದೀರಿ ?

ಸು—ಆ ಊರಲ್ಲಿ ಒಂದು ಪ್ರೆಸ್ ಪ್ರಾರಂಭಿಸುವುದು. ಒಂದು ಚಿಕ್ಕ ಪುಸ್ತಕ ಭಂಡಾರ ಪ್ರಾರಂಭಿಸಬಹುದು. ಒಂದೆರಡು ಕೋಳಿ ಫಾರಂ ಪ್ರಾರಂಭಿಸಬಹುದು. ಇನ್ನೂ ಏನೇನು ಮಾಡಬಹುದು ಅಂತ ಯೋಚಿಸ್ತಾಇದೀನಿ ಸರ್.

ರ—ಸರಿ, ಸಾಧ್ಯವಾದಷ್ಟು ಬೇಗ ಯೋಜನೆ ತಯಾರಿಸಿ, ಪ್ರಧಾನ ಕಛೇರಿಗೆ ಅದನ್ನು ಕಳಿಸಬೇಕು.

ಸು—ಆಗಲಿ ಸರ್, ನಾಳೆ ನಾಳಿದ್ದರಲ್ಲೇ ಕೊಡ್ತೀನಿ.

R—What other programs have we started in this village ?

S—We have provided help in cottage industries or home industries. In this programme we have helped artisans, the handicapped, the destitute and the orphaned.

R—How many people got helped from this program ?

S—We have provided help to four mat-weaving families, five blanket-weaving families, six handloom cloth weaving families, five tailor families, two painter families and one soap making family.

R—Have we helped all these people in the form of cash or kind ?

S—For some families in the form of cash and for some other families in the form of kind.

R—Is there no other programme ?

S—All these programmes are for the uneducated unemployed. Next year we are planning programmes for the educated unemployed. Within a day or two the programme will be ready. I will show it to you.

R—Before you start the new program, all the old money should come back. Make appropriate arrangements for that. Don't advance new loans before you get the old loans back. As far as possible help only poor families. What sort of porgram are you thinking for the educated unemployed.

S—A press can be started in that village. A small library can be started. One or two poultry farms can be started. I am thinking as to what also can be done.

R—All right, prepare it as quickly as possible. It has to be sent to the main office.

S—Yes, Sir. I will give it tomorrow or the day after.

ಭಾಗ ಎರಡು

ಆಟದಲ್ಲಿ ಮುಂದು ಪಾಠದಲ್ಲಿ ಹಿಂದು

ಸೀತಾ—ಏನು ಗೀತಾ, ನಿಮ್ಮ ಮನೆಯಲ್ಲಿ ತುಂಬಾ ಗಲಾಟೆ ನಡೆದಿದೆಯಲ್ಲ, ಏನು ವಿಶೇಷ ?

ಗೀತಾ—ಗಲಾಟೆ ಏನೋ ನಡೆದಿದೆ ಸೀತಾ, ನನಗೆ ತಲೆಚಿಟ್ಟು ಹಿಡಿತಾ ಇದೆ. ಏನೋ ಮಕ್ಕಳಿಗೆ ಸಂತೋಷ. ಆದ್ದರಿಂದ ಸುಮ್ಮನೇ ಇದ್ದೀನಿ.

ಸೀ—ನಿಮ್ಮ ಮಕ್ಕಳಿಗೆ ಏನಷ್ಟು ಸಂತೋಷ ?

ಗೀ—ನಮ್ಮ ಇಬ್ಬರು ಮಕ್ಕಳೂ ರಾಜ್ಯ ಮಟ್ಟದ ದಸರಾ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ್ದಾರೆ. ಅವರ ಶಾಲೆಗೆ ಟೀಂ ಶೀಲ್ಡ್ ಸಹ ತಂದಿದ್ದಾರೆ.

ಸೀ—ಯಾವ ಆಟದಲ್ಲಿ ನಿಮ್ಮ ಮಕ್ಕಳಿಗೆ ಬಹುಮಾನ ಬಂದಿದೆ.

ಗೀ—ಎಲ್ಲಾ ಆಟಗಳಲ್ಲೂ ಇಬ್ಬರಿಗೂ ಬಹುಮಾನ ಸಿಕ್ಕಿವೆ. ನಮ್ಮ ಮಗ 100 ಮೀಟರ್ಸ್ ಓಟದಲ್ಲಿ, 200 ಮೀಟರ್ಸ್ ಓಟದಲ್ಲಿ, ದೂರ ಹಾರುವುದರಲ್ಲಿ, ಎತ್ತರ ಹಾರುವುದರಲ್ಲಿ ಮೊದಲನೇ ಬಹುಮಾನ ಪಡೆದಿದ್ದಾನೆ.

ಸೀ—ನಿನ್ನ ಮಗಳಿಗೆ ಯಾವ ಯಾವ ಆಟಗಳಲ್ಲಿ ಬಹುಮಾನಗಳು ಬಂದಿವೆ.

ಗೀ—ಅವಳೂ ಮೂರೂ ಓಟಗಳಲ್ಲಿ ಎರಡನೇ ಬಹುಮಾನವನ್ನು ಪಡೆದಿದ್ದಾಳೆ. ಹಾರುವುದರಲ್ಲಿ ಮೊದಲನೇ ಬಹುಮಾನವನ್ನು ಪಡೆದಿದ್ದಾಳೆ. ಇಬ್ಬರಿಗೂ ಟೀಂ ಛಾಂಪಿಯನ್‌ಶಿಪ್ಸ್ ಸಿಕ್ಕಿವೆ.

ಸೀ—ರಿಲೇಯಲ್ಲಿ ಇವರಿಗೆ ಬಂದಿಲ್ಲವಾ ?

ಗೀ—ರಿಲೇಯಲ್ಲಿ ಇಬ್ಬರ ಗುಂಪುಗಳೂ ದ್ವಿತೀಯ ಬಹುಮಾನ ಪಡೆದಿವೆ. ನಿನ್ನ ಮಕ್ಕಳು ಏನೂ ಆಟ ಆಡಲ್ಲವಾ ?

ಸೀ—ಇಬ್ಬರೂ ಕೊಕ್ಕೋ, ಕಬಡ್ಡಿ, ಆಡ್ತಾರೆ, ಆದರೆ ಎಕ್ಸ್‌ಪರ್ಟ್ಸ್ ಏನೂ ಅಲ್ಲ. ಬೇಸರ ಕಳೆಯಕ್ಕೆ ಆಡ್ತಾರೆ.

ಗೀ—ಓದು ಬರಹ ಎಲ್ಲ ಹೇಗೆ ನಡೀತಾ ಇದೆ.

ಸೀ—ನನ್ನ ಮಕ್ಕಳು ಓದೋದರಲ್ಲಿ ಮಾತ್ರ ಶಾಲೆಯಲ್ಲಿ ಎಲ್ಲರಿಗಿಂತ ಮುಂದು. ಅವರಿಗೆ ಓದು ಬರಹದಲ್ಲಿ ತುಂಬಾ ಆಸಕ್ತಿ, ಆಟದಲ್ಲಿ ಅಷ್ಟಕ್ಕಷ್ಟೇ, ಹಿಂದು ಅಂತಾನೇ ಅನ್ನಬಹುದು. ನಿಮ್ಮ ಹುಡುಗರು ಓದಿನಲ್ಲಿ ಹೇಗೆ ?

PART 2

AHEAD IN GAMES, BEHIND IN LESSONS

Seetha—What Geetha, there is so much noise in your house. What is special ?

Geetha—Noise is there, all right. I am getting a headache. Children are happy. So I am keeping quiet.

S—Why are your children happy today ?

G—Both of our children have got prizes in the State level Dasara sports. They have brought the team sheild also to the school.

S—In which game have your children got prizes ?

G—Both of them have got prizes in all the games. My son has got first prize in hundred meter running race, two hundred meter running race, long jump, high jump.

S—In which games has your daughter got prizes ?

G—She also has got the second prize in three running races and first prize in high jump. Both have got team championship.

S—Have not they got anything in relay race ?

G—Teams of both of them have got second prize in relay race. Don't your children play any game ?

S—Both of them play kho kho and kabaddi. But they're not experts. They play just to get rid of boredom.

G—How are their studies going on ?

S—My children are far ahead of all others in studies. They have a lot of interest in reading and writing. But in games they are not good. In fact we can say they are better than the others. How are your children in studies?

ಗೀ—ನಮ್ಮ ಹುಡುಗರು ಈ ವಿಷಯದಲ್ಲಿ ನಿಮ್ಮ ಹುಡುಗರಿಗೆ ತದ್ವಿರುದ್ಧ. ಆಟದಲ್ಲಿ ಮುಂದೆ ಇದ್ದಾರೆ. ಪಾಠದಲ್ಲಿ ಹಿಂದೆ ಇದ್ದಾರೆ.

ಸೀ—ಎಲ್ಲರೂ ಎಲ್ಲದರಲ್ಲೂ ಪ್ರವೀಣರಾಗಕ್ಕೆ ಆಗಲ್ಲಮ್ಮಾ. ಅವರವರ ದಾರಿ ಅವರವರಿಗೆ. ನಿಮ್ಮ ಮನೆಯಲ್ಲಿ ಯಾರೋ ಹೊಸಬರನ್ನು ನಿನ್ನೆ ನೋಡಿದೆ. ಯಾರಾದರೂ ಬಂದಿದ್ದಾರಾ ?

ಗೀ—ಯಾರೂ ಇಲ್ಲ ಕಣೇ, ನನ್ನ ತಾಯಿಯ ಸ್ನೇಹಿತರಂತೆ ಬಂದಿದ್ದರು, ಸಂಜೇನೇ ಹೋದರು.

ಸೀ—ಸರಿ ಗೀತಾ, ನಾನು ಬರ್‍ತಿನಿ.

ಗೀ—ಆಗಲಿ ನಾಳೆ ಸಂಜೆ ಬಾ.

ಸೀ—ಆಗಲಿ ಬರ್‍ತೀನಿ.

G—Our children in this respect are just the opposite of your children. They are far ahead in games and for behind in studies.

S—All can not be experts in all things. It's just that they're good at whatever they're good at. Yesterday I saw some new faces in your home. Has anybody come ?

G—Nobody. My mother's friend had come, and left in the evening it self.

S—O.K. I will take leave of you.

G—All right, please come tomorrow evening.

S—O.K. I will come.

DRILLS

REPETITION DRILL

ಅಧ್ಯಾಪಕ—ಯಾವ ಯಾವ ಹಳ್ಳಿಯ ಫೈಲು ಅಪ್‌ಡೇಟ್ ಆಗಿದೆ ?   ಕಲಿಯುವವ— ....

ಅ—ಎಲ್ಲ ಹಳ್ಳಿಯ ಫೈಲು ಅಪ್‌ಡೇಟ್ ಆಗಿದೆ.   ಕ— ....

ಅ—ಯಾವುದಾದರೂ ಬಾಕಿ ಉಳಿದಿದೆಯಾ ?   ಕ— ....
ಅ—ಯಾವುದೂ ಬಾಕಿ ಉಳಿದಿಲ್ಲ.

ಅ—ನಿಮ್ಮ ಹಳ್ಳಿಯಲ್ಲಿ ಯಾವ ಯಾವ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ ?   ಕ— ....

ಅ—ಮುಖ್ಯವಾಗಿ ಹೆಚ್ಚು ಇಳುವರಿ ಬೆಳೆಯಿರಿ ಯೋಜನೆ ತಗೊಂಡಿದ್ದೀವಿ.   ಕ— ....

ಅ—ಈ ಯೋಜನೆ ಉಪಯೋಗ ಎಷ್ಟು ಜನ ಪಡೆದಿದ್ದಾರೆ ?   ಕ— ....

ಅ—ಹದಿನೈದು ಬಡ ಕುಟುಂಬಗಳು ಇದರ ಪ್ರಯೋಜನ ಪಡೆದಿದ್ದಾರೆ.   ಕ— ....

ಅ—ಆ ಯೋಜನೆಯಲ್ಲಿ ಒಟ್ಟು ಎಷ್ಟು ಹಣ ಖರ್ಚು ಮಾಡಿದ್ದೀವಿ ?   ಕ— ....

ಅ—ಆ ಯೋಜನೆಯಲ್ಲಿ ಒಟ್ಟು ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದೀವಿ.   ಕ— ....

ಅ—ಎಷ್ಟು ಹಣ ವಾಪಸ್ ಬಂದಿದೆ, ಎಷ್ಟು ಹಣ ವಾಪಸ್ ಬಂದಿಲ್ಲ.   ಕ— ....

ಅ—ಅರ್ಧ ವಾಪಸ್ ಬಂದಿದೆ, ಅರ್ಧ ಹಣ ವಾಪಸ್ ಬಂದಿಲ್ಲ.   ಕ— ....

ಅಧ್ಯಾಪಕ—ಇದನ್ನು ಮುಂದಿನ ಬೆಳಿಗೆ ಕೊಡ್ತೀವಿ ಅಂತ ಹೇಳಿದ್ದಾರೆ.	ಕಲಿಯುವವ—	....
ಅ—ಮತ್ತೆ ಯಾವ ಯಾವ ಯೋಜನೆಯನ್ನು ಈ ಊರಿನಲ್ಲಿ ಪ್ರಾರಂಭಿಸಿದ್ದೀರಿ?	ಕ—	....
ಅ—ಗುಡಿ ಕೈಗಾರಿಕೆಗಳು ಅಥವಾ ಗೃಹ ಕೈಗಾರಿಕೆಗಳಿಗೆ ಸಹಾಯ ಒದಗಿಸಿದ್ದೀವಿ.	ಕ—	....
ಅ—ಇವರೆಲ್ಲರಿಗೂ ಧನ ರೂಪದಲ್ಲಿ ಸಹಾಯ ಒದಗಿಸಿದ್ದೀರೋ, ವಸ್ತು ರೂಪದಲ್ಲಿ ಸಹಾಯ ಒದಗಿಸಿದ್ದೀರೋ ?	ಕ—	....
ಅ—ಕೆಲವರಿಗೆ ವಸ್ತು ರೂಪದಲ್ಲಿ ಒದಗಿಸಿದ್ದೀವಿ. ಕೆಲವರಿಗೆ ಧನ ರೂಪದಲ್ಲಿ ಒದಗಿಸಿದ್ದೀವಿ.	ಕ—	....
ಅ—ನನ್ನ ಇಬ್ಬರು ಮಕ್ಕಳೂ ದಸರಾ ಸ್ಪರ್ಧೆಯಲ್ಲಿ ಬಹುಮಾನಗಳಿಸಿದ್ದಾರೆ.	ಕ—	....
ಅ—ನಿಮ್ಮ ಮಕ್ಕಳಿಗೆ ಯಾವ ಆಟದಲ್ಲಿ ಬಹುಮಾನ ಬಂದಿದೆ ?	ಕ—	....
ಅ—ಎಲ್ಲ ಆಟಗಳಲ್ಲೂ ಇಬ್ಬರಿಗೂ ಬಹುಮಾನ ಸಿಕ್ಕಿವೆ.	ಕ—	....
ಅ—ನಿಮ್ಮ ಮನೆಗೆ ಯಾರಾದರೂ ಹೊಸಬರು ಬಂದಿದ್ದಾರಾ ?	ಕ—	....
ಅ—ಇಲ್ಲ ನಮ್ಮ ಮನೆಗೆ ಯಾರೂ ಹೊಸಬರು ಬಂದಿಲ್ಲ.	ಕ—	....
ಅ—ನನ್ನ ಮಕ್ಕಳು ಶಾಲೆಗೆ ಟೀಂ ಶೀಲ್ಡ್ ತಂದಿದ್ದಾರೆ.	ಕ—	....

ಅಧ್ಯಾಪಕ—ನಿಮ್ಮ ಮಕ್ಕಳು ಆಟದಲ್ಲಿ ಹೇಗಿದ್ದಾರೆ? ಕಲಿಯುವವ— ....

ಅ—ನನ್ನ ಮಕ್ಕಳು ಆಟದಲ್ಲಿ ಹಿಂದಿದ್ದಾರೆ, ಪಾಠದಲ್ಲಿ ಮುಂದಿದ್ದಾರೆ. ಕ— ....

SUBSTITUTION DRILL

1. ಅ—ನಾನು ಎಲ್ಲ ಫೈಲ್‌ಗಳನ್ನು ಅಪ್‌ಡೇಟ್ ಮಾಡಿದ್ದೀನಿ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

2. ಅ—ನಾನು ತಿಮ್ಮನ ಹಳ್ಳಿಯಲ್ಲಿ ಹೊಸ ಯೋಜನೆಗಳನ್ನು ತೆಗೆದುಕೊಂಡಿದ್ದೀನಿ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅಧ್ಯಾಪಕ—ಅವನು	ಕಲಿಯುವವ —	....
ಅ—ಅವಳು	ಕ—	....
ಅ—ಅವರು	ಕ—	....
ಅ—ಅದು	ಕ—	....
ಅ—ಅವು	ಕ—	....
3. ಅ—ನಾನು ಹೆಚ್ಚು ಇಳುವರಿ ಬೆಳೆ ಬೆಳೆಯಕ್ಕೆ ಸಾಲ ಒದಗಿಸಿದ್ದೀನಿ.	ಕ—	....
ಅ—ನಾವು	ಕ—	....
ಅ—ನೀನು	ಕ—	....
ಅ—ನೀವು	ಕ—	....
ಅ—ಅವನು	ಕ—	....
ಅ—ಅವಳು	ಕ—	....
ಅ—ಅವರು	ಕ—	....
ಅ—ಅದು	ಕ—	....
ಅ—ಅವು	ಕ—	....
4. ನಾನು ಧನ ರೂಪದಲ್ಲಿ ಸಹಾಯ ಒದಗಿಸಿದ್ದೀನೋ ವಸ್ತು ರೂಪದಲ್ಲಿ ಸಹಾಯ ಒದಗಿಸಿದ್ದೀನೋ ?	ಕ—	....
ಅ—ನಾವು	ಕ—	....
ಅ—ನೀನು	ಕ—	....
ಅ—ನೀವು	ಕ—	....

ಅಧ್ಯಾಪಕ—ಅವನು ಕಲಿಯುವವ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

5. ಅ—ನಾನು ಬ್ಯಾಂಕಿಗೆ ಹೊಸದಾಗಿ ಬಂದಿದ್ದೀನಾ ? ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

6. ಅ—ನಾನು ಮುಂದಿನ ಬೆಳಿಗೆ ಅಸಲು ಬಡ್ಡಿ ಎರಡನ್ನೂ ವಾಪಸ್ ಕೊಡ್ತೀನಿ ಅಂತ ಹೇಳಿದ್ದೀನಾ? ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅಧ್ಯಾಪಕ—ಅವನು   ಕಲಿಯುವವ— ....

ಅ—ಅವಳು   ಕ— ....

ಅ—ಅವರು   ಕ— ....

ಅ—ಅದು   ಕ— ....

ಅ—ಅವು   ಕ— ....

7. ಅ—ಎಲ್ಲ ಹಳ್ಳಿಗಳ ಉತ್ತಮ ಬೆಳೆ ಬೆಳೆಯಿರಿ ಯೋಜನೆಯ ಫೈಲ್‌ಗಳನ್ನು ಕೊಟ್ಟಿದ್ದೀನಿ.   ಕ— ....

ಅ—ಹತ್ತು   ಕ— ....

ಅ—ಊರು   ಕ— ....

ಅ—ಒಳ್ಳೆಯ   ಕ— ....

ಅ—ರಾಗಿ   ಕ— ....

ಅ—ಕಾರ್ಯಕ್ರಮ   ಕ— ....

ಅ—ಕಾಗದವನ್ನು   ಕ— ....

ಅ—ಕಳಿಸು   ಕ— ....

8. ಅ—ಈ ಹಳ್ಳಿಯಲ್ಲಿ ಎಲ್ಲ ರೈತರ ಹೊಲದ ಜೋಳದ ಫಸಲು ಬಹಳ ಕೆಟ್ಟಿದೆ.   ಕ— ....

ಅ—ಆ   ಕ— ....

ಅ—ಊರು   ಕ— ....

ಅ—ಕೆಲವು   ಕ— ....

ಅಧ್ಯಾಪಕ— ಬಡವರು		ಕಲಿಯುವವ —	....
	ಅ— ಜಮೀನು	ಕ—	....
	ಅ— ಕಡಲೇಕಾಯಿ	ಕ—	....
	ಅ—ಬೆಳೆ	ಕ—	....
	ಅ—ತುಂಬ	ಕ—	....

TRANSFORMATION DRILL

Transform the following into negative.

ಅ— ಈಗ ಬ್ಯಾಂಕಿನ ಬಡ್ಡಿ ದರವನ್ನು ಬದಲಾಯಿಸಿದ್ದಾರೆ.	ಕ—	....
ಅ—ಈ ಸಾಲಕ್ಕಾಗಿ ನಾನು ಬಹಳ ದಿನಗಳು ಕಾದಿದ್ದೀನಿ.	ಕ —	....
ಅ— ಹೊಸ ಖಾತೆ ಪ್ರಾರಂಭ ಮಾಡಕ್ಕೆ ಅವರಿಗೆ ನಾನೇ ಹೇಳಿದ್ದೀನಿ.	ಕ—	....
ಅ—ನಾನು ಬಹಳ ಸಾರಿ ಸ್ವಂತ ಕೆಲಸಕ್ಕಾಗಿ ಬ್ಯಾಂಕಿಗೆ ಓಡಾಡಿದ್ದೀನಿ.	ಕ—	....
ಅ—ನಿಮ್ಮಂತಹ ಬಹಳ ಜನರನ್ನು ನಾನು ನೋಡಿದ್ದೀನಿ.	ಕ—	....
ಅ—ಬ್ಯಾಂಕಿನ ಎಲ್ಲ ಜನರನ್ನು ನನ್ನ ಮದುವೆಗೆ ಕರೆದಿದ್ದೀನಿ.	ಕ—	....
ಅ—ನನ್ನ ಖಾತೆಯಲ್ಲಿ ಎಷ್ಟು ಹಣ ಇದೆ ಅಂತ ಕೇಳಕ್ಕೆ ಬಂದಿದ್ದೀನಿ.	ಕ—	....

ಅಧ್ಯಾಪಕ— ಹೋಗಲಿ ಅಂತ ಈ ಸಾರಿ ನಿಮ್ಮನ್ನು ಬಿಟ್ಟಿದ್ದೀನಿ.		ಕಲಿಯುವವ—	....
ಅ—ಅವರ ಅಂಗಡಿಯು ಪೂರ್ತಿ ಸುಟ್ಟಿದೆ.		ಕ—	....
ಅ—ಅವರ ಫಾರಂನ ಎಲ್ಲ ಕೋಳಿಗಳೂ ಸತ್ತಿವೆ.		ಕ—	....
ಅ—ಸೋಮುವನ್ನು ನಾನು ತುಂಬಾ ಬೈದಿದ್ದೀನಿ.		ಕ—	....
ಅ—ಮ್ಯಾನೇಜರ್ ಅವರು ನಮ್ಮ ಎಲ್ಲ ಕಾಗದಗಳನ್ನು ಓದಿದ್ದಾರೆ.		ಕ—	....
ಅ—ಈ ಊರಿನ ಎಲ್ಲ ಜನರೂ ನಮ್ಮ ಜೊತೆ ಸಹಕರಿಸಿದ್ದಾರೆ.		ಕ—	....
ಅ—ಎಲ್ಲರೂ ತಮ್ಮ ತಮ್ಮ ಸಾಲಗಳನ್ನು ತೀರಿಸಿದ್ದಾರೆ.		ಕ—	....
ಅ—ನಮ್ಮ ವರ್ಗದ ನೇಕಾರರು ತುಂಬಾ ಒಳ್ಳೆಯ ಚಾಪೆಗಳನ್ನು ನೆಯ್ದಿದ್ದಾರೆ.		ಕ—	....

EXPANTION DRILL

1. ಅ—ನೀವು ಹಳ್ಳಿಯಲ್ಲಿ ಯಾವ ಯಾವ ಹೊಸ ಯೋಜನೆಗಳನ್ನು ಇನ್ನೂ ತೆಗೆದುಕೊಂಡಿಲ್ಲ	ಕ—	....
ಅ—ನೀವು ತೆಗೆದುಕೊಂಡಿಲ್ಲ	ಕ—	....
ಅ—ಇನ್ನೂ	ಕ—	....
ಅ—ಯೋಜನೆಗಳನ್ನು	ಕ—	....
ಅ—ಹೊಸ	ಕ—	....

★

ಅಧ್ಯಾಪಕ—ಯಾವ ಯಾವ — ಕಲಿಯುವವ— ....

ಅ—ಹಳ್ಳಿಯಲ್ಲಿ — ಕ— ....

2. ಅ—ನೀವು ಇವರೆಲ್ಲರಿಗೂ ಸುಮ್ಮನೆ ಸಾಲ ಕೊಟ್ಟಿದ್ದೀರೋ, ಜಾಮೀನಿನ ಆಧಾರದ ಮೇಲೆ ಸಾಲ ಕೊಟ್ಟಿದ್ದೀರೋ ? — ಕ— ....

ಅ—ನೀವು ಕೊಟ್ಟಿದ್ದೀರೊ ? — ಕ— ....

ಅ—ಸಾಲ — ಕ— ....

ಅ—ಆಧಾರದ ಮೇಲೆ — ಕ— ....

ಅ—ಜಾಮೀನಿನ — ಕ— ....

ಅ—ಸಾಲ ಕೊಟ್ಟಿದ್ದೀರೋ ? — ಕ— ....

ಅ—ಸುಮ್ಮನೆ — ಕ— ....

ಅ—ಇವರೆಲ್ಲರಿಗೂ — ಕ— ....

3. ಅ—ನೀವು, ಇವರಿಗೆ ಉತ್ತಮ ಬೆಳೆ ಬೆಳೆಯಕ್ಕೆ, ರಾಸಾಯನಿಕ ಗೊಬ್ಬರ ಉಪಯೋಗಿಸೋದನ್ನು ಕಲಿಸಿದ್ದೀರಾ? — ಕ— ....

ಅ—ನೀವು ಕಲಿಸಿದ್ದೀರಾ ? — ಕ— ....

ಅ—ಉಪಯೋಗಿಸೋದನ್ನು — ಕ— ....

ಅ—ಗೊಬ್ಬರ — ಕ— ....

ಅ—ರಾಸಾಯನಿಕ — ಕ— ....

ಅ—ಬೆಳೆಯಕ್ಕೆ — ಕ— ....

ಅಧ್ಯಾಪಕ— ಉತ್ತಮ ಬೆಳೆ | ಕಲಿಯುವವ— ....

ಅ—ಇವರಿಗೆ | ಕ— ....

4. ಅ—ನೀವು ನಿಮ್ಮ ಮಗಳ ಹೆಸರಿನ ಜನತಾ ಡಿಪಾಸಿಟ್ ಖಾತೆಗೆ ಹಣ ಕಟ್ಟುವುದನ್ನು ಏಕೆ ನಿಲ್ಲಿಸಿದ್ದೀರಿ | ಕ— ....

ಅ—ನೀವು ನಿಲ್ಲಿಸಿದ್ದೀರಿ | ಕ— ....

ಅ— ಏಕೆ | ಕ— ....

ಅ— ಕಟ್ಟುವುದನ್ನು | ಕ— ....

ಅ—ಹಣ | ಕ— ....

ಅ—ಖಾತೆಗೆ | ಕ— ....

ಅ—ಜನತಾ ಡಿಪಾಸಿಟ್ | ಕ— ....

ಅ—ಮಗಳ ಹೆಸರಿನ | ಕ— ....

ಅ—ನಿಮ್ಮ | ಕ— ....

5. ಅ—ನಾವು ಒಂದು ಚಿಕ್ಕ ಕಾರ್ಖಾನೆ ಮಾಡೋದಕ್ಕಾಗಿ ನಿಮ್ಮ ಬ್ಯಾಂಕಿನಲ್ಲಿ ಒಂದು ಲಕ್ಷ ರೂಪಾಯಿ ಇಟ್ಟಿದ್ದೀವಿ. | ಕ— ....

ಅ—ನಾವು | ಕ— ....

ಅ—ಲಕ್ಷ ರೂಪಾಯಿ | ಕ— ....

ಅ—ಒಂದು | ಕ— ....

ಅ— ಬ್ಯಾಂಕಿನಲ್ಲಿ | ಕ— ....

ಅ—ನಿಮ್ಮ | ಕ— ....

ಅಧ್ಯಾಪಕ—ಕಾರ್ಖಾನೆ ಮಾಡೋದಕ್ಕಾಗಿ ಕಲಿಯುವವ — ....

ಅ—ಚಿಕ್ಕ ಕ ....

ಅ—ಒಂದು ಕ— ....

EXERCISES

I Encircle the word that does not belong to the group.

1.	ಹಳ್ಳಿ	ಜಿಲ್ಲೆ	ತಾಲ್ಲೂಕು	ಮಂಗಳವಾರ
2.	ನಾಲಕ್ಕು	ಎಂಟು	ಸಾವಿರ	ಏಳು
3.	ತಿಂಗಳು	ವರ್ಷ	ವಾರ	ವಸೂಲಿ
4.	ಕೋಳಿ	ಕುಡಿ	ಕುರಿ	ಹಸು
5.	ಖಾತೆ	ಚೆಕ್‌ಬುಕ್ಕು	ಕಥೆಬುಕ್ಕು	ಪಾಸ್‌ಬುಕ್ಕು

II Transform the following into interrogative according to the model.

Model— ಕಳೆದ ಹತ್ತು ವರ್ಷದಿಂದ ಈ ಜನರಿಗೆ ಸಹಾಯ ಮಾಡಿದ್ದೀವಿ.
ಕಳೆದ ಹತ್ತು ವರ್ಷದಿಂದ ಈ ಜನರಿಗೆ ಸಹಾಯ ಮಾಡಿದ್ದೀವಾ ?

1. ನಮ್ಮ ಹಳ್ಳಿಯಲ್ಲಿ ಐದು ಯೋಜನೆಗಳನ್ನು ತೆಗೆದು ಕೊಂಡಿದ್ದೀವಿ.
2. ಹದಿನೈದು ಬಡಕುಟುಂಬಗಳು ಇದರ ಪ್ರಯೋಜನ ಪಡೆದಿದ್ದಾರೆ.
3. ಆ ಯೋಜನೆಯಲ್ಲಿ ಒಟ್ಟು ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದೀವಿ.
4. ಅರ್ಧ ಹಣ ವಾಪಸ್ ಬಂದಿದೆ, ಅರ್ಧ ಹಣ ವಾಪಸ್ ಬಂದಿಲ್ಲ.
5. ಎಲ್ಲ ಆಟಗಳಲ್ಲೂ ಇಬ್ಬರಿಗೂ ಬಹುಮಾನ ಸಿಕ್ಕಿವೆ.

III Use the following in your own sentences.

1. ಪ್ರಯಾಣ	6. ತಿಂಗಳು
2. ಮದುವೆ	7. ಆದೇಶ
3. ಅಡವು	8. ಇಳುವರಿ
4. ಉಪಯೋಗ	9. ಬಹುಮಾನ
5. ಉಳಿತಾಯ	10. ಓದು

IV Decline the following according to model.

Model — ನಾನು	ನನಗೆ	ನನ್ನಲ್ಲಿ	ನನ್ನಿಂದ	ನನ್ನನ್ನು	ನನ್ನ
1. ನಾವು	——	——	——	——	—
2. ನೀನು	——	——	——	——	—
3. ನೀವು	——	——	——	——	—
4. ಅವನು	——	——	——	——	—
5. ಅವಳು	——	——	——	——	—
6. ಅವರು	——	——	——	——	—
7. ಅದು	——	——	——	——	—
8. ಅವು	——	——	——	——	—
9. ಇದು	——	——	——	——	—
10. ಇವು	——	——	——	——	—

V Construct ten sentences on the model of the sentence given below.

Model : ಸಹಾಯವನ್ನು ಧನರೂಪದಲ್ಲಿ <u>ಒದಗಿಸಿದ್ದೀರೋ</u> ವಸ್ತು ರೂಪದಲ್ಲಿ <u>ಒದಗಿಸಿದ್ದಿರೋ</u>.

ಪಾಠ ಇಪ್ಪತ್ತೊಂದು

ಭಾಗ ಒಂದು

ನಾನು ವಿದ್ಯುತ್ ಬಿಲ್ ಕಟ್ಟಿದ್ದೆ

ರಾಮಯ್ಯ—ನಮಸ್ಕಾರ ಸರ್,

ಮ್ಯಾನೇಜರ್—ನಮಸ್ಕಾರ ರಾಮಯ್ಯನವರೇ ನೀವು ಎರಡು ಮೂರುದಿನ ಬಂದಿದ್ರಿ ಅಂತ ಸೋಮು ಹೇಳಿದ. ಏನಾದರೂ ಅರ್ಜೆಂಟ್ ಇತ್ತ ?

ರಾ—ಹೌದು ಸ್ವಾಮಿ, ಒಂದು ದೊಡ್ಡ ತೊಂದರೆ ಬಂದಿತ್ತು ಆದ್ದರಿಂದ ಎರಡು ಮೂರು ದಿನದಿಂದ ನಿಮಗೆ ಕಾದಿದ್ದೆ.

ಮ್ಯಾ—ಈಗೇನು ತಡ ಆಗಿಲ್ಲ ಹೇಳಿ.

ರಾ—ಹೋದ ತಿಂಗಳು ಎಲೆಕ್ಟ್ರಿಸಿಟಿ ಬಿಲ್ಲು ನಿಮ್ಮ ಬ್ಯಾಂಕಲ್ಲಿ ಪಾವತಿ ಮಾಡಿದ್ವಿ. ಆದರೆ, ಎಲೆಕ್ಟ್ರಿಸಿಟಿ ಬಿಲ್ ಪಾವತಿ ಮಾಡಿಲ್ಲ, ಆದ್ದರಿಂದ ಡಿಸ್‌ಕನೆಕ್ಟ್ ಮಾಡ್ತೀವಿ ಅಂತ KEBನವರು ನೋಟೀಸ್ ಕೊಟ್ಟಿದ್ದಾರೆ.

ಮ್ಯಾ—ನೀವು ನಮ್ಮಲ್ಲಿ ಹಣ ಕಟ್ಟಿದ್ದಕ್ಕೆ ರಶೀತಿ ಇದೆ ಅಲ್ಲವಾ, ಅದನ್ನ ಕೊಡಿ ನಾನು ಚೆಕ್‌ಮಾಡಿಸ್ತೀನಿ.

ರಾ—ಅದೇ ಸರ್ ತೊಂದ್ರೆ, ಹಿಂದಿನ ತಿಂಗಳು ನಾನು ಬ್ಯಾಂಕಿಗೆ ಬಂದಿರಲಿಲ್ಲ, ನನ್ನ ಆಳು ಬಂದಿದ್ದ ಅವನೇ ಹಣಾನೂ ಕಟ್ಟಿದ್ದ. ನನ್ನ ಹತ್ತಿರ ರಶೀದೀನು ಕೊಟ್ಟಿದ್ದ: ಆದರೆ ನಾನು ಅವನ್ನ ಗಡಿಬಿಡಿಯಲ್ಲಿ ಕಳೆದೆ.

ಮ್ಯಾ—ಹೋಗಲಿ, ಅವನು ಎಷ್ಟನೇ ತಾರೀಕಿಗೆ ಕಟ್ಟಿದ್ದ ಅಂತ ತಾರೀಕಾದರೂ ಗುರುತು ಇಟ್ಟಿದ್ದಿರಾ ?

ರಾ—ತಾರೀಕು ಗುರುತು ಇಟ್ಟಿರಲಿಲ್ಲ ಸಾರ್, ಅಂದಾಜು ಜ್ಞಾಪಕ ಇದೆ.

ಮ್ಯಾ—ನಿಮಗೆ ಜ್ಞಾಪಕ ಇರೋದನ್ನೇ ಹೇಳಿ.

ರಾ—ಹಣ ಕಟ್ಟೋದಕ್ಕೆ ಕೊನೇದಿನ ಇರತ್ತೆ ಅಲ್ವಾ, ಅದಕ್ಕೆ ಎರಡು ದಿನ ಮೊದಲು ಹಣ ಕಳಿಸಿದ್ದೆ.

ಮ್ಯಾ—ಅಷ್ಟಾದರೆ ಸಾಕು ನಾನು ಹುಡುಕಿಸುತ್ತೀನಿ, ನೀವು ನಿಮ್ಮ ಆಳಿನ ಹತ್ತಿರ ಕ್ಯಾಶ್ ಕಳಿಸಿದ್ದಿರೋ, ಚೆಕ್ ಕಳಿಸಿದ್ದಿರೋ ?

LESSON 21

PART 1

I HAD PAID THE ELECTRICITY BILL

Ramaiah—Namaskaara, Sir.

Manager—Namaskaara, Mr. Ramaiah. Mr. Somu told me that you had come two or three times. Is there any thing urgent ?

R—Yes, Sir. There was a big problem. So I had waited for to three days.

M—It is not late. Tell me.

R—We had paid the electricity bill in your bank last month. But KEB has given a notice to us saying that since we have not paid the electricity bill, they are going to disconnect.

M—You have the receipt for payment of money. Please give it to us. I will check.

R—That is the problem, Sir. Last month, I did not come to the bank. My attender had come. He had paid the money. He had given the receipt also to me. But because of confusion I have lost it somewhere.

M—Leave it. Have you at least noted the date on which he had paid the money ?

R—I had not noted the date either, Sir. I remember an approximate date.

M—Tell me whatever you remember.

R—There will be a last date to pay the money, you know. Two days before that I had sent the money.

M—That is enough, I will get it searched. Did you send a cheque or cash with your attender ?

ರಾ—ಹಣ ಕಳಿಸೊಕ್ಕೆ ನಾನೇನು ದಡ್ಡಾನ ಸಾರ್. ಚೆಕ್ಕನ್ನೆ ಕಳಿಸಿದ್ದೆ.

ಮ್ಯಾ—ಸೋಮು, ಎಲೆಕ್ಟ್ರಿಸಿಟಿ ಬಿಲ್ಸ್‌ದು ಲೆಡ್ಜರ್ ತಗೊಂಡು ಬಾ.

ಸೋ—ಅದು ನಿಮ್ಮ ಟೇಬಲ್ ಮೇಲೆ ಇದೆ ಸಾರ್. ಮೊನ್ನೇದಿನ ಅದನ್ನ ನಿಮ್ಮ ಟೇಬಲ್ ಮೇಲೆ ಬಿಟ್ಟಿದ್ದೆ.

ಮ್ಯಾ—ಸಿಕ್ಕಿತು ಬಿಡು. ಇದರಲ್ಲಿ ಏನೂ ಗೊತ್ತಾಗ್ತ ಇಲ್ಲ. ಸೋಮು, ಹೋದ ತಿಂಗಳು 20ನೇ ತಾರೀಕ್‌ದು ಕ್ಯಾಷಿಯರ್ ಬುಕ್ ತಗೊಂಡ್ ಬಾ.

ಸೋ—ಹೋದ ತಿಂಗಳ ಕ್ಯಾಶ್‌ಬುಕ್ಕು ಸೇಫಲ್ಲಿ ಇಟ್ಟಿದ್ದಾರಂತೆ, ಸೇಫ್ ಬೀಗ ನಿಮ್ಮ ಹತ್ತಿರ ಕೊಟ್ಟಿದ್ದಾರಂತೆ, ಬೀಗದ ಕೈ ಕೊಡಿ ತರ್ತ್ತೀನಿ.

ಮ್ಯಾ—ಬೀಗ ತಗೊ, ಬೇಗ ತಗೊಂಡು ಬಾ.

ಸೋ—ತಗೊಳ್ಳಿ ಸಾರ್.

ಮ್ಯಾ—ನೋಡಿ ರಾಮಯ್ಯನವರೆ ನಿಮ್ಮ ಆಳು ಹಣ ಪಾವತಿ ಚೀಟಿನಲ್ಲಿ ನಿಮ್ಮನೆ ಮೀಟರ್ ನಂಬರ್ ಬರೆದಿರಲಿಲ್ಲ. ಆದ್ದರಿಂದ ನಮ್ಮ ಬ್ಯಾಂಕು ಹಣವನ್ನು KEB ಖಾತೆಗೆ ವರ್ಗಾಯಿಸಿರಲಿಲ್ಲ. ಅದನ್ನು ಸಸ್ಪೆನ್ಸ್ ಅಕೌಂಟ್‌ಗೆ ಸೇರಿಸಿದ್ದಾರೆ.

ರಾ—ಹಾಗಾದರೆ ಈಗ ನಾನು ಏನು ಮಾಡ್ಲಿ ಸಾರ್

ಮ್ಯಾ—ಈ ರೀತಿ ಆಗಿದೆ ಅಂತ ನೀವು ನನಗೊಂದು ಅರ್ಜಿಕೊಡಿ. ನಾನು ಬಾಕಿಯದನ್ನು ನೋಡಿಕೊಳ್ತೀನಿ. ಇದೇ ವಿಷಯ ತಿಳಿಸಿ KEB ಗೂ ಒಂದು ಅರ್ಜಿಕೊಡಿ ಒಂದೆರಡು ದಿನದಲ್ಲಿ ಎಲ್ಲ ಸರಿಪಡಿಸ್ತೀನಿ. ಆಗಬಹುದಾ ?

ರಾ—ಆಗಲಿ ಸರ್, ತಮ್ಮಿಂದ ನನಗೆ ತುಂಬಾ ಅನುಕೂಲಆಯ್ತು. ನಿಮಗೂ KEBನವರಿಗೂ ಈಗಲೆ ಅರ್ಜಿ ಕೊಡ್ತೀನಿ.

R—Am I a fool to send cash, Sir ? I had sent a cheque.

M—Mr. Somu, bring the ledger of electricity bills.

S—That is on your table, Sir. The day before yesterday I left it an your table.

M—I got it. I do not follow anything in this. Mr. Soomu bring the cash book of 20th of last month.

S—It seems that the cash book of last month is in the safe. And the key of the safe is with you. Give me the key, I will bring.

M—Take the key, bring it quickly.

S—Take it, Sir.

M—See, Mr. Ramaiah, your attender had not written your meter number in the chellon. So our bank had not transfered that money to KEB Account. It has been deposited in the suspensce account.

R—If so, now what shall I do, Sir ?

M—Give me an application stating what happened. I will look after the rest. Give an application to KEB also intimating the same. Within a day or two I will set every thing right. Is it all right ?

R—Yes, Sir. I got good help from you. I will send an application to you and to KEB now itself.

ಭಾಗ ಎರಡು

ನಾನು ಬೆಳೆ ಸಾಲ ತೆಗೊಂಡಿದ್ದೆ

ಪುಟ್ಟೇಗೌಡ—ನಮಸ್ಕಾರ ಸ್ವಾಮಿ.

ಮೇನೇಜರ್—ನಮಸ್ಕಾರ, ಈ ವರ್ಷ ಫಸಲೆಲ್ಲ ಹೇಗೆ ಬಂದಿವೆ, ಗೌಡರೆ.

ಪು—ಈ ಸಾರಿ ಫಸಲೇನೂ ಅಷ್ಟು ಸುಖ ಇಲ್ಲ ಸ್ವಾಮಿ.

ಮೇ—ಯಾಕೆ ಗೌಡರೆ, ಹೀಗೆ ಹೇಳ್ತೀರಿ. ಮುಂಗಾರು ಮಳೆ ಭರ್ಜರಿಯಾಗಿ ಬಿದ್ದಿತ್ತಲ್ಲ.

ಪು—ಭರ್ಜರಿಯಾಗಿ ಏನೊ ಬಿತ್ತು ಸ್ವಾಮಿ, ಯಾವಾಗ ಬೇಕಾಗಿತ್ತೋ ಆಗ ಬೀಳಲಿಲ್ಲ ಅಷ್ಟೆ.

ಮೇ—ಹಾಗಾದರೆ ಈ ಸಲಾನೂ ಬೆಳೆ ಬಂದಿಲ್ವ.

ಪು—ಒಂದು ಎಂಟಾಣೆ ಭಾಗ ಬಂದಿದೆ ಅಷ್ಟೆ. ಈ ವರ್ಷಕ್ಕಿಂತ ಹಿಂದಿನ ವರ್ಷಾನೇ ಒಳ್ಳೇ ಬೆಳೆ ಬಂದಿತ್ತು. ಹೋದ ವರ್ಷ ಸಾಲ ಎಲ್ಲ ತೀರ್‍ಸಕ್ಕೆ ಆಯ್ತು. ಮಗಳಮದುವೆ ಸಹಾ ಹೋದವರ್ಷ ಮುಗಿಸಿದ್ದೆ.

ಮೇ—ಈಗ ಏನಾದರೂ ಸಹಾಯ ಆಗಬೇಕಾ ?

ಪು—ನನ್ನದು ನಿಮ್ಮ ಹತ್ತಿರ ಹಿಂದಿನ ವರ್ಷ ಪಾಣಿ ಕೊಟ್ಟಿದ್ದೆ ಅಲ್ವಾ, ಅದೂ ಅಲ್ಲದೆ ಇನ್ನೊಂದು ಜಮೀನಿದೆ ಅದಕ್ಕೆ ಸ್ವಲ್ಪ ಸಾಲ ಸಿಕ್ಕತ್ತಾ ?

ಮೇ—ಈ ಜಮೀನಲ್ಲಿ ಏನೇನು ಬೆಳೆ ಬೆಳೆಯೋದಕ್ಕೆ ಆಗತ್ತೆ ?

ಪು—ಜೋಳ, ಹತ್ತಿ, ಬೆಳೀಬಹುದು, ಸಾರ್.

ಮೇ—ಈ ತಕ್ಷಣ ಬೆಳೆ ಬೆಳೆಯೊಕ್ಕೆ ಭೂಮಿ ಯೋಗ್ಯವಾಗಿದೇ ತಾನೆ ?

ಪು—ಹೌದು ಸ್ವಾಮಿ ಭೂಮಿಯಲ್ಲಿ ಚೆನ್ನಾಗಿ ಫಸಲು ಬರುತ್ತೆ.

ಮೇ—ಈ ಹೊಲದ ಆಧಾರದ ಮೇಲೆ ಎಲ್ಲಾದರೂ ಸಾಲ ಎತ್ತಿದ್ದೀರಾ ?

ಪು—ಇಲ್ಲ ಸ್ವಾಮಿ, ಈಗ ಇದರ ಆಧಾರದ ಮೇಲೆ ಎಲ್ಲೂ ಸಾಲ ಎತ್ತಿಲ್ಲ. ನಾಲ್ಕೈದು ವರ್ಷದ ಹಿಂದೆ ಅಡಮಾನು ಬ್ಯಾಂಕಿನಿಂದ ಸಾಲ ಎತ್ತಿದ್ದೆ. ಆದರೆ ಅದನ್ನೆಲ್ಲ ತೀರಿಸಿದ್ದೆ.

PART 2

I HAD TAKEN CROP LOAN

Puttegowda—Namaskaara, Manager.

Manager—Namaskaara, Mr. Gowda, how is this year's crop?

P—This year's crop is not that good, Sir.

M—Why are you talking like this Mr. Gowda? We had good mansoon rains.

P—It rained heavily Sir. But not when it was wanted.

M—If so, now is it that, you have no crops?

P—We have 50% crops, that is all. Last year we had better crops than this year. Last year I could repay all the loan. Last year I completed the marriage of my daughter.

M—Now do you need any help?

P—Last year. I had given the pāṇi to you. In addition to that there is another piece of land. Can I get some loan for that?

M—What crops can you grow in this land?

P—Millet (jawar) and cotton can be grown, Sir.

M—Is the land good enough to grow the crops immediately?

P—Yes, Sir. Land is good. We will have good crops.

M—Have you taken loan any where on this land?

P—No, Sir. Now I have not taken any loan on this land. Four or five years ago I had taken loan from the land mortgage bank. But I have repaid all that.

ಮೇ—ನಮ್ಮ ಬ್ರಾಂಚಿನಿಂದ ನಿಮ್ಮ ಹೊಲಕ್ಕೆ ಎಷ್ಟು ದೂರ ಆಗಬಹುದು ?

ಪು—ಒಂದೈದಾರು ಮೈಲಿ ಆಗಬಹುದು ಸ್ವಾಮಿ.

ಮೇ—ಹತ್ತು ಮೈಲಿಗಿಂತ ದೂರ ಆಗೋದಿಲ್ಲ ತಾನೆ ?

ಪು—ಹೇ ! ಅಷ್ಟು ದೂರ ಆಗಲ್ಲ, ಬಿಡಿ.

ಮೇ—ಸಾಲಕ್ಕಾಗಿ ಕೆಲವು ದಾಖಲೆಗಳು ಬೇಕು, ತಂದಿದ್ದೀರಾ ?

ಪು—ಯಾವ ಯಾವ ದಾಖಲೆಗಳು ಬೇಕು ಸ್ವಾಮಿ.

ಮೇ—ಮೂರು ವರ್ಷದ ಪಾಣಿ ಸರ್ಟಿಫಿಕೇಟ್ ಬೇಕು. ಯಾರಾದರೂ ಒಬ್ಬರು ನಿಮಗೆ ಜಾಮೀನಾಗ ಬೇಕು. ಹತ್ತುಸಾವಿರ ರೂಪಾಯಿಗಿಂತ ಹೆಚ್ಚು ಸಾಲ ಬೇಕಾದ್ರೆ ನಿಮ್ಮ ಜಮೀನನ್ನು ಬ್ಯಾಂಕಿಗೆ ಅಡ ಇಡಬೇಕು.

ಪು—ನೀವು ನನ್ನ ಈ ಹೊಲದಲ್ಲಿ ಬೆಳೆ ಬೆಳೆಯಕ್ಕೆ ಎಷ್ಟು ಸಾಲ ಕೊಡ್ತೀರಿ ಸ್ವಾಮಿ ?

ಮೇ—ನಿಮ್ಮ ಖರ್ಚಿನ ಮುಕ್ಕಾಲರಷ್ಟು ಕೊಡಬಹುದು. ಅದೂ ಒಟ್ಟಾಗಿನೂ ಕೊಡಲ್ಲ, ಹಣದ ರೂಪದಲ್ಲೂ ಕೊಡಲ್ಲ. ಒಳ್ಳೆ ಬೀಜ ಕೊಡ್ತೀವಿ, ಗೊಬ್ಬರ ಗೋಡು ಕೊಡ್ತೀವಿ, ಬಿತ್ತಕ್ಕೆ, ಕಳೆ ಕೀಳಕ್ಕೆ ಕಟಾವು ಮಾಡಕ್ಕೆ, ಅದಕ್ಕೆ, ಇದಕ್ಕೆ, ಅಂತ ಅಲ್ಪ ಸ್ವಲ್ಪ ಹಣನೂ ಕೊಡ್ತೀವಿ.

ಪು—ಅದಕ್ಕೆ ಬಡ್ಡಿ ಎಷ್ಟಾಕ್ತೀರಿ ಸ್ವಾಮಿ ?

ಮೇ—ರಿಸರ್ವ್‌ಬ್ಯಾಂಕ್ ಎಷ್ಟು ಬಡ್ಡಿ ಫಿಕ್ಸ್ ಮಾಡಿರುತ್ತೊ ಅಷ್ಟು ಕೊಡಬೇಕಾಗುತ್ತೆ.

ಪು—ಇಷ್ಟು ಸಾಲಾನೂ ಯಾವಾಗ ವಾಪಸ್ ಕೊಡಬೇಕು.

ಮೇ—ನಿಮಗೆ ಬೆಳೆ ಬರುತ್ತೆ ನೋಡಿ, ಅದು ಆದ ಎರಡು ತಿಂಗಳೊಳಗೆ ಕೊಡಬೇಕು. ಅಥವಾ ಬೆಳೆ ಮಾರಿದ ಮೇಲೆ ಕೊಡಬೇಕು. ಈ ಜಮೀನು ನಿಮ್ಮ ಹೆಸರಲ್ಲೆ ಇದೆ ತಾನೆ. ಈ ಹೈಪಾತಿಕೇಶನ್ ಒಪ್ಪಂದ, ಜಾಮೀನು ಪತ್ರ ತೆಗೊಳ್ಳಿ, ಯೋಚನೆ ಮಾಡಿ, ಆಮೇಲೆ ಬನ್ನಿ, ಮಾತಾಡೋಣ.

ಪು—ಆಗಲಿ ಸ್ವಾಮಿ, ನಾನು ನಿಮ್ಮ ಹತ್ತಿರ ಬಂದಿದ್ದೆ, ಅಂತ ನಿಮ್ಮ ವ್ಯವಸಾಯ ತಾಂತ್ರಿಕ ಅಧಿಕಾರಿಗಳಿಗೂ ಹೇಳಿಬಿಡಿ. ಅವರನ್ನು ನಾನು ನೋಡಬೇಕಿತ್ತು.

ಮೇ—ಯಾಕೆ ಅವರು ನಿಮಗೆ ಚೆನ್ನಾಗಿ ಗೊತ್ತ ?

ಪು—ಅಯ್ಯೋ ತುಂಬಾ ಚೆನ್ನಾಗಿ ಗೊತ್ತು ಸ್ವಾಮಿ. ಅವರು ಹುಟ್ಟಿದ್ದು, ಓದಿದ್ದು ಎಲ್ಲ ನಮ್ಮೂರಲ್ಲೇ, ಬರ್ತೀನಿ, ಸ್ವಾಮಿ. ನಮಸ್ಕಾರ.

ಮೇ—ನಮಸ್ಕಾರ. ಹೋಗಿಬನ್ನಿ.

M—How many kms. is your land from our branch ?
P—May be five, six miles, Śir.

M—Not more than ten miles, I hope ?
P—He ! Not that much.

M—Some documents are needed for the loan. Have you brought them ?
P—What documents do you need ?
M—Three years pāṇi certificate we need, someone as guarantor. If you need more than ten thousand rupees loan, you have to mortgage your land to our bank.

P—How much loan would you give me to grow the crops in this land ?
M—3/4 of your expenses can be given. That will not be given in a lumpsum. Nor will be in the form of cash. We will give good seeds, fertilisers, seedlings, and we will pay some money also for weeding, for horvesting the crops etc.

P—How much interest will be charged on that, Sir ?
M—Whatever interest the Reserve Bank fixes will have to be given.

P—When has this loan to be repaid ?
M—You have to repay within two months after harvasting or after selling the crops. Is this land in your name ? You please take these hypothecation agreement form, surety form and the rule book. Get it read by someone. And then come. We can talk afterwords.

P—All right, Sir. Please tell your agricultural technical officer also that I had come to you. I wanted to see him.
M—Why ? Do you know him well ?
P—Oh ! I know him well, Sir. He was born, brought up and he had his schooling in our village itself. I will take leave of you, Sir. Namaskaara.
M—Namaskaara. Come again.

ಭಾಗ ಮೂರು

ಮೈಸೂರಿಗೆ ಕನ್ನಡ ಕಲಿಯಕ್ಕೆ ಹೋಗಿದ್ದೆ

ಚಂದ್ರು— ನಮಸ್ಕಾರ ಸರ್.

ಅಧಿಕಾರಿ— ನಮಸ್ಕಾರ ಚಂದ್ರು, ಕೂತ್ಕೊಳಿ ಏನು ವಿಶೇಷ.

ಚ— ವಿಶೇಷ ಏನೂ ಇಲ್ಲ ಸರ್. ನೀವೇ ಹೇಳಬೇಕು, ಹೇಗಿದ್ದೀರಿ ?

ಅ— ಚೆನ್ನಾಗಿದ್ದೀನಿ ಚಂದ್ರು

ಚ— ನೀವು ಮೈಸೂರಿಗೆ ಹೋಗಿದ್ರಿ ಅಂತ ಕೇಳಿದ್ದೆ. ಅದಕ್ಕೇ ಏನು ವಿಶೇಷ ಅಂತೀನಿ. ವಿಶೇಷ ಹೇಳಬೇಕಾದೋರು ನೀವೋ ನಾನೋ.

ಅ— ವಿಶೇಷ ಹೇಳೊದಕ್ಕೆ ನಾನೇನೂ ಮೈಸೂರಿಗೆ ಪ್ರವಾಸ ಹೋಗಿರಲಿಲ್ಲ ಕನ್ನಡ ಕಲಿಯಕ್ಕೆ ಹೋಗಿ ಅಂತ ಡೆಪ್ಯೂಟೇಷನ್ ಆರ್ಡರ್ ಬಂದಿತ್ತು. ತಪ್ಪಿಸಿಕೊಳ್ಳಬಾರದು ಅಂತಾನು ಇತ್ತು. ಆದ್ದರಿಂದ ನಾನು ಹೋಗಲೇಬೇಕಾಗಿತ್ತು, ಅದಕ್ಕಾಗಿ ಹೋಗಿದ್ದೆ. ಬ್ಯಾಂಕಿನವರೇ ಕಳಿಸಿದ್ದರು.

ಚ— ಈ ಶಾಖೆಯಿಂದ ನಿಮ್ಮ ಜೊತೆ ಇನ್ನು ಯಾರಾದರೂ ಬಂದಿದ್ದರೋ ನೀವೊಬ್ಬರೇ ಹೋಗಿದ್ದಿರೋ ?

ಅ— ಈ ಬ್ರಾಂಚಿನಿಂದ ನಾನೊಬ್ಬನೇ ಹೋಗಿದ್ದೆ, ಮತ್ಯಾರು ಬಂದಿರಲಿಲ್ಲ.

ಚ— ನಿಮ್ಮ ತರಬೇತಿ ಶಿಬಿರಕ್ಕೆ ಒಟ್ಟು ಎಷ್ಟು ಜನರು ಬಂದಿದ್ದರು ?

ಅ— ನಮ್ಮ ತರಬೇತಿ ಶಿಬಿರಕ್ಕೆ 30 ಜನರು ಬರಬೇಕಾಗಿತ್ತು ಆದರೆ 25 ಜನರು ಮಾತ್ರ ಬಂದಿದ್ದರು.

ಚ— ಮೈಸೂರಿನಲ್ಲಿ ನೀವ ಯಾವ ಹೋಟೆಲಿನಲ್ಲಿ ಉಳಿದಿದ್ದಿರಿ.

ಅ— ನಾವು ಮೈಸೂರಿನಲ್ಲಿ K P ಹೋಟೆಲಿನಲ್ಲಿ ಇಳಿದಿದ್ದೆವಿ.

ಚ— ನಿಮಗೆ ಮೈಸೂರಿನಲ್ಲಿ ಎಲ್ಲಿ ಕನ್ನಡ ಕಲಿಸಿದರು ?

ಅ— ಮೈಸೂರಿನ ಮಾನಸಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನ ಇದೆ, ಆ ಭಾರತೀಯ ಭಾಷಾ ಸಂಸ್ಥಾನದಲ್ಲಿ ಕನ್ನಡ ಕಲಿಸಿದರು.

PART 3

I HAD BEEN TO MYSORE TO LEARN KANNADA

Chandru—Namaskaara, Sir.

Officer—Namaskaara, Mr. Chandru, please sit. What is the matter.

C—Nothing special, Sir. You have to tell me. How are you?

O—I am all right Chandru.

C—I heard that you had been to Mysore. So I asked you what the matter is? Should it be you are me? To tell you something special.

O—I had not been to Mysore on excursion. They had asked me to go on deputation to learn Kannaḍa. Since they had asked me not to miss it, I had to go. So I went. The bank authorities themselves had sent me.

C—From this branch you went alone or had someone else also come?

O—From this branch only I had gone. No one else had come.

C—Total how many people in all had come for your training camp?

O—For our training camp 30 people were supposed to have come, but only 25 people had come.

C—In which hotel did you stay in Mysore?

O—In Mysore we stayed in K.P. Hotel.

C—In Mysore, where did they teach you Kannada?

O—There is the Central Institute of Indian Languages in Manasagangotri at Mysore. There they taught Kannada.

ಚ—ಅಲ್ಲಿ ನೀವು ಕನ್ನಡ ಕಲಿತಿದ್ದರಿಂದ ನಿಮಗೆ ಚೆನ್ನಾಗಿ ಮಾತಾಡಕ್ಕೆ ಬರುತ್ತೆ, ಅಲ್ಲವಾ ?

ಅ—ಹೌದು, ನಾನು ಅಲ್ಲಿ ಕನ್ನಡ ಕಲಿತಿದ್ದರಿಂದ ನನಗೆ ಚೆನ್ನಾಗಿ ಕನ್ನಡ ಮಾತಾಡಕ್ಕೆ ಬರತ್ತೆ.

ಚ—ಓದೋದಕ್ಕೆ ಬರೆಯೋದಕ್ಕೆ ಎಲ್ಲಾ ಬರುತ್ತೋ, ಬರೀ ಮಾತಾಡೋದಕ್ಕೆ ಮಾತ್ರ ಬರತ್ತೋ ?

ಅ—ಈಗ ನನಗೆ ಕನ್ನಡ ಓದೋದಕ್ಕೆ ಬರೆಯೋದಕ್ಕೆ ಮತ್ತು ಮಾತಾಡೋದಕ್ಕೆ ಬರತ್ತೆ.

ಚ—ನಿಮ್ಮ ಜೊತೆಗೆ ಇನ್ನು 24 ಜನ ಇದ್ದರು ಅಲ್ಲವಾ ಸರ್, ಅವರು ಎಲ್ಲ ಚೆನ್ನಾಗಿ ಕನ್ನಡ ಕಲಿತಿದ್ದಾರಾ?

ಅ—ಕೆಲವರಂತೂ ತರಬೇತಿಯ ಕೊನೆಯ ಹೊತ್ತಿಗೆ ಚೆನ್ನಾಗಿ ಕಲಿತಿದ್ದರು. ಎಲ್ರೊ ಒಂದಿಬ್ಬರು ಸ್ವಲ್ಪ ಹಿಂದೆ ಇದ್ದರು.

ಚ—ಹಾಗಾದರೆ ನಿಮ್ಮ ಈ ಕನ್ನಡ ತರಬೇತಿಯಿಂದ ಎಲ್ಲರಿಗೂ ಅನುಕೂಲ ಆಯಿತು.

ಅ—ಓಹೋ, ಈ ತರಬೇತಿಯಿಂದ ನಮ್ಮೆಲ್ಲರಿಗೂ ಅನುಕೂಲ ಆಯಿತು. ಇನ್ನುಮೇಲೆ ನಾವು ಮಾತಾಡಕೆ, ಓದಕ್ಕೆ ಬರೆಯಕ್ಕೆ, ಬೇರೆಯವರ ಸಹಾಯ ತೆಗೊಳ್ಳೋದು ತಪ್ಪಿತು.

ಚ—ಅದೂ ಸರಿ, ನಿಮಗೇ ಅನುಕೂಲ ಆಯಿತು. ನಾನಿನ್ನು ಬರ್‍ತೀನಿ, ಸರ್.

ಅ—ಆಗಲಿ, ಆಗಾಗ್ಗೆ ಬರ್‍ತಾ ಇರಿ

ಚ—ನಮಸ್ಕಾರ

ಅ—ನಮಸ್ಕಾರ

C—Since you learnt Kannada there, you are capable of speaking Kannada well. Is not it, Sir?

O—Yes, since I learnt Kannada there I am able to speak Kannada well.

C—Do you know only how to speak or you can read and write too?

O—Now I am able to read, write and speak Kannada.

C—There were 24 people along with you weren't they, Sir? Did all of them learn Kannada well?

O—By the end of our training program many people had learnt well. Only one or two were lagging behind

C—So all of you were benefitted by this Kannada training program.

O—Oh, all were benefitted by this training. Now onwords we need not depend upon others for reading and writing.

C—That is right. It will be helpful for you. Shall I take leave of you, Sir?

O—All right, keep coming.

C—Namaskaara.

O—Namaskaara.

★

DRILLS

REPETITION DRILL

ಅಧ್ಯಾಪಕ— ನೀವು ಏನು ಕಟ್ಟಿದ್ದಿರಿ ? ಕಲಿಯುವವ— ....

ಅ— ನಾನು ವಿದ್ಯುತ್ ಬಿಲ್ ಕಟ್ಟಿದ್ದೆ. ಕ— ....

ಅ— ಸೋಮು ಏನು ಹೇಳಿದ್ದ ? ಕ— ....

ಅ— ನೀವು ಎರಡು ಮೂರುದಿನ ಬಂದಿದ್ರಿ, ಅಂತ ಹೇಳಿದ್ದ. ಕ— ....

ಅ— ನೀವು ಯಾಕೆ ಎರಡು ಮೂರು ದಿನದಿಂದ ಕಾದಿದ್ರಿ ? ಕ— ....

ಅ— ನನಗೆ ಒಂದು ದೊಡ್ಡ ತೊಂದರೆ ಬಂದಿತ್ತು, ಆದ್ದರಿಂದ ಕಾದಿದ್ದೆ. ಕ— ....

ಅ— ಯಾವಾಗ ಎಲೆಕ್ಟ್ರಿಸಿಟಿ ಬಿಲ್ಲು ನಮ್ಮ ಬ್ಯಾಂಕಲ್ಲಿ ಪಾವತಿ ಮಾಡಿದ್ರಿ ? ಕ— ....

ಅ— ಹೋದ ತಿಂಗಳು ಎಲೆಕ್ಟ್ರಿಸಿಟಿ ಬಿಲ್ಲು ನಿಮ್ಮ ಬ್ಯಾಂಕಲ್ಲಿ ಪಾವತಿ ಮಾಡಿದ್ವಿ. ಕ— ....

ಅ— KEB ನವರು ಏನು ಕೊಟ್ಟಿದ್ದಾರೆ ? ಕ— ....

ಅ— KEB ನವರು ನೋಟೀಸು ಕೊಟ್ಟಿದ್ದಾರೆ.

ಅ— ನಿಮ್ಮ ಹತ್ತಿರ ನಮ್ಮಲ್ಲಿ ಹಣ ಕಟ್ಟಿದ್ದಕ್ಕೆ ರಸೀತಿ ಇದೆಯಾ ? ಕ— ....

ಅ— ಹಿಂದಿನ ತಿಂಗಳು ನಾನು ಬ್ಯಾಂಕಿಗೆ ಬಂದಿರಲಿಲ್ಲ, ಆಳು ಬಂದಿದ್ದ, ರಸೀತಿ ಕಳೆದಿದೆ. ಕ— ....

ಅಧ್ಯಾಪಕ—ಆವನು ಎಷ್ಟನೇ ತಾರೀಕು ಕಟ್ಟಿದ್ದ ಅಂತ ತಾರೀಕಾದರೂ ಗುರುತು ಇಟ್ಟಿದ್ರಾ ?	ಕಲಿಯುವವ — ....
ಅ—ತಾರೀಕು ಗುರುತು ಇಟ್ಟಿರಲಿಲ್ಲ.	ಕ— ....
ಅ—ಹಣ ಕಟ್ಟೋದಕ್ಕೆ ಕೊನೇ ದಿನಕ್ಕೆ ಎರಡು ದಿನ ಮೊದಲು ಹಣ ಕಳಿಸಿದ್ದೆ.	ಕ— ....
ಅ—ನೀವು ಆಳಿನ ಹತ್ತಿರ ಕ್ಯಾಷ್ ಕಳಿಸಿದ್ದಿರೋ, ಚೆಕ್ ಕಳಿಸಿದ್ರೊ ?	ಕ— ....
ಅ—ಹಣ ಕಳಿಸೋದಕ್ಕೆ ನಾನೇನು ದಡ್ಡನಾ ? ಚೆಕ್ಕನ್ನೇ ಕಳಿಸಿದ್ದೆ.	ಕ— ....
ಅ—ಪಾವತಿ ಚೀಟಿಯಲ್ಲಿ ನಿಮ್ಮ ಮನೆ ಮೀಟರ್ ನಂಬರ್ ಬರೆದಿದ್ದಿರಾ ?	ಕ— ....
ಅ—ಇಲ್ಲ, ನಮ್ಮ ಮನೆ ಮೀಟರ್ ನಂಬರ್ ಬರೆದಿರಲಿಲ್ಲ.	ಕ— ....
ಅ—ಮುಂಗಾರು ಮಳೆ ಚೆನ್ನಾಗಿ ಬಿದ್ದಿತ್ತಾ ?	ಕ— ....
ಅ—ಇಲ್ಲ ಮುಂಗಾರು ಮಳೆ ಚನ್ನಾಗಿ ಬಿದ್ದಿರಲಿಲ್ಲ.	ಕ— ....
ಅ—ಈ ವರ್ಷಕ್ಕಿಂತ ಹಿಂದಿನ ವರ್ಷವೇ ಒಳ್ಳೆ ಬೆಳೆ ಬಂದಿತ್ತಾ ?	
ಅ—ಹೌದು, ಈ ವರ್ಷಕ್ಕಿಂತ ಹಿಂದಿನ ವರ್ಷವೇ ಒಳ್ಳೇ ಬೆಳೆ ಬೆಳೆದಿತ್ತು.	ಕ— ....
ಅ—ನೀವು ಹೋದ ವರ್ಷ ಏನು ಮಾಡಿದ್ದಿರಿ ?	ಕ— ....
ಅ—ನಾನು ಹೋದ ವರ್ಷ ಮಗಳ ಮದುವೆ ಮುಗಿಸಿದ್ದೆ.	ಕ— ....
ಅ—ಈ ಹೊಲದ ಆಧಾರದ ಮೇಲೆ ಎಲ್ಲಾದರೂ ಸಾಲ ಎತ್ತಿದ್ದಿರಾ ?	ಕ— ....

ಅಧ್ಯಾಪಕ—ಇಲ್ಲ, ಇದರಮೇಲೆ ಈಗ ಎತ್ತಿಲ್ಲ. ನಾಲ್ಕೈದು ವರ್ಷದ ಹಿಂದೆ ಅಡಮಾನ ಬ್ಯಾಂಕಿನಿಂದ ಸಾಲ ಎತ್ತಿದ್ದೆ. ಅದನ್ನೆಲ್ಲ ತೀರಿಸಿದ್ದೆ. ಕಲಿಯುವವ— ....

ಅ—ಸಾಲಕ್ಕಾಗಿ ಕೆಲವು ದಾಖಲೆಗಳು ಬೇಕು, ತಂದಿದ್ದೀರಾ ? ಕ— ....

ಅ—ಹೌದು, ತಂದಿದ್ದೇನೆ. ಕ— ....

SUBSTITUTION DRILL

1 ಅ—ನಾನು ಹಿಂದಿನ ತಿಂಗಳು ವಿದ್ಯುತ್ ಬಿಲ್ ಕಟ್ಟಿದ್ದೆ. ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

2 ಅ—ನಾನು ನಿನ್ನೆ ಬೆಳಗ್ಗೆ ಹತ್ತು ಗಂಟೆಗೆ ಬ್ಯಾಂಕಿಗೆ ಬಂದಿದ್ದೆ. ಕ— ....

ಅ—ನಾವು ಕ— ....

ಅಧ್ಯಾಪಕ—ನೀನು	ಕಲಿಯುವವ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
3 ಅ—ನಾನು ಸಾಲದ ಅಸಲು ಮತ್ತು ಬಡ್ಡಿಯನ್ನು ಒಂದು ವರ್ಷದ ಹಿಂದೆ ಪಾವತಿ ಮಾಡಿದ್ದೆ.	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
4 ಅ—ನಾನು ಎಷ್ಟನೇ ತಾರೀಕು ಹಣ ಕೊಟ್ಟಿದ್ದೆ ಅಂತ ಗುರುತು ಇಟ್ಟಿದ್ದೆ.	ಕ— ....
ಅ—ನಾವು	ಕ— ....

ಅಧ್ಯಾಪಕ—ನೀನು	ಕಲಿಯುವವ—	....
ಅ—ನೀವು	ಕ—	....
ಅ—ಅವನು	ಕ—	....
ಅ—ಅವಳು	ಕ—	....
ಅ—ಅವರು	ಕ—	....
ಅ—ಅದು	ಕ—	....
ಅ—ಅವು	ಕ—	....
5 ಅ—ನಾನು ಎಷ್ಟನೇ ತಾರೀಕು ಹೋಗಿದ್ದೆ ಅಂತ ಬರೆದಿದ್ದೆ.	ಕ—	....
ಅ—ನಾವು	ಕ—	....
ಅ—ನೀನು	ಕ—	....
ಅ—ನೀವು	ಕ—	....
ಅ—ಅವನು	ಕ—	....
ಅ—ಅವಳು	ಕ—	....
ಅ—ಅವರು	ಕ—	....
ಅ—ಅದು	ಕ—	....
ಅ—ಅವು	ಕ—	....
6 ಅ—ನಾನು ಹಳ್ಳಿಯವರು ಕಳಿಸಿದ್ದ ಅರ್ಜಿ ಓದಿದ್ದೆ.	ಕ—	....
ಅ—ನಾವು	ಕ—	....

ಅಧ್ಯಾಪಕ—ನೀನು ಕಲಿಯುವವ— ....

ಅ—ನೀವು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

7 ಅ—ನಾನು ಮಾರ್ಕೆಟ್ಟಲ್ಲಿ ತರಕಾರಿ ಕೊಂಡು ಕೊಂಡಿದ್ದನೋ ದಿನಸಿ ಕೊಂಡುಕೊಂಡಿದ್ದನೋ ? ಕ— ....

ಅ—ನಾವು ಕ— ....

ಅ—ನೀನು ಕ— ....

ಅ—ಅವನು ಕ— ....

ಅ—ಅವಳು ಕ— ....

ಅ—ಅವರು ಕ— ....

ಅ—ಅದು ಕ— ....

ಅ—ಅವು ಕ— ....

ಅ—ನಾನು 9ನೇ ಲೆಡ್ಜರನ್ನು ಟೇಬಲ್‌ಮೇಲೆ ಬಿಟ್ಟಿದ್ದನಾ ? ಕ— ....

ಅ—ನಾವು ಕ— ....

ಅ—ನೀನು ಕ— ....

ಅಧ್ಯಾಪಕ—ನೀವು	ಕಲಿಯುವವ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
9 ಅ—ನಾನು ಮುಂಗಾರು ಫಸಲನ್ನು ಭರ್ಜರಿಯಾಗಿ ಬೆಳೆದಿದ್ದೆನಾ	ಕ— ....
ಅ—ನಾವು	ಕ— ....
ಅ—ನೀನು	ಕ— ....
ಅ—ನೀವು	ಕ— ....
ಅ—ಅವನು	ಕ— ....
ಅ—ಅವಳು	ಕ— ....
ಅ—ಅವರು	ಕ— ....
ಅ—ಅದು	ಕ— ....
ಅ—ಅವು	ಕ— ....
10 ಅ—ನಿಮ್ಮ ಆಳು ಹಣ ಪಾವತಿ ಚೀಟಿಯಲ್ಲಿ ಮನೆಯ ಮೀಟರ್ ನಂಬರ್ ಬರೆದಿರಲಿಲ್ಲ.	ಕ— ....
ಅ—ಅವರು	ಕ— ....
ಅ—ಜವಾನ	ಕ— ....

ಅಧ್ಯಾಪಕ—ಚೆಕ್ಕು ಕಲಿಯುವವ— ....

ಅ—ರೂಮು ಕ— ....

ಅ—ಬಾಗಿಲು ಕ— ....

ಅ—ತೋರಿಸು ಕ— ....

TRANSFORMATION DRILL

Transform the following into negative.

ಅ—ಮೇನೇಜರ್ ಅವರು ಬ್ಯಾಂಕಿನಲ್ಲಿ ಜಾಗವನ್ನು ಬದಲಾಯಿಸಿದ್ದರು. ಕ— ....

ಅ—ಎಲ್ಲ ಉಳಿತಾಯ ಖಾತೆಗಳ ನಿಯಮಗಳನ್ನು ವಿಚಾರಿಸಿದ್ದೆ. ಕ— ....

ಅ—ಎಲ್ಲ ರೈತರೂ ಸಾಲಕ್ಕಾಗಿ ತುಂಬಾ ಕಾದಿದ್ದರು ಕ— ....

ಅ—ಹೆಂಗಸರು ಅಂಗಡಿಯ ಹೊರಗೆ ಕುಳಿತು ಕೊಂಡಿದ್ದರು. ಕ— ....

ಅ—ನಿಮ್ಮ ಹಳ್ಳಿಯನ್ನು ಅಭಿವೃದ್ಧಿಯೋಜನೆಗೆ ಆರಿಸಿದ್ದೀವಿ. ಕ— ....

ಅ—ನಿಮ್ಮ ಹಳ್ಳಿಯ ಎಲ್ಲರೂ ಸಾಲಕ್ಕಾಗಿ ಅರ್ಜಿ ಹಾಕಿದ್ದರು. ಕ— ....

ಅ—ಹಳ್ಳಿಯ ಗೌಡರು ಬೆಳೆಸಾಲಕ್ಕಾಗಿ ವ್ಯವಸಾಯ ತಜ್ಞರನ್ನು ನೋಡಿದ್ದರು. ಕ— ....

ಅ—ಇಲ್ಲಿಂದ ಪ್ರಧಾನ ಕಚೇರಿಗೆ ಹೋಗಕ್ಕೆ ನಾಲ್ಕು ದಿನ ಹಿಂದೆಯೇ ಹೊರಟಿದ್ದೆ. ಕ— ....

ಅಧ್ಯಾಪಕ—ನಿಮ್ಮ ಎಲ್ಲ ಪ್ರವಾಸಿ ಚೆಕ್ಕುಗಳನ್ನು ಬೆಂಗಳೂರಿನ ಸಿಂಡಿಕೇಟ್ ಬ್ಯಾಂಕಿನಲ್ಲಿ ಮುರಿಸಿದ್ದೆ. ಕ— ....

ಅ—ಇದೇ ವಿಷಯಕ್ಕಾಗಿ ಅವರೇ ನನ್ನನ್ನು ಕಂಡಿದ್ದರು. ಕ— ....

ಅ—ಅಂಗಡಿ ಬಸವಣ್ಣನವರು ಪ್ರಧಾನ ಕಚೇರಿಯಲ್ಲಿ ಸಿಕ್ಕಿದ್ದರು. ಕ— ....

ಅ—ನನ್ನ ಎಲ್ಲ ಸಲಹೆಗಳನ್ನೂ ಸಲಹಾ ಪೆಟ್ಟಿಗೆಯಲ್ಲಿ ಹಾಕಿದ್ದೆ. ಕ ....

ಅ—ಬ್ಯಾಂಕಿಗೆ ಬರಕ್ಕೆ ಹತ್ತು ಗಂಟೆಗೆ ಹೊರಟಿದ್ದೆ. ಕ— ....

ಅ—ಎಲ್ಲ ಕಾಗದ ಪತ್ರಗಳನ್ನು ಫೈಲಿನಲ್ಲಿ ಜೋಡಿಸಿ ಇಟ್ಟಿದ್ದೆ. ಕ— ....

ಅ—ಈಗ ಸ್ವಲ್ಪ ಹೊತ್ತಿಗೆ ಮುಂಚೆ ಕಾಫಿ ಕುಡಿದಿದ್ದೆ. ಕ— ....

BUILD-UP DRILL

I ಅ—ವಿದ್ಯುತ್ ಬಿಲ್ ಪಾವತಿ ಮಾಡಿಲ್ಲ ಆದುದರಿಂದ ಡಿಸ್‌ಕನೆಕ್ಟ್ ಮಾಡ್ತೀವಿ ಅಂತ KEB ನವರು ನೋಟೀಸ್ ಕೊಟ್ಟಿದ್ದಾರೆ. ಕ— ....

ಅ—ಕೊಟ್ಟಿದ್ದಾರೆ ಕ— ....

ಅ—ನೋಟೀಸ್ ಕ— ....

ಅ—KEB ನವರು ಕ— ....

ಅ—ಮಾಡ್ತೀವಿ ಅಂತ ಕ— ....

ಅ—ಡಿಸ್‌ಕನೆಕ್ಟ್ ಕ— ....

ಅ—ಆದ್ದರಿಂದ	ಕಲಿಯುವವ —	....
ಅ—ಪಾವತಿ ಮಾಡಿಲ್ಲ	ಕ—	....
ಅ—ವಿದ್ಯುತ್‌ಬಿಲ್	ಕ—	....
2 ಅ—ಅವನು ಎಷ್ಟನೇ ತಾರೀಕು ಬ್ಯಾಂಕಿಗೆ ಹಣ ಕಟ್ಟಿದ್ದ ಅಂತ ತಾರೀಕಾದರೂ ಗುರುತು ಇಟ್ಟಿದ್ದೀರಾ.	ಕ—	....
ಅ—ಇಟ್ಟಿದ್ದೀರಾ	ಕ—	....
ಅ—ಗುರುತು	ಕ—	....
ಅ—ತಾರೀಕಾದರೂ	ಕ—	....
ಅ—ಕಟ್ಟಿದ್ದ ಅಂತ	ಕ—	....
ಅ—ಹಣ	ಕ—	....
ಅ—ಬ್ಯಾಂಕಿಗೆ	ಕ—	....
ಅ—ಎಷ್ಟನೇ ತಾರೀಕು	ಕ—	....
ಅ—ಅವನು	ಕ—	....
3 ಅ—ರಾಮಯ್ಯನವರೇ ನಿಮ್ಮ ಆಳು ಹಣ ಪಾವತಿ ಚೀಟಿಯಲ್ಲಿ ನಿಮ್ಮ ಮನೆ ಮೀಟರ್ ನಂಬರ್ ಬರೆದಿರಲಿಲ್ಲ.	ಕ—	....
ಅ—ಬರೆದಿರಲಿಲ್ಲ	ಕ—	....
ಅ—ನಂಬರ್	ಕ—	....
ಅ—ಮೀಟರ್	ಕ—	....
ಅ—ನಿಮ್ಮ ಮನೆ	ಕ—	....

ಅಧ್ಯಾಪಕ—ಚೀಟಿಯಲ್ಲಿ ಕಲಿಯುವವ— ....

ಅ—ಹಣ ಪಾವತಿ ಕ— ....

ಅ—ನಿಮ್ಮ ಆಳು ಕ— ....

ಅ—ರಾಮಯ್ಯನವರೇ ಕ— ....

4 ಅ— ಯಾಕೆ ಗೌಡ್ರೆ, ಹೀಗೆ ಹೇಳ್ತೀರಿ ಮುಂಗಾರು ಮಳೆ ಭರ್ಜರಿಯಾಗಿ ಬಿದ್ದಿತ್ತಲ್ಲ. ಕ— ....

ಅ—ಬಿದ್ದಿತ್ತಲ್ಲ ಕ— ....

ಅ—ಭರ್ಜರಿಯಾಗಿ ಕ— ....

ಅ—ಮಳೆ ಕ— ....

ಅ—ಮುಂಗಾರು ಕ— ....

ಅ—ಹೀಗೆ ಹೇಳ್ತೀರಿ ಕ— ....

ಅ—ಯಾಕೆ ಗೌಡ್ರೆ ಕ— ....

5 ಅ—ನಿಮ್ಮ ಬ್ಯಾಂಕಿನ ವ್ಯವಸಾಯ ತಾಂತ್ರಿಕ ಅಧಿಕಾರಿಗಳು ಹುಟ್ಟಿದ್ದು ಬೆಳೆದಿದ್ದು ಓದಿದ್ದು ಎಲ್ಲ ನಮ್ಮೂರಲ್ಲೇ ಕ— ....

ಅ—ನಮ್ಮೂರಲ್ಲೇ ಕ— ....

ಅ—ಎಲ್ಲ ಕ— ....

ಅ—ಓದಿದ್ದು ಕ— ....

ಅ—ಬೆಳೆದಿದ್ದು ಕ— ....

ಅ—ಹುಟ್ಟಿದ್ದು ಕ— ....

ಅಧ್ಯಾಪಕ—ಅಧಿಕಾರಿಗಳು	ಕಲಿಯುವವ—	....
ಅ—ತಾಂತ್ರಿಕ	ಕ—	....
ಅ—ವ್ಯವಸಾಯ	ಕ—	....
ಅ—ನಿಮ್ಮ ಬ್ಯಾಂಕಿನ	ಕ—	....

EXERCISES

I Choose the appropriate forms from the three forms given below the sentence to complete the sentence correctly.

1 ಬ್ಯಾಂಕಿನವರು ನನಗೆ ನೋಟೀಸು ———
(ಕೊಟ್ಟಿದ್ದಾನೆ, ಕೊಟ್ಟಿದ್ದಾರೆ, ಕೊಟ್ಟಿದೆ.)

2 ಕಳೆದ ತಿಂಗಳು ನಾನು ನಿಮ್ಮ ಊರಿಗೆ ಬಂದಿರಲಿಲ್ಲ, ನಮ್ಮ ಆಳು ———
(ಬಂದಿದ್ದ, ಬರ್ತ್ತಾರೆ, ಬರ್ತ್ತಾ ಇದ್ದಾನೆ.)

3 ಈ ವರ್ಷಕ್ಕಿಂತ ಹಿಂದಿನ ವರ್ಷವೇ ಜಾಸ್ತಿವಸೂಲಿ ———
(ಆಗುತ್ತೆ, ಆಗಿತ್ತು, ಆಗ್ತಾ ಇದೆ.)

4 ನಾನು ಎರಡು ವರ್ಷದ ಹಿಂದೆ ಆ ಕೆಲಸ ———
(ಮುಗಿಸು, ಮುಗಿಸ್ತೀನಿ, ಮುಗಿಸಿದ್ದೆ.)

5 ನಾನು ಕಳೆದ ವರ್ಷದ ಫಸಲನ್ನು ಚೆನ್ನಾಗಿ ——— ?
(ಬೆಳೆದಿದಾನಾ, ಬೆಳೆದಿದ್ದೆನಾ, ಬೆಳೀತೀನಾ.)

II Match the following.

	A		B	
1	ನಾನು	a	ಬಂದಿದ್ರಿ	( )
2	ನಾವು	b	ಬಂದಿದ್ರು	( )
3	ನೀನು	c	ಬಂದಿತ್ತು	( )
4	ನೀವು	d	ಬಂದಿದ್ವಿ	( )
5	ಅವನು	e	ಬಂದಿದ್ಳು	( )
6	ಅವಳು	f	ಬಂದಿದ್ವು	( )
7	ಅವರು	g	ಬಂದಿದ್ದ	( )
8	ಅದು	h	ಬಂದಿದ್ದೆ	( )
9	ಅವು	i	ಬಂದಿದ್ದ	( )

III Change the following sentences into questions by choosing the appropriate question word for the underlined part of the sentence.

1 ನಿಮಗೆ ಧನ ಸಹಾಯ ಬೇಕು.

2 ಹೋದ ತಿಂಗಳು ಎಲೆಕ್ಟ್ರಿಸಿಟಿ ಬಿಲ್ಲು ನಮ್ಮ ಬ್ಯಾಂಕಲ್ಲಿ ಪಾವತಿ ಮಾಡಿದ್ರಿ.

3 ನೀವು ನಿಮ್ಮ ಆಳಿನ ಹತ್ತಿರ ಕ್ಯಾಶ್ ಕಳಿಸಿದ್ರಿ.

4 ಹೋದ ತಿಂಗಳು ಮೂವತ್ತನೇ ತಾರೀಕ್‌ದು ಕ್ಯಾಷಿಯರ್ ಬುಕ್ ತಗೊಂಡ್ ಬಾ.

5 ಈಗ ಸ್ವಲ್ಪ ಬೆಳೆ ಬಂತು.

6 ಈ ಜಮೀನಿನಲ್ಲಿ ಜೋಳ, ಹತ್ತಿ ಬೇಳೀಬಹುದು, ಸಾರ್.

7 ನಮ್ಮ ಮನೆಯಿಂದ ನಿಮ್ಮ ಮನೆಗೆ ತುಂಬ ದೂರ ಆಗಬಹುದು.

IV Fill in the blank with the appropriate form of the word given in the bracket.

1 ನನಗೆ ಹಣ ಬೇಕಾಗಿತ್ತು, ಆದ್ದರಿಂದ ಒಂದು ವಾರದಿಂದ ನಿಮಗೆ ——— (ಕಾಯು)

2 ನೀವು ಹಣ ಕಟ್ಟದೆಇದ್ದರೆ ಜೈಲಿಗೆ ಕಳಿಸ್ತೀನಿ ಅಂತ ನಿನ್ನೆ ನೋಟೀಸು ——— (ಕೊಡು)

3 ನಾನು ಮೊನ್ನೆ ಪಾಸ್ ಬುಕ್ಕನ್ನು ನಿಮ್ಮ ಬ್ಯಾಂಕಲ್ಲೇ ——— (ಬಿಡು)

4 ಇನ್ನೊಂದು ಅಂಗಡಿ ಇಡ್ತೀನಿ, ಅದಕ್ಕೆ ಸ್ವಲ್ಪ ಸಾಲ ——— ? (ಸಿಗು)

LESSON 22

DIARY

I am the wife of a bank officer. I get up at 5 in the morning. After getting up I wake up my children. By then my husband too gets up. After my husband gets up, I give coffee to all. None of them drink coffee without washing their faces. After drinking coffee all of them go for a bath one after the other. By the time they complete their bath, it will be 7. My husband does not have his breakfast without reading the newspaper. After reading the news paper he comes to the kitchen for having breakfast. After their breakfast I wash the plates and cups, and then go for a bath. I have the children put on school uniform. Till then he helps the children in their studies. After coaching the children he goes to office. I take children to school, and leave them there. After leaving them in the school, I cook. After doing all the kitchen work I read news papers, and weekly, monthly, or a novel. In the afternoon I do not get sleep without reading anything. I sleep nearly for an hour. By 5 children come home. He also comes home. After all of them arrive, we will have tiffen together and go for a walk. After coming back from the walk, children read and come for food with their father. All of us sit together and eat. We sleep after food.

ಪಾಠ ಇಪ್ಪತ್ತೆರಡು

ದಿನಚರಿ

ನಾನು ಬ್ಯಾಂಕ್ ಅಧಿಕಾರಿಯ ಹೆಂಡತಿ. ನಾನು ಬೆಳಿಗ್ಗೆ ಐದು ಗಂಟೆಗೆ ಏಳ್ತೀನಿ. ನಾನು ಎದ್ದು ನನ್ನ ಮಕ್ಕಳನ್ನು ಏಳಿಸ್ತೀನಿ. ಅಷ್ಟು ಹೊತ್ತಿಗೆ ನನ್ನ ಯಜಮಾನರೂ ಏಳ್ತಾರೆ. ನಮ್ಮ ಯಜಮಾನರು ಎದ್ದು ಆದ ಮೇಲೆ ಎಲ್ಲರಿಗೂ ಕಾಫಿ ಮಾಡಿ ಕೊಡ್ತೀನಿ. ಅವರು ಯಾರೂ ಮುಖ ತೊಳೆಯದೆ ಕಾಫಿ ಕುಡಿಯಲ್ಲ. ಅವರೆಲ್ಲರೂ ಕಾಫಿ ಕುಡಿದು ಒಬ್ಬೊಬ್ಬರಾಗಿ ಸ್ನಾನ ಮಾಡಕ್ಕೆ ಹೋಗ್ತಾರೆ. ಅವರ ಸ್ನಾನ ಮುಗಿಯಕ್ಕೆ ಏಳು ಗಂಟೆ ಆಗತ್ತೆ. ನನ್ನ ಯಜಮಾನರು ಪೇಪರ್ ಓದದೆ ತಿಂಡಿ ತಿನ್ನಲ್ಲ. ಆದುದರಿಂದ ಅವರ ಪೇಪರ್ ಓದಿತಿಂಡಿ ತಿನ್ನಕೆ ಎಂಟು ಗಂಟೆಗೆ ಅಡಿಗೆ ಮನೆಗೆ ಬರ್ತಾರೆ. ಎಲ್ಲರೂ ತಿಂಡಿ ತಿಂದು ಆದಮೇಲೆ ನಾನು ತಟ್ಟೆ ಲೋಟ ತೊಳೆದು, ತಿಂಡಿ ತಿಂದು, ಸ್ನಾನಕ್ಕೆ ಹೋಗ್ತೀನಿ. ಮಕ್ಕಳಿಗೆ ಶಾಲೆಯ ಯೂನಿಫಾರಂ ಹಾಕ್ತೀನಿ. ಅಲ್ಲಿಯ ತನಕ ಮಕ್ಕಳಿಗೆ ಪಾಠ ಹೇಳಿ ಕೊಡ್ತಾರೆ. ಮಕ್ಕಳಿಗೆ ಪಾಠ ಹೇಳಿ ಕೊಟ್ಟು ಆಫೀಸಿಗೆ ಹೋಗ್ತಾರೆ. ನಾನು ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿಬಿಡ್ತೀನಿ. ಅವರನ್ನು ಶಾಲೆಗೆ ಬಿಟ್ಟುಬಂದು ಮನೆಯ ಅಡಿಗೆ ಕೆಲಸ ಮಾಡ್ತೀನಿ. ಅಡಿಗೆ ಕೆಲಸವೆಲ್ಲ ಮಾಡಿ, ದಿನ ಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಅಥವಾ ಕಾದಂಬರಿ ಓದ್ತೀನಿ. ಮದ್ಯಾಹ್ನದ ಹೊತ್ತು ಏನೂ ಓದದೆ ನಿದ್ದೆಬರಲ್ಲ. ಸುಮಾರು ಒಂದು ಘಂಟೆ ನಿದ್ದೆಮಾಡ್ತೀನಿ. ಐದು ಘಂಟೆಯ ಹೊತ್ತಿಗೆ ಮಕ್ಕಳು ಮನೆಗೆ ಬರ್ತಾರೆ. ಯಜಮಾನರೂ ಮನೆಗೆ ಬರ್ತಾರೆ. ಅವರೆಲ್ಲರೂ ಬಂದ ಮೇಲೆ ಎಲ್ಲರೂ ಜೊತೆಯಲ್ಲಿ ತಿಂಡಿ ತಿಂದು, ವಾಕಿಂಗ್ ಹೋಗ್ತೀವಿ. ವಾಕಿಂಗ್‌ನಿಂದ ಬಂದ ಮೇಲೆ ಮಕ್ಕಳು ಪಾಠ ಓದಿ ಅವರ ತಂದೆಯ ಜೊತೆ ಊಟಕ್ಕೆ ಬರ್ತಾರೆ. ಎಲ್ಲರೂ ಒಟ್ಟಿಗೆ ಕಳಿತು ಊಟಮಾಡಿ ಮಲಗ್ತೀವಿ.

★

DRILLS

REPETITION DRILL

ಅ—ನಾನು ಎದ್ದು ಮಕ್ಕಳನ್ನು ಎಬ್ಬಿಸ್ತೀನಿ. ಕಲಿಯುವವ— ....

ಅ—ನಾನು ಎದ್ದು ಎಲ್ಲರಿಗೂ ಕಾಫಿ ಮಾಡಿ ಕೊಡ್ತೀನಿ. ಕ— ....

ಅ—ಅವರು ಯಾರೂ ಮುಖ ತೊಳೆಯದೆ ಕಾಫಿ ಕುಡಿಯಲ್ಲ. ಕ— ....

ಅ—ಅವರೆಲ್ಲರೂ ಕಾಫಿ ಕುಡಿದು ಸ್ನಾನಕ್ಕೆ ಹೋಗ್ತಾರೆ. ಕ— ....

ಅ— ನನ್ನ ಯಜಮಾನರು ಪೇಪರ್ ಓದದೆ ತಿಂಡಿ ತಿನ್ನಲ್ಲ. ಕ— ....

ಅ—ಅವರು ಪೇಪರ್ ಓದಿ ತಿಂಡಿ ತಿನ್ನಕ್ಕೆ ಬರ್ತಾರೆ. ಕ— ....

ಅ— ಎಲ್ಲರೂ ತಿಂಡಿ ತಿಂದಾದ ಮೇಲೆ ನಾನು ತಟ್ಟೆ ಲೋಟ ತೊಳೆದು ಸ್ನಾನಕ್ಕೆ ಹೋಗ್ತೀನಿ. ಕ— ....

ಅ—ಅವರು ಮಕ್ಕಳಿಗೆ ಪಾಠ ಹೇಳಿ ಕೊಡ್ತಾರೆ. ಕ— ....

ಅ—ನಾನು ಮಕ್ಕಳನ್ನು ಶಾಲೆಗೆ ಕರೆದು ಕೊಂಡು ಹೋಗಿ ಬಿಡ್ತೀನಿ. ಕ— ....

ಅ— ನಾನು ಅವರನ್ನು ಶಾಲೆಗೆ ಬಿಟ್ಟು ಬಂದು ಅಡಿಗೆ ಮಾಡ್ತೀನಿ. ಕ— ....

ಅ—ಅಡಿಗೆ ಮಾಡಿ ದಿನ ಪತ್ರಿಕೆ, ವಾರಪತ್ರಿಕೆ ಓದ್ತೀನಿ. ಕ— ....

ಅಧ್ಯಾಪಕ—ಮಧ್ಯಾಹ್ನದ ಹೊತ್ತು ಏನೂ ಓದದೆ ನಿದ್ದೆ ಬರಲ್ಲ. ಕಲಿಯುವವ— ....

ಅ—ಅವರೆಲ್ಲರೂ ಬಂದಮೇಲೆ ತಿಂಡಿ ತಿಂದು ವಾಕಿಂಗ್ ಹೋಗ್ತೀವಿ. ಕ— ....

ಅ—ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡಿ ಮಲಗ್ತೀವಿ. ಕ— ....

SUBSTITUTION DRILL

1. ನಾನು ತಿಂಡಿ ತಿಂದು ಬ್ಯಾಂಕಿಗೆ ಹೋಗ್ತೀನಿ. ಕ— ....

ಅ—ಅವನು ಕ— ....

ಅ—ಕಾಫಿ ಕುಡಿದು ಕ— ....

ಅ—ಮಾರ್ಕೆಟ್ಟು ಕ— ....

ಅ—ಬರು ಕ— ....

2. ಅವನು ಕಾಫಿ ಕುಡಿಯದೆ ಬ್ಯಾಂಕಿಗೆ ಬರಲಿ. ಕ— ....

ಅ—ಅವಳು ಕ— ....

ಅ—ಪಾತ್ರೆ ತೊಳಿ ಕ— ....

ಅ—ಮನೆ ಕ— ....

ಅ—ಹೋಗು ಕ— ....

3. ನಾನು ಓದದೆ ನಿದ್ದೆ ಮಾಡಲ್ಲ. ಕ— ....

ಅ—ಬರಿ ಕ— ....

ಅಧ್ಯಾಪಕ—ಓಡು ಕಲಿಯುವವ— ....

ಅ—ಹೇಳು ಕ— ....

ಅ—ಕೇಳು ಕ— ....

ಅ—ಕೊಡು ಕ— ....

ಅ—ನೋಡು ಕ— ....

ಅ—ತಿನ್ನು ಕ— ....

ಅ—ಕದಿ ಕ— ....

ಅ—ಸುಡು ಕ— ....

ಅ—ಹರಡು ಕ— ....

ಅ—ಬಯಸು ಕ— ....

ಅ—ಗಂಟುಹಾಕು ಕ— ....

TRANSFORMATION DRILL

Transform the following into negative.

1. ಆಳು ತಟ್ಟೆ ತೊಳೆದು ಮನೆಗೆ ಹೋಗ್ತಾಳೆ. ಕ— ....
2. ನಾನು ಸ್ನಾನ ಮಾಡಿ ಬ್ಯಾಂಕಿಗೆ ಬರ್ತೀನಿ. ಕ— ....
3. ಮಳೆ ಚೆನ್ನಾಗಿ ಬಂದು ಬೆಳೆ ಬೆಳೆಯುತ್ತೆ. ಕ— ....
4. ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಪಾಸಾಗ್ತೀನಿ. ಕ— ....
5. ಜೋರಾಗಿ ಓಡಿ ಬಹುಮಾನ ಗಳಿಸ್ತೀನಿ, ಕ— ....

6. ಚಾಪೆ ನೆಯ್ದು ಹಣ ಸಂಪಾದಿಸ್ತಾರೆ. ಕ— ....

7. ಹೆಚ್ಚು ಉತ್ಪಾದಿಸಿ ಹಣಗಳಿಸ್ತಾರೆ. ಕ— ....

8. ನಾಟಿಹಸು ಸಾಕಿ ಹಾಲು ಉತ್ಪಾದಿಸ್ತಾರೆ. ಕ— ....

9. ಬಹುಮಾನಗಳನ್ನು ಹಂಚಿ ಮನೆಗೆ ಹೋಗ್ತಾರೆ. ಕ— ....

10. ಅಂಗಡಿ ಸುಟ್ಟು ನಮ್ಮ ಹತ್ತಿರ ಬರ್ತಾರೆ. ಕ— ....

BUILDUP DRILL

1. ಅವರನ್ನು ಶಾಲೆಗೆ ಬಿಟ್ಟು ಬಂದು ಮನೆಯ ಅಡಿಗೆ ಕೆಲಸ ಮಾಡ್ತೀನಿ. ಕ— ....

ಅ—ಮಾಡ್ತೀನಿ ಕ— ....

ಅ—ಕೆಲಸ ಕ— ....

ಅ—ಅಡಿಗೆ ಕ— ....

ಅ—ಮನೆಯ ಕ— ....

ಅ—ಬಿಟ್ಟು ಬಂದು ಕ— ....

ಅ—ಶಾಲೆಗೆ ಕ— ....

ಅ—ಅವರನ್ನು ಕ— ....

2. ಅ—ಅವರು ಯಾರೂ ಮುಖ ತೊಳೆಯದೆ ಕಾಫಿ ಕುಡಿಯಲ್ಲ.

ಅ—ಕುಡಿಯಲ್ಲ ಕ— ....

ಅ—ಕಾಫಿ ಕ— ....

ಅ—ತೊಳೆಯದೆ ಕ— ....

ಅ—ಮುಖ ಕ— ....

ಅ—ಯಾರೂ ಕ— ....

ಅ—ಅವರು ಕ— ....

3. ಅವರು ಪೇಪರ್ ಓದಿ ತಿಂಡಿ ತಿನ್ನಕ್ಕೆ ಅಡಿಗೆ ಮನೆಗೆ ಬರ್‍ತಾರೆ. ಕ— ....

ಅ—ಬರ್‍ತಾರೆ ಕ— ....

ಅ—ಮನೆಗೆ ಕ— ....

ಅ—ತಿಂಡಿ ತಿನ್ನಕ್ಕೆ ಕ— ....

ಅ—ಓದಿ ಕ— ....

ಅ—ಪೇಪರ್ ಕ— ....

ಅ—ಅವರು ಕ— ....

4. ನಮ್ಮ ಮನೆಯ ಯಜಮಾನರು ಎದ್ದಾದ ಮೇಲೆ ಎಲ್ಲರಿಗೂ ಕಾಫಿ ಮಾಡಿ ಕೊಡ್ತೀನೆ. ಕ— ....

ಅ—ಮಾಡಿ ಕೊಡ್ತೀನೆ

ಅ—ಕಾಫಿ ಕ— ....

ಅ—ಎಲ್ಲರಿಗೂ ಕ— ....

ಅ—ಎದ್ದಾದ ಮೇಲೆ ಕ— ....

ಅ—ಯಜಮಾನ ಕ— ....

ಅ—ಮನೆಯ ಕ— ....

ಅ—ನಮ್ಮ ಕ— ....

EXERCISES

I Use the following words in your own sentences.

1. ಏಳಿಸು
2. ಅಷ್ಟು ಹೊತ್ತಿಗೆ
3. ಯಾರೂ
4. ಒಬ್ಬೊಬ್ಬರಾಗಿ
5. ಮುಂಗಿ
6. ಆದುದರಿಂದ
7. ತಿಂಡಿ
8. ತಟ್ಟೆ ಲೋಟ
9. ತನಕ
10. ಬಿಟ್ಟು ಬಂದು
11. ಅಡಿಗೆ
12. ಸುಮಾರು
13. ಅವರೆಲ್ಲರೂ
14. ಜೊತೆ
15. ಒಟ್ಟಿಗೆ

II Change the following verbs according to the model and use them in your own sentence.

Model : ಓದು ಓದದೆ ಓದಿ

1. ಇಡು
2. ನೋಡು

3. ಮಾಡು
4 ಹಾಕು
5. ಬರಿ
6. ಬೆಳಿ
7. ಬಿಡು
8. ಕೊಡು
9. ವಿಚಾರಿಸು
10. ಕಾಯು
11. ಅನುಸರಿಸು
12. ಓಡಾಡು
13. ತಿಳಿಸು
14. ಹೇಳು
15. ಹಿಡಿ
16. ಹೊರಡು
17. ಕರಿ
18. ತರು
19. ಸೇರಿಸು
20. ಹುಡುಕು

ಇದನ್ನು ಓದಿ ಅರ್ಥ ಮಾಡಿಕೊಳ್ಳಿ

ಒಂದು ಊರಿನಲ್ಲಿ ಒಬ್ಬ ರೈತ ಇದ್ದ. ಅವನಿಗೆ ಸಾಲ ಬೇಕಾಗಿತ್ತು. ಬ್ಯಾಂಕಿಗೆ ಹೋಗಿ ಮ್ಯಾನೇಜರ್ ಅವರನ್ನು ನೋಡಿದ. ಮ್ಯಾನೇಜರ್ ಅವರನ್ನು ನೋಡಿ ಸಾಲ ಕೇಳಿದ. ಮ್ಯಾನೇಜರ್ ಅವರು ಸಾಲ ಕೋಡ್ತಿವಿ ಆದರೆ ನಮ್ಮ ಹತ್ತಿರ ಏನು ಅಡವು ಇಡ್ತೀಯ ಅಂದರು. ನನ್ನ ಹತ್ತಿರ ಎರಡು ಎಮ್ಮೆ ಇವೆ. ಅವನ್ನೇ ಅಡವು ಇಡ್ತೀನಿ ಎಂದ.

ಕೆಲವು ದಿನ ಆಯಿತು. ರೈತನು ಎಮ್ಮೆಗಳನ್ನು ಅಡವು ಇಟ್ಟು ಸಾಲ ತೆಗೆದುಕೊಂಡು ಹಳ್ಳಿಗೆ ಬಂದ. ಇನ್ನು ಕೆಲವು ದಿನ ಕಳೆಯಿತು. ಪೇಟೆಗೆ ಹೋಗಿ ಒಂದು ಲಾಟರಿ ಟಿಕೆಟ್ಟನ್ನು ಕೊಂಡುಕೊಂಡ. ಲಾಟರಿ ಎತ್ತಿ ಫಲಿತಾಂಶ ಪೇಪರ್‌ನಲ್ಲಿ ಬಂದು, ತನ್ನ ನಂಬರು ಪೇಪರ್‌ನಲ್ಲಿ ಇತ್ತು. ಅದನ್ನು ನೋಡಿ ರೈತ ಸಂತೋಷ ಪಟ್ಟ. ಈ ವಿಷಯ ಮ್ಯಾನೇಜರ್ ಅವರಿಗೆ ತಿಳಿಯಿತು. ಮ್ಯಾನೇಜರ್ ಅವರು ಹಳ್ಳಿಗೆ ಬಂದು ರೈತನನ್ನು ಹಣವನ್ನು ಬ್ಯಾಂಕಿನಲ್ಲಿ ಉಳಿಸು ಅಂದರು. ಆಗಲಿ ಉಳಿಸುತ್ತೇನೆ ಎಂದು ರೈತ ಅಂದ. ಹಾಗಾದರೆ ಒಂದು ಲಕ್ಷ ರೂಪಾಯಿ ನಾನು ಬ್ಯಾಂಕಿನಲ್ಲಿ ಇಡಕ್ಕೆ ನೀವು ಎಷ್ಟು ಎಮ್ಮೆಗಳನ್ನು ನನ್ನ ಹತ್ತಿರ ಅಡವು ಇಡ್ತೀರಿ ಎಂದು ಕೇಳಿದ.

ಪಾಠ ಇಪ್ಪತ್ತಮೂರು

ಭಾಗ ಒಂದು

ಯಾವಾಗಲೂ ಹಣ ಸಿಕ್ಕುವ ಯೋಜನೆ

ಕಮಲ—ಸಾರ್ ಯಾವಾಗಲೂ ಹಣ ಸಿಕ್ತಾ ಇರುವಂತಹ ಯೋಜನೆ ನಿಮ್ಮಲ್ಲಿ ಇದೆಯಾ ?

ಮೇನೆಜರ್—ನೋಡಿ ನಿಮ್ಮಂತಹವರಿಗಾಗಿ ಒಂದು ಹೊಸ ಯೋಜನೆ ಪ್ರಾರಂಭಿಸಿದ್ದೀವಿ. ಅದು ಒಂದು ರೀತಿಯಲ್ಲಿ ಕಾಮಧೇನು ಇದ್ದಹಾಗೆ.

ಕ—ಆ ಯೋಜನೆ ಕೆಲಸ ಮಾಡುವ ರೀತಿಯನ್ನು ಹೇಳ್ತೀರಾ ?

ಮೇ—ನೀವು ಪ್ರಾರಂಭ ಮಾಡುವ ಈ ಖಾತೆ ನಿಮ್ಮ ಹೆಸರಲ್ಲಿ ಅಥವಾ ನಿಮ್ಮ ಗಂಡನ ಹೆಸರಲ್ಲಿ, ಇಲ್ಲ ನಿಮ್ಮ ಮಕ್ಕಳ ಹೆಸರಲ್ಲಿ ಬೇಕಾದರೂ ಇರಬಹುದು.

ಕ—ಈ ಖಾತೆ ಪ್ರಾರಂಭಮಾಡಕ್ಕೆ ಯಾರು ಸಹಿ ಹಾಕಬೇಕು.

ಮೇ—ನೀವು ಪ್ರಾರಂಭ ಮಾಡುವ ಖಾತೆ ಯಾರ ಹೆಸರಲ್ಲಿ ಇರುತ್ತೋ ಅವ್ರು ಸಹಿ ಮಾಡಬೇಕು. ನೀವು ಕಟ್ಟುವ ಹಣ ಹತ್ತು ರೂಪಾಯಿ ಇರಬಹುದು, ಅಥವಾ ಹತ್ತರ ಗುಣಕಗಳಲ್ಲಿ ಎಷ್ಟಾದರೂ ಇರಬಹುದು. ನೀವು ಕಟ್ಟುವ ಹಣಕ್ಕೆ ತಕ್ಕಂತೆ ಬಡ್ಡಿ ಕೊಡ್ತೀವಿ.

ಕ—ನಾವು ಎಷ್ಟು ತಿಂಗಳು ಹಣ ಕಟ್ಟಬೇಕು.

ಮೇ—ನೀವು 93 ತಿಂಗಳು ಕಟ್ಟಬೇಕು. 93 ತಿಂಗಳ ಕಾಲ ನೀವು ಹತ್ತು ರೂಪಾಯಿ ಕಟ್ಟೀರಿ, ನೀವು ಕಟ್ಟಿದ 930 ರೂಪಾಯಿ ಅಸಲಿಗೆ ನಾವು ಕೊಡುವ ಬಡ್ಡಿ 414 ರೂಪಾಯಿ 20 ಪೈಸೆ. ನಾವು ಕೊಟ್ಟ ಬಡ್ಡಿ ಸೇರಿ ಒಟ್ಟು ಅಸಲು 1344 ರೂ 20 ಪೈಸೆ ಆಗುತ್ತೆ.

ಕ—ಅಷ್ಟೂ ಹಣವನ್ನ ವಾಪಸ್ ಕೊಡ್ತೀರಾ ?

ಮೇ—ಇದು ಹಣವನ್ನು ವಾಪಸ್ ಕೊಡುವ ಸ್ಕೀಂ ಅಲ್ಲ. ನಾವು 95ನೇ ತಿಂಗಳಿನಿಂದ ನಿಮಗೆ ತಿಂಗಳಾ ಹತ್ತು ರೂಪಾಯಿ ಕೊಡ್ತಾ ಹೋಗ್ತೀವಿ.

ಕ—ಹೀಗೆ ಎಷ್ಟು ತಿಂಗಳು ಕೊಡ್ತೀರಿ.

ಮೇ—ನೀವು 1344 ರೂ. 20 ಪೈಸೆಯನ್ನು ನಮ್ಮ ಹತ್ತಿರವೇ ಬಿಟ್ಟಿರುವ ತನಕ ಕೊಡ್ತೀವಿ.

LESSON 23

PART I

SCHEME WHERE MONEY IS ALWAYS AVAILABLE

Kamala—Sir, do you have a programme in which money will be available always ?

Manager—You see, we have started a new scheme for people like you. It is like a Kamadhenu.

K—Can you tell me as how this programme functions ?

M—The account that you start can be in your name or in your husband's name or even in your children's name.

K—Who has to sign in order to start this account ?

M—In whosoever's name you begin the account, he has to sign. The money that you pay can be in tens or any amount in the multiples of ten. We pay interest according to the sum that you deposit.

K—How many months have we to pay ?

M—You have to pay for 93 mounths you will pay rupees ten for ten months. For the principal amount of Rs 930 that you pay, we will be giving an interest of Rs 414 20. The total amount will be 1344 rupees which includes the interst that we pay.

K—Do you return all that money ?

M—This is not a scheme in which we return the money. From the 95th month onwords we will pay you ten rupees every month.

K—How many months do you give like this ?

M—As long as you leave your amount of 1344 rupees 20 paisa with us, we will give you.

ಕ—ನೀವು ಶೇಕಡ ಎಷ್ಟರ ಬಡ್ಡಿ ಕೊಟ್ಟಹಾಗಾಯಿತು.
ಮೋ—ನಿಮ್ಮ ಹಣಕ್ಕೆ ಶೇಕಡ 9ರಷ್ಟು ಕೊಟ್ಟ ಹಾಗಾಯಿತು.

ಕ—ಅಕಸ್ಮಾತ್ ನನಗೆ ವರ್ಗ ಆಗಬಹುದು, ನಾನು ಬೇರೆ ಏರಿಯಾದಲ್ಲಿ ಮನೆ ಮಾಡಬಹುದು. ಆವಾಗ ನನಗೆ ಹಣ ಕಟ್ಟಕ್ಕೆ ಆಗಲ್ಲ ಅಲ್ವಾ.
ಮೋ—ಅದಕ್ಕೇನು ಯೋಚನೆ ಮಾಡಬೇಡಿ. ನೀವು ನಮ್ಮಲ್ಲಿ ಪ್ರಾರಂಭ ಮಾಡಿದ ಖಾತೆಯನ್ನು ನಮ್ಮ ಶಾಖೆಯಿಂದ ನಿಮಗೆ ಅನುಕೂಲ ಆಗಿರುವ ಶಾಖೆಗೆ ವರ್ಗಾಯಿಸ ಬಹುದು, ಇದಕ್ಕಾಗಿ ನೀವೇ ಖುದ್ದು ಬರೆದ ಕಾಗದ ನಮ್ಮಲ್ಲಿರಬೇಕು.

ಕ—ಅಕಸ್ಮಾತ್ ನನಗೆ ಹಣ ಕಟ್ಟಕ್ಕೆ ತೊಂದರೆಯಾಗತ್ತೆ, ನಾನು ತೆರೆದ ಈ ಖಾತೆಯನ್ನು ಯಾವಾಗ ಬೇಕಾದರೂ ಮುಚ್ಚಬಹುದಾ ?
ಮೋ—ನೀವು ಯಾವಾಗ ಬೇಕಾದರು ಈ ಖಾತೆಯನ್ನು ಮುಚ್ಚಬಹುದು. ನಿಮಗೆ 93 ತಿಂಗಳಿಗಿಂತ ಮೊದಲು, ಖಾತೆಯನ್ನು ಮುಚ್ಚುವವರೆಗೆ ಕಟ್ಟಿದ ಹಣವನ್ನು ಆಗಲೇ ಕೊಡೋದು ಬಿಡೋದು ಬ್ಯಾಂಕಿನ ಇಷ್ಟ.

ಕ—ನಾನು ನನ್ನ ಖಾತೆಯನ್ನು ಮುಚ್ಚುವ ವರೆಗೆ ಕಟ್ಟಿದ ಹಣಕ್ಕೆ ಬಡ್ಡಿ ಏನಾದರು ಕೊಡ್ತೀರಾ ?
ಮೋ—ನೀವು ನಿಮ್ಮ ಖಾತೆಯನ್ನು ಮುಚ್ಚುವ ವರೆಗೆ ಕಟ್ಟಿದ ಹಣಕ್ಕೆ ಶೇಕಡ ಎರಡರಷ್ಟು ಬಡ್ಡಿ ಕೊಡ್ತೀವಿ,

ಕ—ಮತ್ತೇನಾದರೂ ಈ ಖಾತೆಯ ವಿವರ ಇದೆಯೆ ?
ಮೋ—ಇದೆ, ನಿಮ್ಮ ಖಾತೆಯಲ್ಲಿ 95 ತಿಂಗಳುಗಳ ಕಾಲ ಜಮಾ ಆಗಿರುವ ಹಣವನ್ನು 61 ತಿಂಗಳಿಗೆ ಮೊದಲು ತೆಗೆದುಕೊಳ್ಳಬೇಕು. ಅಂದರೆ ಪೂರ್ತಿಹಣ ಕೊಡ್ತಿವಿ. ತಿಂಗಳ ತಿಂಗಳ ಹಣ ಕೊಡಲ್ಲ ಅಷ್ಟೆ. ಅಷ್ಟೇ ಅಲ್ಲದೆ ನಿಮ್ಮ ಈ ಖಾತೆಯಲ್ಲಿ ಇರುವ ಹಣದಲ್ಲಿ ಶೇಕಡ 75ರಷ್ಟನ್ನು ಸಾಲವಾಗಿ ತಗೋಬಹುದು,

ಕ—ನಾನು ಸತ್ತವೇಲೆ ಈ ಹಣ ಯಾರಿಗೆ ಸಿಕ್ಕತ್ತೆ.
ಮೋ—ನೀವು ಸತ್ತ ಮೇಲೆ ಸಂಪೂರ್ಣ ಹಣ ಕಾನೂನಿನ ಪ್ರಕಾರ ಯಾರು ವಾರಸುದಾರರೊ ಅವರಿಗೆ ಸಿಕ್ಕತ್ತೆ.

ಕ—ನೀವು ಹೇಳಿರುವ ಈ ಎಲ್ಲಾ ವಿಷಯಗಳೂ ಇರುವ ಪಾಂಪ್ಲೆಟ್ ಇದೆಯಾ ?
ಮೋ—ಸೋಮು, ಇವರಿಗೆ ಪೆರೊನಿಯಲ್ ಪೆನ್‌ಶನ್ ಸ್ಕೀಂ ಬಗ್ಗೆ ವಿವರ ಇರುವ ಪುಸ್ತಕ ಕೊಡು.

ಕ—ನಾನು ಈ ಖಾತೆಯನ್ನ ಪ್ರಾರಂಭ ಮಾಡುವ ಯೋಚನೆಯಲ್ಲಿ ಇದ್ದೇನೆ ಸಾರ್, ಮುಂದಿನವಾರದಲ್ಲಿ ನಿಮ್ಮನ್ನ ಬಂದು ಭೇಟಿಯಾಗ್ತೀನೆ.
ಮೋ—ಆಗಲಿ ಬಹಳ ಸಂತೋಷ.

ಕ—ನಮಸ್ಕಾರ ಬರ್ತೀನಿ.
ಮೋ—ನಮಸ್ಕಾರ,

K—Then what would be the percent interest you would have paid?

M—We would have paid an interest of 9% on your amount.

K—I may get transfered. I may go to a house in a different area, then it would not be possible to pay the money, you see.

M—Don't worry about all that. The account that you have opened in our branch, can be transfered to a branch that is convenient for you to transact. But we should have a letter that you have written personally to this effect.

K—If it is not passible far me to pay the money, can I close the account that I have opened at any time?

M—You can close this account at any time. The payment of the money that you have paid till you close the account before 93 months is left to the discretion of the bank.

K—Do you pay interest for the money that I have paid till I close the account.

M—We will pay 2% of interst for the money that you have paid till the closure of the account.

K—Do you have some more details of this account?

M—Yes, if you want to take the money that has accumulated in your account for 94 months you should take it within 61 months. We will then give you complete money. We won, pay you monthly. Not only this, you can take a lone that is eqaivalent to 75% of the money that is in your account.

K—Who will get this money after my death?

M—After your death, the money will go to your legal heir

K—Do you have a pamphlet consisting of all that you have told me so far.

M—Somu, give him the book in which perennial pension scheme is explained.

K—I am thinking of opening this account, Sir. I will meet you next week.

M—All right.

K—Namaskaara. See you.

M—Namaskaara.

ಭಾಗ ಎರಡು

ಹರಿದ ನೋಟುಗಳನ್ನು ಬದಲಾಯಿಸಿ

ಮಾರಣ್ಣ—ಹರಿದ ನೋಟುಗಳನ್ನು ಬದಲಾಯಿಸುವ ಕೌಂಟರ್ ಇದೇನಾ ಸಾರ್ ?.

ಕ್ಯಾಷಿಯರ್—ಹೌದು, ಇದೇ ಹರಿದ ನೋಟುಗಳನ್ನು ಬದಲಾಯಿಸುವ ಕೌಂಟರ್. ನೀವು ಹರಿದ ನೋಟುಗಳನ್ನು ಬದಲಾಯಿಸಬೇಕಾ ?

ಮಾ—ಹೌದು ಸಾರ್, ನನ್ನ ಹತ್ತಿರ ತುಂಬಾ ಹರಿದ ನೋಟುಗಳು ಇವೆ. ಇವೆಲ್ಲವನ್ನು ಬದಲಾಯಿಸಬೇಕು ತಗೊಳ್ಳಿ.

ಕ್ಯಾ—ಏನ್ರಿ ಇದು, ನೀವೇನು ಹರಿದ ನೋಟುಗಳ ವ್ಯಾಪಾರ ಮಾಡ್ತೀರಾ ?

ಮಾ—ನಾವೇನು ಸಾರ್, ನೀವೂ ಹರಿದ ನೋಟಿನ ವ್ಯಾಪಾರ ತಾನೆ ಮಾಡೋದು.

ಕ್ಯಾ—ಮಾಡೋ ವ್ಯಾಪಾರ ಏನೊ ಒಂದೇ ಆದರೆ ನಾನು ಮಾಡೋ ವ್ಯಾಪಾರದ ಲಾಭ ಬ್ಯಾಂಕಿಗೆ ಸಿಕ್ಕುತ್ತೆ, ನೀವು ಮಾಡೋ ವ್ಯಾಪಾರದ ಲಾಭ ನಿಮಗೆ ಸಿಕ್ಕುತ್ತೆ.

ಮಾ—ಇವತ್ತಿನ ದಿನದಲ್ಲಿ ನೀವು ಎಲ್ಲಿಗೆ ಬೇಕಾದ್ರು ಹೋಗಿ ಸಾರ್, ಎಲ್ಲರೂ ಹರಿದ ನೋಟು ಕೊಡ್ತಾರೇ ಹೊರತು, ಹರಿಯದ ನೋಟನ್ನು ಯಾರೂ ಕೊಡಲ್ಲ. ಹರಿಯದ ನೋಟು ಕೊಡಿ ಅಂದರೆ ನಾನೇನು ಪ್ರೆಸ್ ಇಡ್ಲ ಅಂತಾರೆ. ಹೊದವಾರ ನಿಮ್ಮ ಬ್ಯಾಂಕಿನ ಕ್ಯಾಷಿಯರ್ ಅವರೇ ಹೀಗೆ ಹೇಳಿದ್ರು.

ಕ್ಯಾ—ನೀವು ಹಿಂದೆ ಯಾವಾಗ್ಲಾದರೂ ಹರಿದ ನೋಟುಗಳನ್ನು ಬದಲಾಯಿಸಿದ್ದೀರಾ ?

ಮಾ—ಇಲ್ಲ ಸಾರ್, ಇದೇ ಮೊದಲನೇ ಸಲ ನಿಮ್ಮ ಹತ್ತಿರ ಬಂದಿದ್ದೀನಿ.

ಕ್ಯಾ—ಈ ನೋಟುಗಳಲ್ಲಿ ಎರಡು ತುಂಡುಗಳು ಇರಬೇಕು. ಎರಡೂ ತುಂಡುಗಳೂ ಇರದೆ, ನಂಬರು ಸರಿಯಾಗಿ ಕಾಣದ, ಹಿಂದೆ ಮುಂದಾಗಿ ಅಂಟಿಸಿದ, ನೋಟಿನ ಮೇಲಿನ ಬರವಣಿಗೆಯನ್ನು ಓದಕ್ಕೆ ಆಗದ ನೋಟುಗಳನ್ನು ನಾವು ತಕ್ಷಣ ಬದಲಾಯಿಸಲ್ಲ.

PART 2

EXCHANGE THE TORN NOTES

Maranna—Is this the torn note exchange counter, Sir?

Cashier—Yes, this is the tron note exchange counter. Do you want to exchange the torn notes?

M—Yes Sir, I have a lot of torn notes. I have to exchange all these. please take.

C—What is this? Do you do the business of tron notes?

M—Why me, Sir? You also do the same torn note business.

C—Business is the same. But the profit of my business goes to the bank, and your profit comes to you.

M—Now a days you go to any place Sir. Everyone gives you torn notes only. No one gives you good notes. If I ask for untron notes, they ask me whether they have to start a press. Last week, your bank cashier himself told me so.

C—Had you ever exchanged torn notes earlier?

M—No Sir, this is the first time, I have come to you.

C—Both the pieces of these notes should be these. The notes whose both the pieces are not available, the notes in which the number is not properly visible, notes which are pasted upside down, note in which we con't read the letters cannot be exchanged immdiately.

ಮಾ—ಅಂತಹವನ್ನೆಲ್ಲ ನಾನು ಏನು ಮಾಡಬೇಕು ಸಾರ್.

ಕ್ಯಾ—ಅವನ್ನೂ ಎಲ್ಲ ನಮ್ಮ ಹತ್ತಿರಾನೇ ಕೊಡಿ. ತೀರ ಕೊಳೆಯಾದ ನೋಟುಗಳನ್ನು ಕೊಡಿ. ನೀವು ಕೊಟ್ಟ ನೋಟುಗಳಿಗೆ ನಾವು ರಸೀದಿ ಕೊಡ್ತೀವಿ. ಆ ಎಲ್ಲ ಕೊಳಕು ನೋಟುಗಳನ್ನು R B I ಗೆ ಕಳಿಸ್ತೀವಿ, ಅಲ್ಲಿಂದ ಉತ್ತರ ಬಂದಮೇಲೆ ಅವರ ಉತ್ತರದ ಪ್ರಕಾರ ಮಾಡ್ತೀವಿ.

ಮಾ—ನೀವು ಈಗ ಬದಲಾಯಿಸುವ ನೋಟುಗಳನ್ನು ಬದಲಾಯಿಸಿ ಹಣ ಕೊಡಿ, ಉಳಿದವನ್ನು ನನಗೆ ವಾಪಸ್ ಕೊಡಿ.

ಕ್ಯಾ—ಅವನ್ನ ತಗೊಂಡುಹೋಗಿ ನೀವು ಏನ್ ಮಾಡ್ತೀರಿ.

ಮಾ—ನನ್ನ ಹತ್ತಿರ ತಗೊಂಡ ನೋಟುಗಳನ್ನು ನೀವು ಏನ್ ಮಾಡ್ತೀರಿ ಹೇಳಿ.

ಕ್ಯಾ—ನಿಮ್ಮ ಹತ್ತಿರ ತಗೊಂಡ ನೋಟುಗಳನ್ನು R B I ಗೆ ಕಳಿಸ್ತೀವಿ, R B I ನವರು ಅವನ್ನು ಸುಡ್ತಾರೆ.

ಮಾ—ನಾನೇ ಆ ಕೆಲಸ ಮಾಡ್ತೀನಿ. ನಿಮಗೆ ಒಂದು ಗಾದೆ ಗೊತ್ತ "ಸರ್ಕಾರಕ್ಕೆ ಹೋದ ಹಣ ಸ್ಮಶಾನಕ್ಕೆ ಹೋದ ಹೆಣ" ಎರಡೂ ಒಂದೇ.

ಕ್ಯಾ—ಸರಿ ಸ್ವಾಮಿ, ನಿಮ್ಮ ಹರಿದ ನೋಟುಗಳಿಗೆ ಬದಲಾಯಿಸಿದ ನೋಟುಗಳು ಇವು ತಗೊಳ್ಳಿ.

ಮಾ—ಏನ್ ಸ್ವಾಮಿ ಇಂತಾ ನೋಟುಗಳನ್ನು ಬದಲಾಯಿಸಕ್ಕೆ ನಾನು ಯಾವ ಬ್ಯಾಂಕಿಗೆ ಹೋಗಬೇಕು,

ಕ್ಯಾ—ಅದೇನೋ R B I ಮಾಡೊ ಕೆಲಸ ನಾನೇ ಮಾಡ್ತೀನಿ ಅಂದ್ರಲ್ಲ, ಅದನ್ನೇ ಮಾಡಿ,

M—What shall I do about all those Sir ?

C—Give those also to us, and those which are soiled. We will give you receipt for the notes which you have given to us. We will send all those to R B I. We will act in accordance with the reply that we get from them.

M—Exchange the notes that you can exchange now and give me the money. Give me the remaining notes.

C—What will you do taking them ?

M—Tell me what you will do with the notes that you take from me.

C—We will send the notes that we take from you to R B I. R B I people will burn them.

M—I will do the same. Do you know the proverb ? "Money that goes to the government and the cropse that goes to the burial ground meet the same end".

C—All right, Sir. Please take these notes in exchange for your torn notes.

M—What is this, Sir ? You are givig the same type of notes. To which bank should I go to exchange these notes ?

C—You said that you will do what R B I does. Do the same.

★

DRILLS

REPETITION DRILL

ಅಧ್ಯಾಪಕ—ಯಾವಾಗಲೂ ಹಣ ಇರುವಂತಹ ಯೋಜನೆ ನಿಮ್ಮಲ್ಲಿ ಇದೆಯಾ ?

ಕಲಿಯುವವ— ....

ಅ—ಹೌದು, ಯಾವಾಗಲೂ ಹಣಸಿಕ್ಕಾ ಇರುವಂತಹ ಯೋಜನೆ ನಮ್ಮಲ್ಲಿ ಇದೆ.

ಕ— ....

ಅ—ಈ ಯೋಜನೆ ಕೆಲಸ ಮಾಡುವ ರೀತಿಯನ್ನು ಹೇಳ್ತೀರಾ ?

ಕ— ....

ಅ—ಈ ಯೋಜನೆ ಕೆಲಸ ಮಾಡುವ ರೀತಿಯನ್ನು ಹೇಳ್ತೀನಿ, ಕೇಳಿ.

ಕ— ....

ಅ—ನೀವು ಪ್ರಾರಂಭ ಮಾಡುವ ಖಾತೆ ನಿಮ್ಮ ಹೆಸರಲ್ಲಿ ಅಥವಾ ನಿಮ್ಮ ಗಂಡನ ಹೆಸರಲ್ಲಿ ಅಥವಾ ನಿಮ್ಮ ಮಕ್ಕಳ ಹೆಸರಲ್ಲಿ ಇರುತ್ತೆ.

ಕ— ....

ಅ—ನೀವು ಪ್ರಾರಂಭ ಮಾಡುವ ಖಾತೆ ಯಾರ ಹೆಸರಲ್ಲಿ ಇರುತ್ತೆ ಅವರು ಸಹಿ ಮಾಡಬೇಕು ?

ಕ— ....

ಅ—ನೀವು ಕಟ್ಟುವ ಹಣ ಹತ್ತುರೂಪಾಯಿ ಇರಬಹುದು ಅಥವಾ ಅದರ ಗುಣಕಗಳಲ್ಲಿ ಎಷ್ಟಾದರೂ ಇರಬಹುದು.

ಕ— ....

ಅ—ನೀವು ಕಟ್ಟುವ ಹಣಕ್ಕೆ ತಕ್ಕಂತೆ ಬಡ್ಡಿ ಕೊಡ್ತೀವಿ.

ಕ— ....

ಅ—ನೀವು ಕಟ್ಟಿದ್ದ 930 ರೂಪಾಯಿ ಅಸಲಿಗೆ ನಾವು ಕೊಡುವ ಬಡ್ಡಿ 414–20 ಪೈಸೆ.

ಕ— ....

ಅಧ್ಯಾಪಕ—ನಾವು ಕೊಟ್ಟ ಬಡ್ಡಿ ಸೇರಿ ಒಟ್ಟು ಅಸಲು 1344 ರೂ. 20 ಪೈಸೆ ಆಗುತ್ತೆ. ಕಲಿಯುವವ — ....

ಅ—ಅಷ್ಟೂ ಹಣವನ್ನೂ ವಾಪಸ್ ಕೊಡ್ತೀರಾ ? ಕ— ....

ಅ—ಇದು ಹಣವನ್ನೂ ವಾಪಸ್ ಕೊಡುವ ಸ್ಕೀಂ ಅಲ್ಲ. ಕ— ....

ಅ—ನಾನು ತೆರೆದ ಈ ಖಾತೆಯನ್ನು ಯಾವಾಗ ಬೇಕಾದರೂ ಮುಚ್ಚಬಹುದಾ ? ಕ— ....

ಅ—ನೀವು ಖಾತೆಯನ್ನು ಮುಚ್ಚುವವರೆಗೆ ಕಟ್ಟಿದ ಹಣವನ್ನು ಆಗಲೇ ಕೊಡೋದು ಬಿಡೋದು ಬ್ಯಾಂಕಿನ ಇಷ್ಟ. ಕ— ....

ಅ—ನಾನು ಖಾತೆಯನ್ನು ಮುಚ್ಚುವವರೆಗೆ ಕಟ್ಟಿದ ಹಣಕ್ಕೆ ಬಡ್ಡಿ ಕೊಡ್ತೀರಾ ? ಕ— ....

ಅ—ನಿಮ್ಮ ಖಾತೆಯನ್ನು ಮುಚ್ಚುವವರೆಗೆ ಕಟ್ಟಿದ ಹಣಕ್ಕೆ ಶೇಕಡ ಎರಡರಷ್ಟು ಬಡ್ಡಿ ಕೊಡ್ತೀವಿ. ಕ— ....

ಅ—ನಾನು ಸತ್ತಮೇಲೆ ಈ ಹಣ ಯಾರಿಗೆ ಸಿಕ್ಕುತ್ತೆ ? ಕ— ....

ಅ—ನೀವು ಸತ್ತಮೇಲೆ ಸಂಪೂರ್ಣ ಹಣ ಕಾನೂನಿನ ಪ್ರಕಾರ ಯಾರು ವಾರಸುದಾರರೋ ಅವರಿಗೆ ಸಿಕ್ಕುತ್ತೆ. ಕ— ....

ಅ—ನೀವು ಹೇಳಿರುವ ಎಲ್ಲ ವಿಷಯಗಳೂ ಇರುವ ಪಾಂಪ್ಲೆಟ್ ಇದೆಯಾ ? ಕ— ....

ಅ—ಹರಿದ ನೋಟುಗಳನ್ನೂ ಬದಲಾಯಿಸುವ ಕೌಂಟರ್ ಇದೇನಾ ? ಕ— ....

ಅ—ಹೌದು, ಇದೇ ಹರಿದ ನೋಟುಗಳನ್ನು ಬದಲಾಯಿಸುವ ಕೌಂಟರ್. ಕ— ....

ಅ—ನೀವೇನು ಹರಿದ ನೋಟಗಳ ವ್ಯಾಪಾರ ಮಾಡ್ತೀರಾ ? ಕ— ....

ಅ—ನಾವೇ ಏನು ಸಾರ್, ನೀವೂ ಹರಿದ ನೋಟಿನ ವ್ಯಾಪಾರ ತಾನೆ ಮಾಡೋದು. ಕ— ....

ಅ—ನಾನು ಮಾಡುವ ವ್ಯಾಪಾರದ ಲಾಭ ಬ್ಯಾಂಕಿಗೆ ಸಿಕ್ಕುತ್ತೆ. ನೀವು ಮಾಡುವ ವ್ಯಾಪಾರದ ಲಾಭ ನಿಮಗೆ ಸಿಕ್ಕುತ್ತೆ. ಕ— ....

ಅ—ಎಲ್ಲರೂ ಹರಿದ ನೋಟನ್ನು ಕೊಡ್ತಾರೇ ಹೊರತು ಹರಿಯದ ನೋಟನ್ನು ಯಾರೂ ಕೊಡಲ್ಲ ? ಕ— ....

ಅ— ಹರಿಯದ ನೋಟು ಕೊಡಿ ಅಂದರೆ ನಾನೇನು ಪ್ರೆಸ್ ಇಡ್ತಾ, ಅಂತಾರೆ. ಕ— ....

ಅ—ನಾವು ಕೊಟ್ಟ ನೋಟುಗಳಿಗೆ ನೀವು ರಸೀದಿ ಕೊಡ್ತೀರಾ ? ಕ— ....

ಅ—ಹೌದು, ನೀವು ಕೊಟ್ಟ ನೋಟುಗಳಿಗೆ ನಾವು ರಸೀದಿ ಕೊಡ್ತೀವಿ. ಕ— ....

ಅ—ಅಲ್ಲಿಂದ ಉತ್ತರ ಬಂದಮೇಲೆ ಅವರ ಉತ್ತರದಪ್ರಕಾರ ಮಾಡ್ತೀವಿ. ಕ— ....

ಅ—ನೀವು ಈಗ ಬದಲಾಯಿಸುವ ನೋಟುಗಳನ್ನು ಬದಲಾಯಿಸಿ ಹಣ ಕೊಡಿ. ಕ— ....

ಅ—ನನ್ನ ಹತ್ತಿರ ತಗೊಂಡ ನೋಟುಗಳನ್ನು ನೀವು ಏನು ಮಾಡ್ತೀರಿ ? ಕ— ....

ಅ—ನಿಮ್ಮ ಹತ್ತಿರ ತಗೊಂಡ ನೋಟುಗಳನ್ನು ನಾವು RBI ಗೆ ಕಳಿಸ್ತೀವಿ. ಕ— ....

ಅ—ಸರ್ಕಾರಕ್ಕೆ ಹೋದ ಹಣ ಸ್ಮಶಾನಕ್ಕೆ ಹೋದ ಹೆಣಎರಡೂ ಒಂದೆ. ಕ— ....

ಅಧ್ಯಾಪಕ—ನಿಮ್ಮ ಹರಿದ ನೋಟುಗಳಿಗೆ ಬದಲಾಯಿಸಿದ ನೋಟುಗಳು ಇವು. ಕಲಿಯುವವ— ....

ಅ—ಈ ಹರಿದ ನೋಟುಗಳನ್ನು ಬದಲಾಯಿಸಕ್ಕೆ ನಾನು ಯಾವ ಬ್ಯಾಂಕಿಗೆ ಹೋಗಬೇಕು ? ಕ— ....

ಅ—RBI ಮಾಡೋ ಕೆಲಸಾನ ನೀವೇ ಮಾಡ್ತೀರಾ ? ಕ— ....

SUBSTITUTION DRILL

1 ಅ—ನಿಮ್ಮಂತಹವರಿಗಾಗಿ ಒಂದು ಹೊಸ ಯೋಜನೆ ಪ್ರಾರಂಭಿಸಿದ್ದೀವಿ ? ಕ— ....

ಅ—ನಿನ್ನೆ ಕ— ....

ಅ—ಎರಡು ಕ— ....

ಅ—ಕಾರ್ಯಕ್ರಮ ಕ— ....

ಅ—ಆರಂಭ ಕ— ....

2 ಅ—ನನಗೆ ಈ ಕಾರ್ಯಕ್ರಮ ಕೆಲಸಮಾಡುವ ರೀತಿಯನ್ನು ಈಗ ಹೇಳ್ತೀರಾ ?. ಕ— ....

ಅ—ಆ ಕ— ....

ಅ—ಯೋಜನೆ ಕ— ....

ಅ—ಪ್ರಾರಂಭ ಕ— ....

ಅ—ನಾಳೆ ಕ— ....

3 ಅಧ್ಯಾಪಕ—ನೀವು ಕಟ್ಟಿದ್ದ ಒಂದು ಸಾವಿರ ರೂಪಾಯಿಗೆ ನಾವು ಕೊಡುವ ಬಡ್ಡಿ ನಾಲ್ಕುನೂರ ಹದಿನೈದು ರೂಪಾಯಿ. — ಕಲಿಯುವವ — ....

ಅ—ಅವರು — ಕ— ....

ಅ—ಕೊಡು — ಕ— ....

ಅ—ಎರಡು ಸಾವಿರ — ಕ— ....

ಅ—ಸಾಲ — ಕ— ....

ಅ—ಬ್ಯಾಂಕು — ಕ— ....

ಅ—ಆರುನೂರು — ಕ— ....

4 ಅ—ನಾನು ತೆರೆದ ಖಾತೆಯನ್ನು ಯಾವಾಗ ಬೇಕಾದರೂ ಮುಚ್ಚಬಹುದಾ ? — ಕ— ....

ಅ—ರೈತರು — ಕ— ....

ಅ—ಶಾಖೆ — ಕ— ....

ಅ—ಈಗ — ಕ— ....

5 ಅ—ನೀವು ಎಷ್ಟು ವರ್ಷಗಳಿಂದ ಹರಿದ ನೋಟು ಗಳ ವ್ಯಾಪಾರ ಮಾಡ್ತೀರಿ ? — ಕ— ....

ಅ—ಅವಳು — ಕ— ....

ಅ—ನಾಲ್ಕು — ಕ— ....

ಅ—ತಿಂಗಳು — ಕ— ....

ಅ—ಹರಿಯದ — ಕ— ....

ಅ—ಬದಲಾವಣೆ — ಕ— ....

6 ಅಧ್ಯಾಪಕ—ನಾನು ಕೊಟ್ಟ ನೋಟುಗಳಿಗೆ ಬ್ಯಾಂಕು ರಸೀದಿ ಕೊಡತ್ತಾ ? ಕ— ....

ಅ—ಅವನು ಕ— ....

ಅ—ಹಣ ಕ— ....

ಅ—ಆಫೀಸು ಕ— ....

ಅ—ಬಿಲ್ಲು ಕ— ....

7 ಅ—ನನ್ನ ಹತ್ತಿರ ತೆಗೆದುಕೊಂಡ ನೋಟುಗಳನ್ನು ನೀವು ಏನು ಮಾಡ್ತೀರಿ ? ಕ— ....

ಅ—ಅವನು ಕ— ....

ಅ—ಹಣ ಕ— ....

ಅ—ನಾನು ಕ— ....

ಅ—ಯಾರಿಗೆ ಕ— ....

ಅ—ಕೊಡು ಕ— ....

BUILD UP DRILL

1 ಅ—ಯಾವಾಗಲೂ ಹಣ ಸಿಕ್ತಾ ಇರುವಂತಹ ಯೋಜನೆ ನಿಮ್ಮಲ್ಲಿ ಇದೆಯಾ ? ಕ— ....

ಅ—ಇದೆಯಾ ಕ—

ಅ—ನಿಮ್ಮಲ್ಲಿ ಕ—

ಅ—ಯೋಜನೆ ಕ—

ಅಧ್ಯಾಪಕ—ಸಿಕ್ತಾ ಇರುವಂತಹ ಕಲಿಯುವವ— ....

ಅ—ಹಣ ಕ— ....

ಅ—ಯಾವಾಗಲೂ ಕ— ....

2 ಅ—ಈ ಖಾತೆ ಪ್ರಾರಂಭಮಾಡಕ್ಕೆ ಯಾರು ಸಹಿ ಹಾಕಬೇಕು? ಕ— ....

ಅ—ಹಾಕಬೇಕು ಕ— ....

ಅ—ಸಹಿ ಕ— ....

ಅ—ಯಾರು ಕ— ....

ಅ— ಪ್ರಾರಂಭಮಾಡಕ್ಕೆ ಕ— ....

ಅ—ಈ ಖಾತೆ ಕ— ....

3 ಅ—ನೀವು ಕಟ್ಟುವ ಹಣಕ್ಕೆ ತಕ್ಕಂತೆ ಬಡ್ಡಿ ಕೊಡ್ತೀವಿ. ಕ ....

ಅ— ಕೊಡ್ತೀವಿ ಕ— ....

ಅ—ಬಡ್ಡಿ ಕ— ....

ಅ— ತಕ್ಕಂತೆ ಕ— ....

ಅ—ಹಣಕ್ಕೆ ಕ— ....

ಅ—ಕಟ್ಟುವ ಕ— ....

ಅ—ನೀವು ಕ— ....

4 ಅ— ನಾನು ತೆರೆದ ಈ ಖಾತೆಯನ್ನು ಯಾವಾಗ ಬೇಕಾದರೂ ಮುಚ್ಚಬಹುದಾ ? ಕ— ....

ಅ—ಮುಚ್ಚಬಹುದಾ ಕ— ....

ಅಧ್ಯಾಪಕ—ಯಾವಾಗ ಬೇಕಾದರೂ	ಕಲಿಯುವವ— ....
ಅ—ಈ ಖಾತೆಯನ್ನು	ಕ— ....
ಅ—ತೆರೆದ	ಕ— ....
ಅ—ನಾನು	ಕ— ....
5 ಅ—ನಾನು ಸತ್ತಮೇಲೆ ಈ ಹಣ ಯಾರಿಗೆ ಸಿಕ್ಕತ್ತೆ ?	ಕ— ....
ಅ—ಸಿಕ್ಕತ್ತೆ	ಕ— ....
ಅ—ಯಾರಿಗೆ	ಕ— ....
ಅ—ಹಣ	ಕ— ....
ಅ—ಈ	ಕ— ....
ಅ—ಸತ್ತಮೇಲೆ	ಕ— ....
ಅ—ನಾನು	ಕ— ....
6. ಅ—ನೀವೇನು ಹರಿದ ನೋಟುಗಳ ವ್ಯಾಪಾರ ಮಾಡ್ತೀರಾ.?	ಕ— ....
ಅ—ಮಾಡ್ತೀರಾ?	ಕ— ....
ಅ—ವ್ಯಾಪಾರ	ಕ— ....
ಅ—ನೋಟುಗಳ	ಕ— ....
ಅ—ಹರಿದ	ಕ— ....
ಅ—ನೀವೇನು?	ಕ— ....

RESPONCE DRILL

ಅಧ್ಯಾಪಕ— ಯಾವಾಗಲೂ ಸಾಲ ಸಿಕ್ಕಾ ಇರುವಂತಹಯೋಜನೆ ನಿಮ್ಮಲ್ಲಿ ಇದೆಯಾ ? ಕಲಿಯುವವ—

ಅ—ನಾನು ಉಳಿತಾಯ ಖಾತೆಗೆ ಕಟ್ಟಿದ ಹಣಕ್ಕೆ ಎಷ್ಟು ಬಡ್ಡಿ ಕೊಡ್ತೀರಿ ? ಕ—

ಅ—ಹಳೆಯ ನೋಟುಗಳನ್ನು ಬದಲಾಯಿಸುವ ಕೌಂಟರ್ ಯಾವುದು ? ಕ—

ಅ—ನೀವು ನಿನ್ನೆ ನೋಡಿದ ಸಿನಿಮಾ ಚೆನ್ನಾಗಿದೆಯಾ ? ಕ—

ಅ—ನೀವು ಬ್ಯಾಂಕಿಗಾಗಿ ಆರಿಸಿದ ಜೀಪಿನ ಹೆಸರೇನು ? ಕ—

ಅ—ನಿಮ್ಮ ಬ್ಯಾಂಕಿನಿಂದ ಬೆಳೆಸಾಲ ತೆಗೆದುಕೊಂಡ ಜನರು ಯಾವ ಊರಿನವರು ? ಕ—

ಅ—ನಿಮ್ಮ ಬ್ಯಾಂಕಿನಿಂದ ಸಾಲ ತೆಗೆದುಕೊಂಡ ಜನರು ಒಳ್ಳೆಯವರಾ ? ಕ—

ಅ—ಅಲ್ಲಿ ಗಲಾಟೆ ಮಾಡುವ ಜನರನ್ನು ಹೊರಗೆ ಕಳುಹಿಸುವಿರಾ ? ಕ—

ಅ—ಆ ಕಿಟಕಿಯಲ್ಲಿ ನೋಡುವ ಮನುಷ್ಯನನ್ನು ಒಳಗೆ ಕಳುಹಿಸುವಿರಾ ? ಕ—

ಅ—ತುಂಬಾ ಅಳುವ ಗಂಡಸನ್ನು ನಂಬಬಾರದಾ ? ಕ—

EXERCISES

I Write two sentenses using every word given below.

1 ಕಾಮಧೇನು

2 ಗುಣಕ

3 ಅಸಲು

4 ಅಕಸ್ಮಾತ್

5 ಕಾನೂನು

6 ತುಂಡು

7 ವಾರಸುದಾರ

8 ಹೆಣ

9 ಸ್ಮಶಾನ

10 ಖುದ್ದು

II Combine the sentences according to the model given below.

Model ಅವಳು ಪುಸ್ತಕ ಕೊಟ್ಟಳು

ಆ ಪುಸ್ತಕ ಚೆನ್ನಾಗಿದೆ

ಅವಳು ಕೊಟ್ಟ ಪುಸ್ತಕ ಚೆನ್ನಾಗಿದೆ

1 ಪುಟ್ಟೇಗೌಡರು ಹೊಲ ಕೊಂಡು ಕೊಂಡರು

ಆ ಹೊಲ ತುಂಬಾ ಒಳ್ಳೆಯದು

2 ಬೆಳಿಗ್ಗೆ ಎಂಟು ಗಂಟೆಗೆ ಬಸ್ಸು ಹೊರಟಿತು

ಬಸ್ಸು ತುಂಬಾ ಜೋರಾಗಿ ಓಡಿತು

3 ನಾನು ನಿನ್ನೆ ಹಾಡುಗಳನ್ನೂ ಕೇಳಿದೆ

ಹಾಡುಗಳು ತುಂಬಾ ಚೆನ್ನಾಗಿದ್ದವು

4 ಆಳು ಬಟ್ಟೆಗಳನ್ನು ಬದಲಾಯಿಸಿದನು.

ಆ ಬಟ್ಟೆಗಳು ಚೆನ್ನಾಗಿವೆ

5 ಈ ಊರಿನ ವ್ಯಾಪಾರಿಗಳು ನನ್ನನ್ನು ಭೇಟಿ ಮಾಡಿದರು.

ಆ ವ್ಯಾಪಾರಿಗಳು ತುಂಬಾ ಸಾಹುಕಾರರು.

III Transform the following sentences in to negative.

1 ನಾವು ಕಟ್ಟಿದ ಹಣಕ್ಕೆ ಬಡ್ಡಿ ಕೊಡ್ತೀರಾ ?

2 ಇದು ನನ್ನ ಕೈಯ್ಯಲ್ಲಿ ಆಗುವ ಕೆಲಸ.

3 ಇದು ನೀವು ಕೊಟ್ಟ ಹಣ.

4 ಇದು ಹೆಚ್ಚಿನ ಬಡ್ಡಿಯನ್ನು ಕೊಡುವ ಸ್ಕೀಂ ಅಲ್ಲವಾ ?

5 ಎಲ್ಲರೂ ಹರಿದ ನೋಟನ್ನೇ ಕೊಡ್ತಾರೆ.

6 RBI ಮಾಡೋ ಕೆಲಸಾನ ನೀವೇ ಮಾಡ್ತೀರಾ ?

7 ನಾನು ನೋಡಿದ ಗುಮಾಸ್ತರಲ್ಲಿ ನೀವು ತುಂಬಾ ಒಳ್ಳೆಯವರು.

8 ಮ್ಯಾನೇಜರ್ ಅವರು ಕರೆದ ಹೆಸರು ಯಾವುದು ?

9 8 ಗಂಟೆಗೆ ಹೊರಡುವ ರೈಲು ಯಾವುದು ?

10 ಅಲ್ಲಿ ಆಡುವ ಹುಡುಗರಲ್ಲಿ ನಿಮ್ಮ ಹುಡುಗರೂ ಇಬ್ಬರು.

IV Write five sentences on the model ofthe sentences given below.

1 ನೀವು ಕಟ್ಟುವ ಹಣ ಹತ್ತು ರೂಪಾಯಿ ಇರಬಹುದು ಅಥವಾ ಹತ್ತರ ಗುಣಕಗಳಲ್ಲಿ ಎಷ್ಟಾದರೂ ಇರಬಹುದು.

2 ನೀವು ಈ ಶಾಖೆಯಲ್ಲಿ ಇರುವತನಕ ನಾನೂ ಈ ಶಾಖೆಯಲ್ಲಿ ಇರ್‍ತೀನಿ.

3 ನೀವು ಕಟ್ಟಿದ ಹಣವನ್ನು ಆಗಲೇ ಕೊಡೋದು ಬಿಡೋದು ಬ್ಯಾಂಕಿನ ಇಷ್ಟ.

V Fill in the blank with the appropriat form of the words given in the bracket.

1 ಆ ಬ್ಯಾಂಕು ——— ಹಣ ಬಂತಾ ? (ಕಳಿಸು)

2 ನೀವು ಚೆಕ್‌ಅನ್ನು ——— ಮೇಲೆ ಅವರಿಗೆ ಕೊಡಿ. (ಬರಿ)

3 ಅವರು ——— ಕಾಗದ ತಲುಪಿದೆಯೇ ? (ಹಾಕು)

4 ಕ್ಯಾಷಿಯರ್ ——— ನೋಟು ಚೆನ್ನಾಗಿಲ್ಲ. (ತೆಗೆದುಕೊಳ್ಳಿ)

5 ಅವರು ಮೊದಲು ——— ಮನೆ ಇದು. (ಇರು)

6 ನನ್ನ ಮಕ್ಕಳನ್ನು ——— ಶಾಲೆ ಇದೇ. (ಸೇರಿಸು)

7 ನಾನು ನಿನ್ನೆ ——— ವಿಷಯ ನಿಮಗೆ ಗೊತ್ತೇ. (ಕೇಳು)

8 ರೈತರು ——— ಬೆಳೆ ಚೆನ್ನಾಗಿದೆ. (ಬೆಳೆ)

9 ಆ ಹೋಟೆಲಿನಲ್ಲಿ ನಾವು ——— ಕಾಫಿ ಚೆನ್ನಾಗಿರುತ್ತೆ. (ಕುಡಿ)

10 ಅವರು ಹೊಸದಾಗಿ ——— ಅಂಗಡಿ ತುಂಬಾ ದೊಡ್ಡದು. (ತೆಗೆ)

ಪಾಠ ಇಪ್ಪತ್ತನಾಲ್ಕು

ಭಾಗ ಒಂದು

ಗುಡಿ ಕೈಗಾರಿಕೆ

ಫೀಲ್ಡ್ ಆಫೀಸರ್—ಇದೇನಾ ನಿಮ್ಮ ಗುಡಿ ಕೈಗಾರಿಕೆಗಳ ಕೇಂದ್ರ.

ಕೆಂಪಣ್ಣ.—ಹೌದು ಸಾರ್. ಇದೇ ನಾನು ನಡೆಸ್ತಾ ಇರುವ ಗುಡಿ ಕೈಗಾರಿಕೆಗಳ ಕೇಂದ್ರ ಇದರಿಂದಾಗಿ ಇಷ್ಟು ಜನ ಚಾಪೆ ಹಣೆಯುವವರಿಗೆ ಕಂಬಳಿ ನೇಯುವವರಿಗೆ, ಬುಟ್ಟಿ ಹಣೆಯುವವರಿಗೆ, ಊದಿನಕಡ್ಡಿ ಮಾಡುವವರಿಗೆ, ಅನುಕೂಲ ಆಯಿತು.

ಫೀ.ಆ.—ಅವರಿಗಿಂತ ಹೆಚ್ಚಾಗಿ ನಿಮಗೆ ಅನುಕೂಲ ಆಯ್ತು ಅನ್ನಿ ನಿಮ್ಮ ಕೇಂದ್ರ ಪ್ರಾರಂಭ ಮಾಡಿ ಏಳೆಂಟು ತಿಂಗಳಾಯಿತು ಅಲ್ವಾ?

ಕೆಂ.—ಮುಂದಿನ ತಿಂಗಳಿಗೆ ಒಂದು ವರ್ಷ ಆಗತ್ತೆ ಸಾರ್. ಆಗ ನಮ್ಮಲ್ಲಿ ಕೆಲಸ ಮಾಡುವವರಿಗೆ, ಒಂದು ತಿಂಗಳ ಬೋನಸ್ ಕೊಡ್ತಾ ಇದೀನಿ ಸಾರ್,

ಫೀ.ಆ.—ನಿಮ್ಮಲ್ಲಿ ಚಾಪೆ ಹಣೆಯುವವರಿಗೆ, ಚೆನ್ನಾಗಿ ಹಣೆಯಕ್ಕೆ ಬರುತ್ತಾ ?

ಕೆಂ.—ನಮ್ಮಲ್ಲಿ ಈಗ ಆರು ಜನ ಚಾಪೆ ಹಣೆಯುವವರು ಇದ್ದಾರೆ. ಅವರಲ್ಲಿ ನಾಲ್ಕು ಜನ ಒಳ್ಳೆಯ ಕೆಲಸ ಮಾಡುವವರು. ಕೆಲಸ ಕಲಿಯುವವರು ಹತ್ತು ಜನ ಇದ್ದಾರೆ.

ಫೀ.ಆ.—ಕೆಲಸ ಕಲಿಯುವರಿಗೆ ಸಂಬಳ ಕೊಡ್ತೀರಾ ?

ಕೆಂ.—ಕೆಲಸ ಕಲಿತವರಿಗೆ ಎಷ್ಟು ಕೊಡ್ತೀವೊ. ಆದರಲ್ಲಿ ಅರ್ಧ ಸಂಬಳ ಕೆಲಸ ಕಲಿಯುವವರಿಗೆ ಕೊಡ್ತೀವಿ.

ಫಿ.ಆ.—ನಿಮ್ಮ ಉತ್ಪನ್ನಗಳನ್ನ ಮಾಡುವವರು ಯಾರು ? ಅದಕ್ಕೆಲ್ಲ ಏನು ಏರ್ಪಾಡು ಮಾಡಿಕೊಂಡಿದ್ದೀರಿ ?

ಕೆಂ.—ನಮ್ಮ ಕೇಂದ್ರದ ಉತ್ಪನ್ನಗಳನ್ನು ಮಾರಾಟ ಮಾಡುವವರು ನಮ್ಮ ಹುಡುಗರೆ. ನಮ್ಮ ಕೇಂದ್ರವನ್ನು ನೋಡುವುದಕ್ಕೆ ಬಂದವರು ಕೆಲವರು ತಮಗೆ ಬೇಕಾದ್ದನ್ನು ಕೊಳ್ಳುವರು.

ಫೀ.ಆ.—ಇವನ್ನು ಮಾರಾಟ ಮಾಡುವವರು ಎಲ್ಲಿ ಮಾರಾಟ ಮಾಡ್ತಾರೆ ?

ಕೆಂ.—ನಮ್ಮ ಹುಡುಗರು ಬಸ್‌ಸ್ಟ್ಯಾಂಡಿನಲ್ಲಿ, ಸಂತೆಯಲ್ಲಿ ಇರ್‍ತಾರೆ. ಬಸ್‌ಸ್ಟ್ಯಾಂಡಿಗೆ ಬರುವ ಬಸ್ಸುಗಳಲ್ಲಿ ಹೋಗುವವರೂ, ಬರುವವರೂ ಕೊಂಡುಕೊಳ್ತಾರೆ.

LESSON 24

PART 1

COTTAGE INDUSTRY

Field Officer—Is this your cottage indursty centre ?

Kempanna—Yes, Sir. This, is the cottage industry centre that I am running. Because of this many mat weavers, blanket weavers, basket makers, makers of incense sticks, got on opening.

F.O.—More than them, you got benefitted. It is seven, eight months since your center was opened. Isn't it ?

K.—It will be one year, next month, Sir. Then I am giving one month's bonus to people working with us.

F.O.—Can your mat weavers weave well ?

K.—At present, there are six mat weavers with us. Four, among them, are good workers. There are ten members who are learning the work.

F.O.—Do you give salary to the (learners) apprentices ?

K—To the apprentices we give half of the salary that we give to the other workers.

F.O.—Who sells your products ? What arrangements have you made for that ?

K.—Our own boys sell the products of our centre. Some people who come to our centre to see also purchase whatever they like.

F.O.—Where do they sell them ?

K.—Our boys will be in the bus stand and shandy. People who travel in buses purchase them too.

ಫೀ.ಆ.— ಹೀಗೆ ಬರುವವರಿಗೆ, ಹೋಗುವವರಿಗೆ ಮಾರಾಟ ಮಾಡಿಸುವುದಕ್ಕಿಂತ ಪಟ್ಟಣದಲ್ಲಿ ನಿಮ್ಮ ಕೇಂದ್ರದ ಒಂದು ಅಂಗಡಿಯನ್ನು ಯಾಕೆ ತೆಗೆಯಬಾರದು.

ಕೆಂ.—ಇದನ್ನು ನೋಡಿಕೊಳ್ಳುವುದಕ್ಕೆ ನನಗೆ ಕಷ್ಟವಾಗಿದೆ. ಅದನ್ನು ನೋಡಿಕೊಳ್ಳುವವರು ಯಾರು? ಅದನ್ನು ನೋಡಿಕೊಳ್ಳುವುದಕ್ಕೆ ಹೋಗ್ತೀನಿ, ಆಗ ಈ ಕೇಂದ್ರವನ್ನು ನೋಡಿಕೊಳ್ಳುವವರು ಯಾರು?

ಫೀ.ಆ —ಇವೆಲ್ಲವನ್ನೂ ಮಾರಾಟ ಮಾಡುವವರಿಗೆ ಎಷ್ಟು ಸಂಬಳ ಕೊಡ್ತೀರಿ ?

ಕೆಂ.—ಮಾರಾಟ ಮಾಡುವವರಿಗೆ ಸಂಬಳ ಕೊಡಲ್ಲ. ಅವರಿಗೆ ಮಾರಾಟ ಮಾಡಿದ ಹಣದ ಮೇಲೆ ಕಮೀಷನ್ ಕೊಡ್ತೀನಿ.

ಫೀ.ಆ.—ಲಾಭಾನೂ ಚೆನ್ನಾಗಿದೆ ಅಲ್ವಾ ?

ಕೆಂ.— ಹೌದು ಸಾರ್. ಕೆಲಸ ಚೆನ್ನಾಗಿ ನಡೀತಾ ಇದೆ. ಸದ್ಯಕ್ಕೆ ಯೋಚನೆ ಏನೂ ಇಲ್ಲ.

ಫೀ.ಆ.—ಕೇವಲ ಒಂದು ವರ್ಷದಲ್ಲಿ ನಿಮ್ಮ ಕೇಂದ್ರ ಇಷ್ಟು ಮುಂದುವರೆದಿರುವುದು ನನಗೆ ತುಂಬಾ ಸಂತೋಷವಾಗುತ್ತದೆ. ನೀವು ನಿಜವಾಗಿಯೂ ಅಭಿನಂದನಾರ್ಹರು. ಅದು ಸರಿ, ನಮ್ಮ ಬ್ಯಾಂಕಿಗೆ ಕೊಡುವ ಹಣದ ಬಗ್ಗೆ ಏನು ಯೋಚಿಸಿದ್ದೀರಿ ?

ಕೆಂ.—ಇನ್ನೊಂದು ಮೂರು ನಾಲ್ಕು ತಿಂಗಳಲ್ಲಿ ನನ್ನ ಬಾಕಿ ಎಲ್ಲಾ ಚುಕ್ತಾ ಆಗತ್ತೆ. ಅದ್ದರಿಂದ ಏನೂ ಯೋಚನೆ ಇಲ್ಲ ಸಾರ್. ಅಲ್ಲದೆ "ಕೊಟ್ಟವನು ಕೋಡಂಗಿ ಈಸ್ಕೊಂಡವನು ಈರಭದ್ರ" ಅನ್ನೋಹಾಗೆ ಹೇಳಕ್ಕೆ ಬ್ಯಾಂಕಿನವರು ನೀವು ನಮ್ಮನ್ನ ಬಿಡಲ್ಲ. ನಾವು ಕೊಡ್ತೀನಿ ಆಗ ನೀವು ಜಾಮೀನಾದವನ್ನ ಹಿಡ್ಕೋತೀರಿ.

ಫೀ.ಆ.— ನಿಮಗೆ ಅಷ್ಟು ತಿಳಿಯಬೇಕು, ಅಷ್ಟು ಸಾಕು. ನಮ್ಮ ಕಷ್ಟ ಅರ್ಧ ಕಡಿಮೆ ಆಗತ್ತೆ. ನಾನಿನ್ನು ಬರ್‍ಲಾ ?

ಕೆಂ.—ಆಗಾಗ್ಗೆ ಬರ್‍ತಾ ಇರಿ ಸಾರ್. ನಮಸ್ಕಾರ

ಫೀ.ಆ.—ಆಗಲಿ ನಮಸ್ಕಾರ.

F.O.—Instead of selling to the people who travel, why shouldn't you open a shop of your centre, in the city ?

K.—It has become difficult for me to look after this itself. Who will look after that ? If I go to look after that, who will look after this centre ?

F.O.—How much salary do you give to the people who are selling these things ?

K.—I don't give any salary to the sellers. I give commission on their sales.

F.O.—There is good profit. Isn't it ?

K.—Yes, Sir. Work is going on fine. For the time being there is no worry.

F.O.—If I see the way your centre has developed, within just an year, I am very happy. You need to be congratulated. Be this as it may. What have you thought about the money that you have to give to the bank ?

K.—I will complete the arrears within 3 to 4 months. So I am not worried about it. Besides, the lender is made a fool when the borrower does'nt care to return the money. I con't say that your bank people will not allow me to do so. If we don't pay, you will catch hold of the guarantor.

F.O.—It is enough if you know that. Our trouble will be reduced by half. Shall I take leave of you ?

K.—Keep coming, Sir. Namaskaara.

F.O.—O.K, Namaskaara,

DRILLS

REPETITION DRILLS

ಅಧ್ಯಾಪಕ —ಇದೇ ನೀವು ನಡೆಸ್ತಾಇರುವ ಗುಡಿ ಕೈಗಾರಿಕೆಗಳ ಕೇಂದ್ರ. ಕಲಿಯುವವ— ....

ಅ— ಚಾಪೆ ಹೆಣೆಯುವವರಿಗೆ, ಕಂಬಳಿ ನೇಯುವವರಿಗೆ, ಬುಟ್ಟಿ ಹೆಣೆಯುವವರಿಗೆ, ಊದಿನ ಕಡ್ಡಿ ಮಾಡುವವರಿಗೆ ಅನುಕೂಲಆಯಿತು. ಕ— ....

ಅ—ನಮ್ಮಲ್ಲಿ ಕೆಲಸ ಮಾಡುವವರಿಗೆ ಒಂದು ತಿಂಗಳ ಬೋನಸ್ ಕೊಡ್ತೀವಿ. ಕ— ....

ಅ—ಕೆಲಸ ಕಲಿಯುವವರಿಗೆ ಎಷ್ಟು ಸಂಬಳ ಕೊಡ್ತೀರಿ ? ಕ— ....

ಅ—ಕೆಲಸ ಕಲಿತವರಿಗೆಎಷ್ಟು ಸಂಬಳ ಕೊಡ್ತೀವೋ ಅದರಲ್ಲಿ ಅರ್ಧ ಸಂಬಳ ಕೆಲಸ ಕಲಿಯುವವರಿಗೆ ಕೊಡ್ತೀವಿ. ಕ— ....

ಅ— ನಿಮ್ಮ ಕೇಂದ್ರದ ಉತ್ಪನ್ನಗಳನ್ನ ಮಾರಾಟ ಮಾಡುವವರು ಯಾರು ? ಕ— ....

ಅ—ಬಸ್ಸಿನಲ್ಲಿ ಬರುವವರೂ ಹೋಗುವವರೂ ಕೊಂಡುಕೊಳ್ತಾರೆ. ಕ— ....

ಅ— ಅದನ್ನ ನೋಡಿಕೊಳ್ಳುವುದಕ್ಕೆ ಹೋಗ್ತೀನಿ, ಆಗ ಈ ಕೇಂದ್ರವನ್ನು ನೋಡಿಕೊಳ್ಳುವವರು ಯಾರು ? ಕ— ....

ಅ—ನಮ್ಮ ಬ್ಯಾಂಕಿಗೆ ಕೊಡುವ ಹಣದ ಬಗ್ಗೆ ನೀವು ಏನು ಯೋಚಿಸಿದ್ದೀರಿ ? ಕ— ....

ಅ—ಕೊಟ್ಟವನೂ ಕೋಡಂಗಿ ಇಸಕೊಂಡವನು ಈರಭದ್ರ ಕ— ....

SUBSTITUTION DRILL

1 ಅಧ್ಯಾಪಕ—ಕೊಟ್ಟವನು ಕೋಡಂಗಿ ಇಸಕೊಂಡವನು ಈರಭದ್ರ ಕಲಿಯುವವ— ....

ಅ—ಬರಿ, ಓದು ಕ— ....

ಅ—ಹೇಳು, ಕೇಳು ಕ— ....

ಅ—ಹೋಗು, ಬರು ಕ— ....

ಅ—ನೋಡು, ಮಾಡು ಕ— ....

ಅ—ಆರು, ಹಾಡು ಕ— ....

ಅ—ತಿನ್ನು, ಕುಡಿ ಕ— ....

2 ಅ—ಅವರೇ ಈ ಗುಡಿಕೈಗಾರಿಕೆಗಳ ಕೇಂದ್ರದಲ್ಲಿ ಕೆಲಸ ಮಾಡುವವರು ಕ— ....

ಅ—ಅವನೇ ಕ— ....

ಅ—ಅವಳೇ ಕ— ....

ಅ—ಅದೇ ಕ— ....

ಅ—ಅವೇ ಕ— ....

3 ಅ—ಅವರೇ ಇಲ್ಲಿ ನಮ್ಮನ್ನು ವಿಚಾರಿಸಿದವರು ಕ— ....

ಅ—ಅವನೇ ಕ— ....

ಅ—ಅವಳೇ ಕ— ....

ಅ—ಅದೇ ಕ— ....

ಅ—ಅವೇ ಕ— ....

4	ಅಧ್ಯಾಪಕ—ಬ್ಯಾಂಕಿನ ಒಳಗೆ ಹೊರಗೆ ಓಡಾಡು ವವರು ಯಾರು ?	ಕಲಿಯುವವ—	....
	ಅ—ಅವಳು	ಕ—	....
	ಅ—ಅವನು	ಕ—	....
	ಅ—ಅದು	ಕ—	....
	ಅ—ಅವು	ಕ—	....
5	ಅ—ಇದೇ ನಾನು ನಡೆಸ್ತಾ ಇರುವ ಗುಡಿಕೈಗಾರಿಕೆ ಗಳು ಕೆಲವು	ಕ—	....
	ಅ—ಅದೇ	ಕ—	....
	ಅ—ಅವರು	ಕ—	....
	ಅ—ಮಾಡು	ಕ—	....
	ಅ—ನೋಡು	ಕ—	....
	ಅ—ವಿಚಾರಿಸು	ಕ—	....
	ಅ—ತರಬೇತಿ	ಕ—	....
6	ಅ—ಅಲ್ಲಿ ಹೋಗುವವರೂ ಬರುವವರೂ ಕೊಂಡುಕೊಳ್ತಾರೆ	ಕ—	....
	ಅ—ನೋಡು, ಕೇಳು	ಕ—	....
	ಅ—ಓಡು, ಆಡು	ಕ—	....
	ಅ—ಕೇಳು, ಬೆಳೆ	ಕ—	....
	ಅ—ತಿನ್ನು, ಕುಡಿ	ಕ—	....
	ಅ—ಇಡು, ಬಿಡು	ಕ—	....

ಅಧ್ಯಾಪಕ—ಆಳು, ನಗು ಕಲಿಯುವವ— ....

ಅ—ತಾಳು, ಬಾಳು ಕ— ....

ಅ—ಕಾಯು, ಕರಿ ಕ— ....

ಅ—ಹಿಡಿ, ಹೊಡೆ ಕ— ....

RESPANCE DRILLS

ಅ—ನಿಮ್ಮ ಬ್ಯಾಂಕಿನಲ್ಲಿ ಖಾತೆ ಇರುವವರು ಎಷ್ಟು ಜನ ಇದ್ದಾರೆ ? ಕ— ....

ಅ—ನಿಮ್ಮ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿರುವವರು ಯಾರು ? ಕ— ....

ಅ—ನಿಮ್ಮ ಶಾಖೆಗೆ ಮೊದಲು ಬರುವವರ ಹೆಸರು ಏನು ? ಕ— ....

ಅ—ನಿಮ್ಮ ಬ್ಯಾಂಕನ್ನು ಕಾಯುವವನ ಹೆಸರು ಏನು ? ಕ— ....

ಅ—ನಿಮ್ಮ ಮನೆಯಲ್ಲಿ ಪಾತ್ರೆ ತೊಳೆಯುವವಳ ಹೆಸರು ಏನು ? ಕ— ....

ಅ—ಆ ಜಾಗದಲ್ಲಿ ಕುಳಿತು ಕೊಳ್ಳುವವರು ನಿಮ್ಮ ಅಧಿಕಾರಿನಾ ? ಕ— ....

ಅ—ದಿನಾ ಕಾಗದ ಬರೆಯುವವರು ಯಾರಾದರೂ ಇದ್ದಾರಾ ? ಕ— ....

ಅ—ನಿಮಗೆ ನ್ನಡ ಕಲಿಸುವವರು ಯಾರು ? ಕ— ....

ಅ—ನಿಮ್ಮ ಮಾತೃಭಾಷೆ ಕಲಿಸಿದವರು ಯಾರು ? ಕ— ....

ಅಧ್ಯಾಪಕ—ಈಗ ಕರೆದವರು ನೀವೇನಾ ? ಕಲಿಯುವವ— ....

ಅ—ನಿಮ್ಮ ತಪ್ಪುಗಳನ್ನು ಕ್ಷಮಿಸುವವನು ನಾನಾ ? ಕ— ....

ಅ—ಬಡ್ಡಿಗೆ ಬಡ್ಡಿ ಸೇರಿಸುವವರು ನೀವಾ ? ಕ— ....

TRANSFORMATION DRILL

Transform the following into negative.

ಅ—ಇಲ್ಲಿ ಚಾಪೆ ಹೆಣೆಯುವವರು ಯಾರೂ ಇಲ್ಲ. ಕ— ....

ಅ—ಅವರ ಕೇಂದ್ರದಲ್ಲಿ ಕಂಬಳಿ ನೇಯುವವನು ನೀನೊಬ್ಬನೋ ? ಕ— ....

ಅ—ಊದಿನಕಡ್ಡಿ ಮಾಡುವವರಿಗೆ ಸಂಬಳ ಕೊಡ್ತಾರಾ ? ಕ— ....

ಅ—ಬಣ್ಣ ಬದಲಾಯಿಸುವವನಿಗೆ ಕಮೀಷನ್ ಕೊಡ್ತೀವಿ. ಕ— ....

ಅ—ಇಲ್ಲಿಂದ ಹೋಗುವವರಿಗೆ ಬಹುಮಾನ ಕೊಡ್ತೀವಿ. ಕ— ....

ಅ—ಚೆನ್ನಾಗಿ ನೋಡಿಕೊಳ್ಳುವವರಿಗೆ ಸಾಲ ಕೊಡ್ತೀವಿ. ಕ— ....

ಅ—ಬೇಗ ಬರುವವರನ್ನು ಕ್ಷಮಿಸ್ತೀವಿ. ಕ— ....

ಅ—ಮೊದಲೇ ಮನೆಗೆ ಹೋಗುವವರಿಗೆ ಬೋನಸ್ ಕೊಡ್ತೀವಿ. ಕ— ....

ಅಧ್ಯಾಪಕ—ನಾನು ಹೇಳುವುದನ್ನು ತಿಳಿಯುವವರು ಯಾರು ? ಕಲಿಯುವವ— ....

ಅ—ಮ್ಯಾನೇಜರ್ ಅವರ ಕಷ್ಟ ಕಡಿಮೆ ಆಗುವ ಹಾಗೇ ಮಾಡಿ. ಕ— ....

BUILDUP DRILL

1 ಅ—ನಿಮ್ಮಲ್ಲಿ ಚಾಪೆ ಹೆಣೆಯುವವರಿಗೆ ಚೆನ್ನಾಗಿ ಚಾಪೆ ಹೆಣೆಯಕ್ಕೆ ಬರುತ್ತಾ ? ಕ— ....

ಅ—ಬರುತ್ತಾ ಕ— ....

ಅ—ಹಣೆಯಕ್ಕೆ ಕ— ....

ಅ—ಚಾಪೆ ಕ— ....

ಅ—ಚೆನ್ನಾಗಿ ಕ— ....

ಅ—ಚಾಪೆ ಹೆಣೆಯುವವರಿಗೆ ಕ— ....

ಅ—ನಿಮ್ಮಲ್ಲಿ ಕ— ....

2 ಅ—ಇದನ್ನು ನೋಡಿಕೊಳ್ಳುವುದಕ್ಕೆ ಕಷ್ಟ ಆಗಿದೆ ಅದನ್ನು ನೋಡಿಕೊಳ್ಳುವವರು ಯಾರು ? ಕ— ....

ಅ—ಯಾರು ಕ— ....

ಅ—ನೋಡಿಕೊಳ್ಳುವವರು ಕ— ....

ಅ—ಅದನ್ನು ಕ— ....

ಅಧ್ಯಾಪಕ—ಕಷ್ಟ ಆಗಿದೆ ಕಲಿಯುವವ— ....

ಅ—ನೋಡಿಕೊಳ್ಳುವುದಕ್ಕೆ ಕ— ....

ಅ—ಇದನ್ನು ಕ— ....

3 ಅ—ನಾವು ಕೈಕೊಡ್ತೀವಿ ಆಗ ನೀವು ಜಾಮೀನು ಆದವನನ್ನು ಹಿಡ್ಕೋತ್ತೀರಿ ಕ— ....

ಅ—ಹಿಡ್ಕೋತ್ತೀರಿ ಕ— ....

ಅ—ಆದವನನ್ನು ಕ— ....

ಅ—ಜಾಮೀನು ಕ— ....

ಅ—ನೀವು ಕ— ....

ಅ—ಆಗ ಕ— ....

ಅ—ಕೈಕೊಡ್ತೀವಿ ಕ— ....

ಅ—ನಾವು ಕ— ....

EXERCISES

I Write ten sentences using the sentences given below as models.

1 ಕೆಲಸ ಕಲಿತವರಿಗೆ ಎಷ್ಟು ಕೊಡ್ತೀವೋ ಅದರಲ್ಲಿ ಅರ್ಧ ಸಂಬಳ ಕೆಲಸ ಕಲಿಯುವವರಿಗೆ ಕೊಡ್ತೀವಿ.

2 ಹೋಗುವವರು ಬರುವವರಿಗೆ ಮಾರುವುದಕ್ಕಿಂತ ಪಟ್ಟಣದಲ್ಲಿ ಅಂಗಡಿಯನ್ನೇಕೆ ತೆರೆಯಬಾರದು ?

3 ಅದನ್ನು ನೋಡಿಕೊಳ್ಳುವುದಕ್ಕೆ ಹೋಗಿದ್ದೆನಿ, ಆಗ ಈ ಕೇಂದ್ರವನ್ನು ನೋಡಿಕೊಳ್ಳುವವರು ಯಾರು ?

4 ಕೊಟ್ಟವನು ಕೊಡಂಗಿ ಇಸಕೊಂಡವನು ಈರಭದ್ರ.

II Complete the sentences on the basis of the model given.

1 ಕಂಬಳಿ ನೇಯುವವನು ನೇಯ್ಗಾರ (ನೇಯು)

2 ಕುರಿ ——— ಕುರುಬ (ಕಾಯು)

3 ಮಡಿಕೆ ——— ಕುಂಬಾರ (ಮಾಡು)

4 ಹೊಲ ——— ವ್ಯವಸಾಯಿ (ಉಳು)

5 ಪಾಠ ——— ಅಧ್ಯಾಪಕ (ಕಲಿಸು)

6 ಸಾಲ ——— ಸಾಲಗಾರ (ತೆಗೆದುಕೊಳ್ಳು)

7 ಸೈಕಲ್ ——— ಕಳ್ಳ (ಕದಿ)

III Complete the sentences on the basis of the model.

ಅ—ನಿನ್ನೆ ಅವರು ಸಾಲ ಕೊಟ್ಟರು

ಇವತ್ತು ಬಂದರು.

ಬಿ—ನಿನ್ನೆ ಸಾಲ ಕೊಟ್ಟವರು ಇವತ್ತು ಬಂದರು.

1 ಸಾಲದಿಂದ ಭಾವಿ ತೆಗೆದರು.

ಸಾಲ ವಾಪಸ್ ಕೊಟ್ಟರು.

2 ಅಲ್ಲಿ ಬಹಳ ಜನ ಕುಳಿತಿದ್ದಾರೆ.

ಅವರೆಲ್ಲರೂ ಬ್ಯಾಂಕಿನ ಸಾಲಗಾರರು.

3 ಎಲ್ಲ ಕಾಗದಗಳನ್ನು ಅಂಟಿಸಿದನು.

ಅನಂತರ ತಂದು ಕೊಟ್ಟನು.

4 ಅವನು ಎಲ್ಲ ನೋಟುಗಳನ್ನು ಹರಿದ,

ಅವನೇ ನನ್ನ ಮಗ.

5 ಅಲ್ಲಿ ದೊಡ್ಡ ಹುಡುಗಿ ಮಲಗಿದ್ದಾಳೆ.

ಅವಳೇ ರಾಜುವಿನ ಮಗಳು.

6 ಅವಳು ಈ ಬ್ಯಾಂಕಿನವಳು.

ಅವಳಿಗೆ ಬೇರೆ ಊರಿಗೆ ವರ್ಗವಾಯಿತು.

IV Use the following words in your own sentences.

1 ಉತ್ಪನ್ನ

2 ಕೇವಲ

3 ಅಭಿನಂದನಾರ್ಹ

4 ಚುಕ್ತಮಾಡು

5 ಲಾಭ

V Answer the following questions on the basis of the lesson.

1 ಗುಡಿ ಕೈಗಾರಿಕೆ ಕೇಂದ್ರ ಪ್ರಾರಂಭ ಆದುದರಿಂದ ಯಾರಿಗೆ ಅನುಕೂಲ ಆಯಿತು.

2 ಏಷ್ಟು ಜನ ಚಾಪೆ ಹಣೆಯುವವರಿಗೆ ಚೆನ್ನಾಗಿ ಚಾಪೆ ಹೆಣೆಯಕ್ಕೆ ಬರುತ್ತೆ.

3 ಕೆಲಸ ಕಲಿಯುವವರಿಗೆ ಎಷ್ಟು ಸಂಬಳ ಕೊಡ್ತೀರಿ ?

4 ಗುಡಿಕೈಗಾರಿಕೆ ಕೇಂದ್ರದ ಉತ್ಪನ್ನಗಳನ್ನು ಯಾರು ಎಲ್ಲಿ ಮಾರಾಟ ಮಾಡ್ತಾರೆ ?

5 ಗುಡಿಕೈಗಾರಿಕೆ ಕೇಂದ್ರದಿಂದ ಆದ ಉತ್ಪನ್ನಗಳನ್ನು ಯಾರು ಕೊಂಡುಕೊಳ್ಳುವರು ?

6 ಗುಡಿಕೈಗಾರಿಕೆ ಕೇಂದ್ರದವರು ಎಷ್ಟು ತಿಂಗಳುಗಳಲ್ಲಿ ಚುಕ್ತಮಾಡ್ತಾರೆ?

ಪಾಠ ಇಪ್ಪತ್ತೈದು

ಭಾಗ ಒಂದು

ಇವತ್ತು ಹಣ ಕಳಿಸಿದರೆ ನಾಳೆ ತಲುಪುತ್ತೆ

ಮಹಾಲಿಂಗಪ್ಪ—ನಮಸ್ಕಾರ

ಮೇನೇಜರ್—ನಮಸ್ಕಾರ ಬನ್ನಿ, ಕೂತ್ಕೊಳ್ಳಿ. ನಿಮ್ಮ ತಮ್ಮನವರನ್ನ ಆಸ್ಪತ್ರೆಗೆ ಸೇರಿಸಿದ್ದಿರಿ ಅಲ್ವಾ, ಅವರ ಆರೋಗ್ಯ ಈಗ ಹೇಗಿದೆ,

ಮ—ಅವರ ಆರೋಗ್ಯ ತುಂಬ ಬಿಗಡಾಯಿಸಿ ನಮಗೆ ಗಾಬರಿ ಮಾಡಿತು. ಆದ್ದರಿಂದ ನಾನೇ ಅವರನ್ನ ಬೆಂಗಳೂರಿಗೆ ಕರ್ಕೊಂಡು ಹೋಗಿ, ಬಿಟ್ಟು ಬಂದಿದ್ದೀನಿ.

ಮೇ—ಅಷ್ಟು ಆರೋಗ್ಯ ಕೆಟ್ಟಿತ್ತಾ.

ಮ—ಅವತ್ತು ಅವರನ್ನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸದೆ ಇದ್ದಿದ್ರೆ ಅವರ ಪ್ರಾಣಕ್ಕೆ ಕಷ್ಟ ಇತ್ತು. ಬೆಂಗಳೂರಿಗೆ ಕರೆದುಕೊಂಡು ಹೋದ್ರೆ ಏನಾದರೂ ಅನುಕೂಲ ಆಗಬಹುದು, ಅಂದರು.

ಮೇ—ಅವರಿಗೆ ಕ್ಯಾನ್ಸರ್ ಅನ್ನೋದನ್ನ ಮೊದಲೇ ಗುರುತಿಸಿದ್ದರೆ ಈ ಕಷ್ಟ ಬರ್ತಾ ಇರಲಿಲ್ಲ ಅಲ್ವಾ.

ಮ—ಅದೃಷ್ಟ ಚೆನ್ನಾಗಿದ್ರೆ ಏನೂ ಆಗಲ್ಲ ಸಾರ್. ಅದೃಷ್ಟ ಚೆನ್ನಾಗಿಲ್ಲದೆ ಇದ್ರೆ ನಾಯಿನೂ ಮೂಸಿ ನೋಡಲ್ಲ.

ಮೇ—ನನ್ನಿಂದ ಏನಾದರೂ ಸಹಾಯ ಆಗೋದಾದ್ರೆ ನಾನು ಮಾಡಕ್ಕೆ ಸದಾ ಸಿದ್ಧ ಹೇಳಿ,

ಮ—ನಾನು ಇವತ್ತು ಅರ್ಜೆಂಟಾಗಿ ಹತ್ತು ಸಾವಿರ ರೂಪಾಯಿ ನನ್ನ ತಮ್ಮನಿಗೆ ಕಳಿಸಬೇಕು. ಇವತ್ತು ನಾನು ಕಳಿಸಿದರೆ ನಾಳೆ ಅವನ ಆಪರೇಶನ್‌ಗೆ ಅನುಕೂಲ ಆಗತ್ತೆ. ನಿಮ್ಮ ಬ್ಯಾಂಕ್ ಮೂಲಕ ಕಳಿಸಕ್ಕೆ ಆಗತ್ತಾ.

ಮೇ—ಇಂಥಾ ಸಮಯದಲ್ಲಿ ನೀವೇ ಹೋದರೆ ಒಳ್ಳೆಯದಲ್ವ.

LESSON 25

PART I

IF I SENDT MONEY TODAY, WILL IT REACH TOMORROW ?

Mahalingappa—Namaskaara.

Manager—Namaskaara. Please come in, sit. You have admitted your brother to the hospital. Haven't you ? How is his health now ?

M—The deterioration of his health cauzed anxiety among us. So I took him to Bangalore myself and left him there.

M—Was his health so bad ?

M—If I had not admitted him to the Victoria Hospital, his life was in trouble. I was told that taking him to Bangalore might help.

M—If it was diagnised as cancer in the beginning itself, we would not have been in such trouble.

M—If luck is good, nothing will happen, Sir. If luck is bad even dog will not sniff at us !

M—If I can be of any help to you, I am always at your disposal. Please tell me.

M—Today I have to send ten thousand rupees urgently to my younger brother. If I send today, it will be of help for tomorrow's operation. Can it be sent through your bank ?

M—In these circumstances will it not be good if you go ?

ಮ—ಇಂಥಾ ಸಮಯದಲ್ಲಿ ನಾನು ಹೋಗದೆ ಇದ್ದರೆ ಚೆನ್ನಾಗಿರಲ್ಲ. ಆದರೆ ನನ್ನ ಮಗಳನ್ನು ಇಲ್ಲಿ ಆಸ್ಪತ್ರೆಗೆ ಸೇರಿಸಿದ್ದೀವಿ. ಇವಳನ್ನ ಸೇರಿಸದೆ ಇದ್ದಿದ್ರೆ ನಾನೇ ಹೋಗ್ತಾ ಇದ್ದೆ. ಇವತ್ತು ಯಾರಾದ್ರೂ ಬೆಂಗಳೂರಿಗೆ ಹೋಗೋದಾದ್ರೆ ಅವರ ಹತ್ತಿರ ಕಳಿಸಬಹುದಾಗಿತ್ತು.

ಮೆ—ನಿಮ್ಮ ತಮ್ಮನವರ ಕಡೆಯವರ ಅಕೌಂಟು ಇದ್ದರೆ ಇವತ್ತೇ ಕಳಿಸಕ್ಕೆ ಏರ್ಪಾಡು ಮಾಡ್ತೀನಿ.

ಮ—ಅದಕ್ಕೇನು ಯೋಚನೆ ಇಲ್ಲ. ನನ್ನ ನಾದಸೀದೇ ಅಕೌಂಟು ಇದೆ. ಬ್ಯಾಂಕಿಗೆ ಹಣ ತಲುಪಿದರೆ ಅವಳಿಗೆ ಮ್ಯಾನೇಜರ್ ಫೋನ್ ಮಾಡಿ ತಿಳಿಸ್ತಾರೆ. ನನ್ನ ನಾದಿನಿ ಹೆಸರಲ್ಲಿ ಡ್ರಾಫ್ಟ್ ಕೊಡಿ.

ಮೋ—ನೀವು ಈಗ ಡ್ರಾಫ್ಟ್ ತಗೊಂಡು ಕಳಿಸಿದರೆ ಅದು ಅವರಿಗೆ ತಲುಪಕ್ಕೆ ಕನಿಷ್ಠ ಎರಡು ದಿನ ಬೇಕು. ಎಂ. ಟಿ. ಕಳಿಸಿದರೆ ನಾಳೇನೇ ತಲುಪುತ್ತೆ.

ಮ—ಹಾಗಲ್ಲ ಸಾರ್, ತುಂಬಾ ಹಣ ಆದ್ದರಿಂದ ಯಾರಾದ್ರು ಜನರ ಕೈಲಿ ಕ್ಯಾಶ್ ಕಳಿಸುವುದಕ್ಕಿಂತ ಡ್ರಾಫ್ಟ್ ಕಳಿಸೋದು ಒಳ್ಳೆಯದು ಅಂತ ಕೇಳಿದೆ.

ಮೋ—ಈಗಾಗಲೇ ಯಾರಾದ್ರು ಹೋಗುವವರು ಇದ್ದಾರಾ.

ಮ—ನಾನೀಗ ಬಸ್‌ಸ್ಟಾಂಡ್ ಹತ್ತಿರ ಹೋದರೆ ಯಾರಾದ್ರು ಗೊತ್ತಿರೋರು ಸಿಕ್ಕಿದರೆ ಅವರ ಕೈಲಿ ಕಳಿಸ್ತೀನಿ ಸಾರ್.

ಮೋ—ನೋಡಿ ನೀವು ಈ ಪ್ರಪಂಚಾನ ನಂಬಿ ನಿಮ್ಮ ತಮ್ಮನ ಪ್ರಾಣದ ಜೊತೆ ಆಟ ಆಡೋದು ಬೇಡ, ನಾನು ಹೇಳಿದ ಹಾಗೆ ಮಾಡಿ.

ಮ—ಅವರಿಗೆ ಸಂಜೆ ಹೊತ್ತೀಗೆ ಹಣ ಸಿಕ್ಕೋಹಾಗೆ ಮಾಡಿದರೆ ನನಗೆ ತುಂಬಾ ಉಪಕಾರ ಮಾಡಿದ ಹಾಗಾಗುತ್ತೆ.

ಮೋ—ನೀವು ಎಂ. ಟಿ. ಮೂಲಕ ಈಗ ಹಣ ಕಳಿಸಿದರೆ ನಾಳೆನೇ ತಲುಪುತ್ತೆ. ಇನ್ನೂ ಬೇಗ ಆಗಬೇಕು ಅಂದ್ರೆ ಟಿ. ಟಿ. ಅಂತ ಮಾಡ್ತೀವಿ.

ಮ—ಟಿ. ಟಿ. ಅಂದ್ರೆ.

ಮೋ—ಟಿ.ಟಿ. ಅಂದ್ರೆ ಟೆಲಿಗ್ರಾಫಿಕ್ ಟ್ರಾನ್ಸ್‌ಫರ್ ಅಂತ. ನಿಮ್ಮ ನಾದಿನಿ ಅಕೌಂಟ್ ಇರುವ ಬ್ರಾಂಚ್‌ಗೆ ಟೆಲಿಗ್ರಾಂ ಮಾಡಿದರೆ ಅವರು ಇಲ್ಲಿನ ನಿಮ್ಮ ಅಕೌಂಟ್‌ನಿಂದ ನಿಮ್ಮ ನಾದಿನಿ ಅಕೌಂಟ್‌ಗೆ ಹಣ ವರ್ಗಾಯಿಸ್ತಾರೆ.

ಮ—ಟಿ. ಟಿ. ಮೂಲಕ ಹಣ ಕಳಿಸಿದರೆ ಇವತ್ತೇ ತಲುಪುತ್ತೆ ತಾನೆ.

ಮೋ—ಖಂಡಿತವಾಗಿ ಸ್ವಾಮಿ ನಾನೇನು ಸುಳ್ಳು ಹೇಳ್ತೀನಾ.

M—If I do not go in these circumstances it will not be good. But I have admitted my daughter to the hospital. If I had not admitted her, I would have gone myself. If some one was going to Bangalore today, I would have sent through them.

M—If any from your brother's side has any account. I will make arrangement to send today itself.

M—No worry about that. My sister in-law's account is there. If money reaches the bank, manager will telephone and inform her. Please give the draft in my sister-in-law's name.

M—If you get a draft and send it now it takes two days to reach them. If you send M.T., today it will reach them tomorrow itself.

M—Not that Sir, since it is quite a good amount, I thought it is better to send a draft than to send cash through them.

M—Is there anybody who can go now itself ?

M—If I go to the bus stand now, and if I find anybody known to Bangalore I will send through them.

M—See, you should't play with the life of your brother by depending upon these its. Do as I advaise you.

M—If you arrange in such a way that money reaches them by evening, you will have done a great help to me.

M—If you send through M.T. money will reach tommorrow itself. If you want it to reach still earlier we will send through what's called. T.T.

M—What is T.T. Sir ?

M—T.T. means telegraphic transfer. If we give a telegram to the branch in which your sister-in-law has the account, money will be transferred from your account here to her account there.

M—If I send money through T.T., it will reach today itself. Won't it ?

M—Certainly, Sir. Why should I lie ?

ಮಂ— ಟಿ.ಟಿ. ಮೂಲಕ ಕಳಿಸಿದರೆ ತುಂಬಾ ಹಣ ಖರ್ಚಾಗುತ್ತೇನೊ ಅಲ್ವಾ.
ಮೋ—ಅಷ್ಟೇನೂ ಖರ್ಚಾಗಲ್ಲ. ಎಂ.ಟಿ. ಗಿಂತ ಸ್ವಲ್ಪ ಜಾಸ್ತಿ ಖರ್ಚಾಗತ್ತೆ ಅಷ್ಟೇ. ಆದರೆ ಪೋಸ್ಟ್ ಆಫೀಸ್‌ನಲ್ಲಿ ಟಿ.ಎಂ.ಓ. ಕಳಿಸಕ್ಕಿಂತ ಕಡಿಮೆ ಖರ್ಚಾಗತ್ತೆ.

ಮಂ— ಹಾಗಾದರೆ ಈ ಹಣಾನ ಟಿ.ಟಿ. ಮೂಲಕ ಈಗಲೇ ಕಳಿಸಿಬಿಡಿ. ಇದೇ ನಮ್ಮ ನಾದಿನಿ ಅಕೌಂಟ್ ನಂಬರು.
ಮೋ—ಆಗಲಿ ಈಗಲೇ ಕಳಿಸ್ತೀನಿ.

ಮಂ—ನಮಸ್ಕಾರ.
ಮೋ—ನಮಸ್ಕಾರ.

M—If it's sent through T.T., it will perhaps be costly. Won't it?

M—No not much. A little more than M.T., that means it will be cheaper than sending money by T.M.O. in the post office.

M—If so, you please send this money. Now itself by T.T., This is my sister in account number.

M—All right. I will send now itself.

M—Namaskara

M—Namaskara

★

DRILLS

REPETITIO DRILL

ಅಧ್ಯಾಪಕ—ಇವತ್ತು ಹಣ ಕಳಿಸಿದರೆ ನಾಳೆ ತಲುಪುತ್ತಾ ? ಕಲಿಯುವವ— ....

ಅ—ಅದೃಷ್ಟ ಚೆನ್ನಾಗಿದ್ರೆ ಏನೂ ಆಗಲ್ಲ. ಕ— ....

ಅ—ಇವತ್ತು ನಾನು ಕಳಿಸಿದರೆ ನಾಳೆ ಅವರಿಗೆ ಅನುಕೂಲ ಆಗತ್ತೆ. ಕ— ....

ಅ—ಈ ಸಮಯದಲ್ಲಿ ನೀವೇ ಹೋದರೆ ಒಳ್ಳೆಯದಲ್ಲವಾ ? ಕ— ....

ಅ—ಇಂಥ ಸಮಯದಲ್ಲಿ ನಾನು ಹೋಗದೆ ಇದ್ದರೆ ಚೆನ್ನಾಗಿರಲ್ಲ. ಕ— ....

ಅ—ಇವಳನ್ನು ಸೇರಿಸದೇಇದ್ದರೆ ನಾನೇ ಹೋಗ್ತಾಇದ್ದೆ. ಕ— ....

ಅ—ಇವತ್ತು ಯಾರಾದರೂ ಬೆಂಗಳೂರಿಗೆ ಹೋಗದೆಇದ್ದರೆ ಅವರ ಹತ್ತಿರ ಕಳಿಸ ಬಹುದಾಗಿತ್ತು. ಕ— ....

ಅ—ಅವರ ಕಡೆಯವರದ್ದೂ ಅಕೌಂಟ್ ಇದ್ದರೆ ಇವತ್ತೇ ಕಳಿಸಕ್ಕೆ ಏರ್ಪಾಡು ಮಾಡ್ತೀನಿ. ಕ— ....

ಅ—ಬ್ಯಾಂಕಿಗೆ ಹಣ ತಲುಪಿದರೆ ಅವಳಿಗೆ ಮ್ಯಾನೇಜರ್ ಫೋನ್ ಮಾಡಿ ಹೇಳ್ತಾರೆ. ಕ— ....

ಅ—ಅವರಿಗೆ ಡ್ರಾಫ್ಟ್ ಕಳಿಸಿದರೆ ತಲುಪುತ್ತೆ. ಕ— ....

ಅ—ಸಂಜೆ ಹೊತ್ತಿಗೆ ಹಣ ಸಿಗುವ ಹಾಗೆ ಮಾಡಿದರೆ ನನಗೆ ಉಪಯೋಗ ಆಗತ್ತೆ. ಕ— ....

ಅ—ಅಲ್ಲಿಗೆ ಟೆಲಿಗ್ರಾಂ ಮಾಡಿದರೆ ನಿಮ್ಮ ಅಕೌಂಟ್ ನಿಂದ ಅವರ ಅಕೌಂಟ್‌ಗೆ ಹಣ ವರ್ಗಾಯಿಸ್ತಾರೆ. ಕ— ....

SUBSTITUTION DRILL

1 ಅಧ್ಯಾಪಕ—ನೀವು ಅದನ್ನು ಕೊಟ್ಟರೆ ನಾನು ಹೋಗ್ತೀನಿ. ಕಲಿಯುವವ – ....

ಅ—ಕೇಳು ಕ— ....

ಅ—ಹೇಳು ಕ— ....

ಅ—ಬಿಡು ಕ— ....

ಅ—ನೋಡು ಕ— ....

ಅ—ತೋರಿಸು ಕ— ....

ಅ—ವಿಚಾರಿಸು ಕ— ....

ಅ—ಕಾಯು ಕ— ....

ಅ—ಹಾಕು ಕ— ....

ಅ—ಕರಿ ಕ— ....

ಅ—ಹಿಡಿ ಕ— ....

ಅ—ತಿನ್ನು ಕ— ....

ಅ—ಕುಡಿ ಕ— ....

ಅ—ಮೂಸು ಕ— ....

ಅ—ನಡೆಸು ಕ— ....

ಅ—ತೆರೆ ಕ— ....

ಅ—ಹರಿ ಕ— ....

ಅಧ್ಯಾಪಕ—ಅಂಟಿಸು ಕಲಿಯುವವ— ....

ಅ—ತಪ್ಪಿಸು ಕ— ....

ಅ—ತೀರ್ಮಾನಿಸು ಕ— ....

2 ಅ—ಅವರ ಆರೋಗ್ಯ ತುಂಬಾ ಬಿಗಡಾಯಿಸಿದರೆ ನಮಗೆ ಗಾಬರಿ ಆಗತ್ತೆ. ಕ— ....

ಅ—ಅವಳು ಕ— ....

ಅ—ಬುದ್ಧಿ ಕ— ....

ಅ—ಚೆನ್ನಾಗಿ ಆದರೆ ಕ— ....

ಅ—ಅವರು ಕ— ....

ಅ—ಸಂತೋಷ ಕ— ....

ಅ—ಆಗಲ್ಲ ಕ— ....

3 ಅ—ಇವತ್ತು ನಾನು ಹಣ ಕಳುಹಿಸಿದರೆ ನಾಳೆ ಅವನ ಆಪರೇಶನ್‌ಗೆ ಅನುಕೂಲ ಆಗತ್ತೆ ಕ— ....

ಅ—ನಾಳೆ ಕ— ....

ಅ—ನೀವು ಕ— ....

ಅ—ಕಾಗದ ಕ— ....

ಅ—ತಲುಪಿಸು ಕ— ....

ಅ—ನಾಳಿದ್ದು ಕ— ....

ಅ—ಅವರು ಕ— ....

ಅಧ್ಯಾಪಕ—ವ್ಯಾಪಾರ ಕಲಿಯುವವ— ....

ಅ—ತೊಂದರೆ ಕ— ....

ಅ—ಆಗಲ್ಲ ಕ— ....

4 ಅ—ನಾನೀಗ ಬಸ್‌ಸ್ಟಾಂಡ್ ಹತ್ತಿರ ಹೋದರೆ ಯಾರಾದರೂ ಗೊತ್ತಿರುವವರು ಸಿಕ್ಕಿದರೆ ಅವರ ಕೈಲಿ ಹಣ ಕಳಿಸ್ತೀನಿ. ಕ— ....

ಅ—ಅವರೀಗ ಕ— ....

ಅ—ರೈಲುನಿಲ್ದಾಣ ಕ— ....

ಅ—ಜೊತೆ ಕ— ....

ಅ—ಪುಸ್ತಕ ಕ— ....

ಅ—ತಲುಪಿತು ಕ— ....

5 ಅ—ನೀವು ಈ ಪ್ರಪಂಚಾನ ನಂಬಿ ನಿಮ್ಮ ತಮ್ಮನ ಪ್ರಾಣದಜೊತೆ ಆಟ ಆಡೋದು ಬೇಡ. ಕ— ....

ಅ—ಆ ಕ— ....

ಅ—ನಂಬದೆ ಕ— ....

ಅ—ಅಣ್ಣ ಕ— ....

ಅ—ಜೀವ ಕ— ....

ಅ—ನಾಟಕ ಕ— ....

ಅ—ಕಷ್ಟ ಕ— ....

RESPONSE DRILL

ಅಧ್ಯಾಪಕ— ಹರಿದ ನೋಟು ತಂದರೆ ಬದಲಾಯಿಸ್ತೀರಾ ? ಕಲಿಯುವವ— ....

ಅ—ಜಾಮೀನು ಕೊಟ್ಟರೆ ಸಾಲ ಕೊಡ್ತೀರಾ ? ಕ— ....

ಅ—ನಾನು ಕೂದರೆ ಡ್ರಾಫ್ಟ್ ಕೊಡ್ತೀರಾ ? ಕ— ....

ಅ— ಫಾರಂ ತುಂಬಿದರೆ ಟಿ.ಟಿ. ಮಾಡ್ತೀರಾ ? ಕ— ....

ಅ—ನಾನು ಕರೆದರೆ ನಾಟಕಕ್ಕೆ ಬರ್ತೀರಾ ? ಕ— ....

ಅ— ಇಲ್ಲಿ ಕುಳಿತುಕೊಂಡರೆ ಬೈತೀರಾ ? ಕ— ....

ಅ— ಈಗ ಕಾಗದ ಹಾಕಿದರೆ ನಾಳೆ ತಲುಪುತ್ತಾ ? ಕ— ....

ಅ— ಇಲ್ಲಿ ಓಡಾಡಿದರೆ ನಿಮಗೆ ತೊಂದರೆ ಆಗುತ್ತಾ ಕ— ....

ಅ—ಈ ತಿಂಡಿ ತಿಂದರೆ ಆರೋಗ್ಯ ಕೆಡುತ್ತಾ ? ಕ— ....

ಅ— ಈ ರೈಲು 8 ಗಂಟೆಗೆ ಇಲ್ಲಿಂದ ಹೊರಟರೆ ಯಾವಾಗ ಬೆಂಗಳೂರು ತಲುಪುತ್ತೆ. ಕ— ....

ಅ—ನೀವು ಸ್ಟಾಂಪ್ ತಂದರೆ ನಾನು ಸಹಿ ಹಾಕ್ತೀನಿ. ಕ— ....

ಅ—ಇವತ್ತು ಸಾಯಂಕಾಲ ತಪ್ಪಿದರೆ ನಾಳೆ ಸಿಕ್ಕುತ್ತಾ ? ಕ— ....

ಅ —ನಿಮ್ಮನ್ನು ಬೇರೆ ಊರಿಗೆ ವರ್ಗಾಯಿಸಿದರೆ ಹೋಗ್ತೀರಾ ? ಕ— ....

ಅ—ಚಾಪೆ ಮಾರಿದರೆ ಸಾಕಷ್ಟು ಹಣ ಸಿಕ್ಕುತ್ತಾ ? ಕ— ....

ಅ—ಹಸುಗಳು ಮೇವು ಮೇಯ್ದರೆ ಒಳ್ಳೆಯದು ಕ— ....

TRANSFORMATION DRILL

Model : ನೀವು ಕಾದರೆ ಬರ್ತೀನಿ.

ನೀವು ಕಾಯದೆ ಇದ್ದರೆ ಬರಲ್ಲ

ಅಧ್ಯಾಪಕ— ಮ್ಯಾನೇಜರ್ ಬಂದರೆ ನಾನು ಹಳ್ಳಿಗೆ ಬರ್ತೀನಿ. ಕಲಿಯುವವ— ....

ಅ—ಕೇಂದ್ರ ಕಛೇರಿಯವರು ಒಪ್ಪಿದರೆ ನಿಮ್ಮ ಹಳ್ಳಿ ಆರಿಸ್ತೀವಿ. ಕ— ....

ಅ— ಹಳೆಯ ಸಾಲ ಕೊಟ್ಟರೆ ಹೊಸ ಸಾಲ ಕೊಡ್ತೀವಿ. ಕ— ....

ಅ—ಇವತ್ತು, ತಪ್ಪಿದರೆ ನಾಳೆ ಹಣ ಕೊಡ್ತೀನಿ. ಕ— ....

ಅ—ನೀವು ತಿಂಡಿ ತಿಂದರೆ ಕಾಫಿ ಕೊಡ್ತೀನಿ. ಕ— ....

ಅ—ಅವರು ಅಲ್ಲಿ ನಿಂತರೆ ನಾನು ಬರ್ತೀನಿ. ಕ— ....

ಅ—ಅದು ಬಿದ್ದರೆ ನೀನು ಓಡು. ಕ— ....

ಅ—ಸೈಕಲ್ ಕಳೆದರೆ ಪೋಲೀಸರಿಗೆ ದೂರು ಕೊಡ್ತೀನಿ. ಕ— ....

ಅ—ಹೊತ್ತಿಗೆ ಮುಂಚೆ ಎದ್ದರೆ ಕಾಫಿ ಸಿಕ್ಕುತ್ತೆ ಕ— ....

ಅ—ಇಲ್ಲಿಂದ ಅಂಗಡಿ ಸಾಮಾನು ಸಾಗಿಸಿದರೆ ದಂಡ ಕೊಡಬೇಕು ಕ— ....

ಅ—ಎಲ್ಲ ಕಳೆ ಕಿತ್ತರೆ ಬೆಳೆ ಚೆನ್ನಾಗಿ ಬರತ್ತೆ ಕ— ....

ಅ—ಹಣ್ಣು ಕೊಳೆತರೆ ಬಿಸಾಡುವೆವು. ಕ— ....

ಅ—ಕಾಳುಗಳು ಹುಳಿತರೆ ತಿನ್ನಲ್ಲ. ಕ— ....

ಅ— ಚೆನ್ನಾಗಿ ಹೊಡೆದರೆ ಮಕ್ಕಳು ಅಳ್ತಾರೆ. ಕ— ....

ಅ— ನೀವು ನಕ್ಕರೆ ನನಗೆ ಕೋಪ ಬರತ್ತೆ. ಕ— ....

EXERCISES

I Use the following words in your own sentences

1 ಆರೋಗ್ಯ

2 ಬಿಗಡಾಯಿಸು

3 ಗಾಬರಿ

4 ಪ್ರಾಣ

5 ಮುಸು

6 ಸಿಗಲಿ

7 ಮೂಲಕ

8 ಕನಿಷ್ಟ

9 ಉಪಕಾರ

10 ಜಾಸ್ತಿ

II Write five sentences on the model of the sentences given below.

1 ಅವರಿಗೆ ಕ್ಯಾನ್ಸರ್ ಅನ್ನೋದನ್ನು ಮೊದಲೇ ಗುರುತಿಸಿದ್ದರೆ ಈ ಕಷ್ಟ ಬರ್‍ತಾ ಇರಲಿಲ್ಲ.

2 ಏನಾದರೂ ಸಹಾಯ ಆಗೋದಾದ್ರೆ ನಾನು ಮಾಡಕ್ಕೆ ಸದಾ ಸಿದ್ಧ.

3 ನಿಮ್ಮ ತಮ್ಮನವರ ಕಡೆಯವರದು ಅಕೌಂಟ್ ಇದ್ದರೆ ಇವತ್ತೇ ಕಳಿಸಕ್ಕೆ ಏರ್ಪಾಡು ಮಾಡ್ತೀನಿ.

4 ಇನ್ನೂ ಬೇಗ ಆಗಬೇಕು ಅಂದ್ರೆ ಟಿ. ಟಿ. ಅಂತ ಮಾಡ್ತೀವಿ.

III Complete the sentences with the correct form of the word given in the bracket.

1 ನೀವು ಇಲ್ಲಿ ಸಹಿ ——— ಹಣ ಸಿಕ್ಕಲ್ಲ. (ಮಾಡು)

2 ಈಗ ಹಣ ——— ಮುಂದೆ ಉಪಯೋಗಕ್ಕೆ ಬರತ್ತೆ. (ಉಳಿಸು)

3 ಮಕ್ಕಳು ಖಾತೆ ——— ಡಬ್ಬಿ ಕೊಡ್ತೀವಿ. (ತೆಗಿ)

4 ಮಗು ——— ಗಾಯ ಆಗತ್ತಾ. (ಬೀಳು)

5 ಮ್ಯಾನೇಜರ್ ——— ನಿಮಗೆ ಸಾಲ ಸಿಕ್ಕತ್ತೆ. (ಒಪ್ಪು)

6 ಮುಖ್ಯಮಂತ್ರಿ ಅವರನ್ನೂ ——— ನಾನೂ ಬಲ್ಲೆ. (ಕರೆದು)

7 ಎಲ್ಲಾ ಜನರೂ ಇಲ್ಲೇ ——— ಕೆಲಸ ಆಗಲ್ಲ. (ನಿಲ್ಲು)

8 ತುಂಬಾ ——— ಕಾಲು ನೋಯುತ್ತೆ. (ನಡೆ)

9 ನೀವು ಅವರಿಗೆ ——— ಈ ಕೆಲಸ ಆಗತ್ತೆ. (ಹೇಳು)

10 ಕಾವಲುಗಾರನು ——— ನೀವು ಮನೆಗೆ ಹೋಗಿ. (ಬರು)

11 ಇವತ್ತು ಹಣ ——— ನಾಳೆ ತುಂಬ್ತೀನಿ. (ಸಿಗು)

12 ಈಗ ಬಸ್ಸು ——— ಸಮಯಕ್ಕೆ ಸರಿಯಾಗಿ ಬರಬಹುದು. (ಹಿಡಿ)

13 ಸರಿಯಾಗಿ ತೂಕ ——— ಹಣ ಕೊಡುವೆ. (ಹಾಕು)

IV Rewrite the sentences on the model of the sentence given below.

Model ಅ ಖಾತೆ ಪ್ರಾರಂಭಿಸಿದರೆ ಪಾಸ್ ಬುಕ್ ಕೊಡ್ತಿವಿ.

ವಿ ಖಾತೆ ಪ್ರಾರಂಭಿಸದೆ ಇದ್ದರೆ ಪಾಸ್ ಬುಕ್ ಕೊಡಲ್ಲ.

1 ಅವರು ಕಂಡರೆ ಇಲ್ಲಿ ಕಳಿಸ್ತೀನಿ.

2 ಖಾತೆ ನಂಬರ್ ಹುಡುಕಿದರೆ ಸಿಕ್ಕತ್ತೆ.

3 ಈ ಚೆಕ್ ಮುರಿಸಿದರೆ ಹಣ ಸಿಕ್ಕುತ್ತೆ.

4 ಬಂಗಾರವನ್ನು ಅಡವು ಇಟ್ಟರೆ ಸಾಲ ಕೊಡ್ತೀವಿ.

5 ನೀವು ತಿಳಿಸಿದರೆ ಅವರು ಸಹಾಯ ಮಾಡ್ತಾರೆ.

6 ಮ್ಯಾನೇಜರ್ ಹೋಗು ಅಂದರೆ ರೈತರು ಹೋಗ್ತಾರೆ.

7 ಹಳೆಯ ಸಾಲ ತೀರಿಸಿದರೆ ಹೊಸ ಸಾಲ ಕೊಡ್ತಾರೆ.

8 ಬೈದರೆ ಯಾವ ಕೆಲಸವೂ ಆಗತ್ತೆ.

9 ಕಾಗದ ಓದಿದರೆ ವಿಷಯ ತಿಳಿಯುತ್ತೆ.

10 ನೀವು ಸತ್ತರೆ ಹಣ ನಿಮ್ಮ ವಾರಸುದಾರರಿಗೆ ಸೇರುತ್ತಾ?

V Rewrite the sentences by combining the two sentences

1 ಕ್ಯಾಷಿಯರ್ ಅನ್ನು ಕೇಳಿ, ಅವರು ಲೆಡ್ಜರ್ ಕೊಡ್ತಾರೆ.

2 ಭಾವಿ ತೆಗೆಯಿರಿ. ಸಾಲ ಕೊಡ್ತೀವಿ.

3 ಕುರಿ ಸಾಕಿರಿ. ಬ್ಯಾಂಕಿನಿಂದ ಹಣ ಕೊಡ್ತೀವಿ.

4 ಚೆನ್ನಾಗಿ ಹೊಲ ಉಳಿರಿ. ಒಳ್ಳೆಯ ಬೆಳೆ ಬರುತ್ತೆ.

5 ಕೋಳಿಗಳು ಸಾಯಲಿ. ಜೀವವಿಮೆ ಹಣ ಸಿಕ್ಕುತ್ತೆ.

6 ಚೆನ್ನಾಗಿ ಮಳೆ ಬರಲಿ. ಒಳ್ಳೆ ಬೆಳೆ ಬರತ್ತೆ.

7 ಪ್ರವಾಸದ ವರದಿ ಸಿಗಲಿ. ಹಣ ಕೊಡೋಣ.

8 ನಿಮಗೆ ನಷ್ಟ ಆಗಲಿ. ಬ್ಯಾಂಕು ನಷ್ಟ ತುಂಬುತ್ತೆ.

9 ಜೇನು ಸಾಕಿರಿ. ತುಂಬಾ ಲಾಭ ಬರುತ್ತೆ.

10 ಪಾಸ್‌ಬುಕ್ ಬ್ಯಾಂಕಲ್ಲಿ ಮರೀತೀರಿ. ನಾನೇ ನಿಮ್ಮ ಮನೆಗೆ ತರ್‍ತೀನಿ.

ಪಾಠ ಇಪ್ಪತ್ತಾರು

ಸಾಲದ ಕಂತು ಇನ್ನೂ ಯಾಕೆ ಕಟ್ಟಿಲ್ಲ

ಸೋಮು—ಸಾರ್ ನೀವು ಹೇಳಿದವರೆಲ್ಲ ಬಂದಿದ್ದಾರೆ.
ಅಧಿಕಾರಿ— ನಿಮ್ಮ ಲಿಸ್ಟ್ ನೋಡಿ ಹೇಳಿ ನನಗೆ ಕೆಲವರು ಕಾಣ್ತಾಇಲ್ಲ.

ಸೋ—ನೋಡಿ ಸಾರ್ ಎಲ್ಲರೂ ಇಲ್ಲೇ ಕುಳಿತಿದ್ದಾರೆ.
ಅ— ಎಲ್ಲರೂ ಎಲ್ಲಿ ಬಂದಿದ್ದಾರೆ ಘನೀ ಸಾಹೇಬರೇ ಕಾಣಿಸ್ತಾಇಲ್ಲ.

ಸೋ— ನಾನು ಘನೀ ಸಾಹೇಬರ ಮನೆಗೆ ಹೋಗಿದ್ದೆ ಸಾರ್. ಇವತ್ತು ಶುಕ್ರವಾರ ಅಂತ ಅವರು ನಮಾಜ್ ಮಾಡಕ್ಕೆ ಮಸೀದಿಗೆ ಹೋಗಿದ್ರು. ಅವರ ಮಗನಿಗೆ ಹೇಳಿ ಬಂದಿದ್ದೀನಿ. ಅವರು ಮಸೀದಿಯಿಂದ ನೇರವಾಗಿ ಇಲ್ಲಿಗೆ ಬರ್ತಾರೆ.
ಅ—ಘನೀ ಸಾಹೇಬ್ರದಾಯ್ತು, ರಾಜೇಗೌಡರು ಬಂದ ಹಾಗಿಲ್ಲ.

ಸೋ—ಅವರು ನಿಮ್ಮನ್ನ ಹುಡುಕಿಕೊಂಡು ಬ್ಯಾಂಕ್ ಹತ್ತಿರಕ್ಕೆ ಹೋಗಿದ್ದಾರಂತೆ ಸಾರ್.
ಅ—ಇದು ಯಾವ ಊರಿನ ಲೆಕ್ಕಾಚಾರಾರಿ. ನಾವು ಇಲ್ಲಿಗೆ ಬಂದರೆ ಅವರು ಅಲ್ಲಿಗೆ ಹೋಗ್ತಾರೆ. ನಾವು ಅಲ್ಲೇ ಇದ್ದರೆ ಇವರು ಯಾರೂ ಆ ಕಡೆ ತಲೆಹಾಕಲ್ಲ. ಲೆಕ್ಕದ ಪಟ್ಟಿ ಎಲ್ಲಾ ಸರಿಯಾಗಿ ಹಾಕಿಕೊಂಡು ಬಂದಿದ್ದೀರಿ ತಾನೆ.

ಸೋ—ಕ್ಯಾಷಿಯರ್‌ರವರು ಎಲ್ಲಾ ಸರಿಯಾಗಿ ಬರೆದಿಟ್ಟಿದ್ದೀನಿ ತೆಗೆದುಕೊಂಡು ಹೋಗು ಅಂತ ಹೇಳಿದ್ದರು ಅದನ್ನು ಹಾಗೇ ತೆಗೆದುಕೊಂಡು ಬಂದಿದ್ದೀನಿ.
ಅ—ನೋಡೀಪ್ಪ ನೀವೆಲ್ಲ ಕಷ್ಟದಲ್ಲಿದ್ರಿ ನಿಮಗೆಲ್ಲ ಅನುಕೂಲ ಆಗ್ಲಿ ಅಂತ ನಾನು ಇಷ್ಟು ಸಾಲ ಕೊಟ್ಟೆ. ಸಾಲ ತಗೊಂಡಮೇಲೆ ನೀವ್ಯಾರೂ ಸರಿಯಾಗಿ ಕಂತು ಕಟ್ಟಿಲ್ಲ.

LESSON 26

WHY IS LOAN INSTALMENT NOT YET PAID?

Soomu—Whomever you had asked for, have come.

Officer—See your list and tell me. Some people are not to be seen.

S—See Sir, all of them are sitting here,

O—Where have all people come? Mr. Ghani Sab is not to be seen.

S—I had been to the Ghani Sab's house, Sir. Since today is Friday he had gone for prayers to Masjid. I have told his son. He will come here straight from Masjid.

O—It is all right about Ghani Sab. Raje Gowda seems has not come.

S—It is said that he has gone to the bank in search of you.

O—What is this? If we come here they will go there. If we are there none of these people will show up. Have you got the account list, properly done?

S—The cashier told me that he has written properly and advised me to take it. So I have brought as it is.

O—See, thinking that all of you are in difficulty and in order to help all of you, we gave loan as much as you asked for. After taking the loan none of you have repaid correctly.

ಕ ಖ ಗ ಘ— ನಮಗೆಲ್ಲ ಮಳೆ ಬೆಳೆ ಇಲ್ಲದೆ ತುಂಬಾ ತೊಂದರೆಯಾಗಿದೆ. ಅಲ್ಲದೆ ಇದ್ದರೆ ನಿಮ್ಮ ಹಣ ಎಂದೋ ವಾಪಸ್ ಕೊಡ್ತಿದ್ವಿ.

ಅ—ಮಳೆ ಬರ್‍ಲಿ, ಬರದೆ ಇರಲಿ, ಬೆಳೆ ಆಗ್ಲಿ, ಆಗದೆ ಇರಲಿ, ನೀವೆಲ್ಲ ಸಮಯಕ್ಕೆ ಸರಿಯಾಗಿ ಸಾಲದ ಕಂತು ಕಟ್ಟಲ್ಲ. ಕಟ್ಟದೆ ಇದ್ರೆ ಬಡ್ಡಿ ಬಡ್ಡಿಯಾಗಿ ಚಕ್ರಬಡ್ಡಿಯಾಗತ್ತೆ ಅದಕ್ಕೂ ನೀವು ಬಗ್ಲಿಲ್ಲ ಅಂದ್ರೆ ಆಸ್ತಿ ಹರಾಜು ಆಗತ್ತೆ. ಕೋರ್ಟ್‌ಗೆ ಓಡಾಡಬೇಕಾಗತ್ತೆ. ಹಾಗೆಲ್ಲ ಮಾಡ್ಕೊ ಬಾರದು ಅಂತ ನಿಮಗೆ ತಿಳಿಯಲ್ವ. ಸೋಮು 'ಕ' ಅವರ್‍ದು ಸಾಲ ಎಷ್ಟಿದೆ ನೋಡು.

ಸೋ—'ಕ' ಅವರ್‍ದು ನಾಲ್ಕು ಸಾವಿರ ರೂಪಾಯಿ ಸಾಲ ಇದೆ ಸಾರ್. ಅವರು ಎರಡು ಕಂತು ಕಟ್ಟಿದ್ದಾರೆ.

ಅ—ಯಾಕಪ್ಪ ನೀನು ಬಾವಿ ತೆಗೆಯೋಕ್ಕೆ ಸಾಲ ತಗೊಂಡಿದ್ದೆ ಅಲ್ವ.

ಕ—ಭಾವಿ ತೆಗೆಯಕ್ಕೆ ಅಂತ ಸಾಲವೇನೋ ತಗೊಂಡೆಸ್ವಾಮಿ. ಬಾವೀನೂ ತೆಗೆಸಿದ್ದೆ, ನೀರೂ ಬಂದಿತ್ತು, ಎರಡು ವರ್ಷದಿಂದ ಮಳೇನೂ ಇಲ್ಲದೆ ಬರಗಾಲ ಬಂದು ಎಲ್ಲ ಒಣಗಿ ಹೋಯ್ತು.

ಅ—ಬೇಸಿಗೆ ಬೆಳೆ ಯಾಕೆ ಬೆಳೀಬಾರದು.

ಕ—ಬೇಸಿಗೆ ಬೆಳೆ ಬೆಳೆಯೋಕ್ಕೆ ಸ್ವಲ್ಪ ನೀರಾದ್ರೂ ಬೇಕಲ್ಲ. ಮನೇಲೆಲ್ಲ ಉಪವಾಸ ವನವಾಸ ಮಾಡ್ತಾ ಇದ್ದೀವಿ ಸ್ವಾಮಿ.

ಅ—ನೀವೆಲ್ಲ ಹೀಗೆ ಹೇಳ್ತಾ ಇದ್ದರೆ ಏನ್ ಮಾಡಬೇಕು ಅಂತ ನನಗೆ ತಿಳೀತಾಇಲ್ಲ ಜಮೀನು ಹರಾಜು ಹಾಕಿಸೋಣ ಎಂದರೆ ನೀವು ಪ್ರಾಣ ಹೋಗುವ ಹಾಗೆ ಆಡ್ತೀರಿ.

ಕ—ಹರಾಜು ಗಿರಾಜು ಅಂತ ಮಾತಾಡಬೇಡಿ ಬುದ್ಧಿ. ನಾವೇನು ನಿಮ್ಮ ಹತ್ರಕ್ಕೆ ಸಾಲಕ್ಕೆ ಬಂದಿದ್ವ. ಕೊಡಿ ಅಂತ ಬೇಡಿದ್ವ. ಪ್ರೋಗ್ರೆಸ್ ತೋರ್‍ಸಕ್ಕೆ ಅಂತ ನೀವೇ ಮನೆ ಹತ್ತಿರ ಬಂದು ಬೇಡಾ ಅಂದ್ರೂ ದುಂಬಾಲು ಬಿದ್ದು ಸಾಲ ಕೊಟ್ರಿ. ನಾವು ಕೊಡೋಗಂಟ ತಡಕೊಳ್ಳಿ. ಕೊಟ್ಟಾಗ ಈಸ್‌ಕೊಳ್ರಿ.

ಅ—'ಖ' ದು ಎಷ್ಟು ಸಾಲ ಇದೆ ಸೋಮು.

ಸೋ—ಅಕ್ಕಮ್ಮಂದು ನಾಲ್ಕು ನೂರು ರೂಪಾಯಿ ಸಾಲ ಇದೆ. 20 ರೂಪಾಯಿದು ಮೂರು ಕಂತು ಕಟ್ಟಿದ್ದಾರೆ.

ಅ—ಏನಮ್ಮ 400 ರೂಪಾಯಿದು ಏನೇನು ಮಾಡಿದ್ದೀಯ.

A B C D—We are in difficulty due to improper rains and crops. Otherwise we would have returned all your money long ago.

O—Whether it rains in time or whether crops come up in time or not, you people don't pay the loan instalments in time. If you do not pay, interest will get added to interest and it will become compound interest. If you do not come round even with that, property will be auctioned. You have to go to the court. Don't you understand that you should not let things in to such a situation? Somu please see how much loan in due to X?

S—Mr. X has a loan of four thousand rupees Sir. He has paid two instalments.

O—You have taken a loan for digging the well. Isn't that, Sir?

A—Yes, Sir. I took a loan for digging the well. I dug the well also. Water had spurted out too. For two years every thing got dried up due to drought.

O—Why don't you grow the summer crops?

A—To grow summer crops we need atleast little water. All of us are starwing at home, Sir.

O—If all of you keep telling me like this, I am unable to understand as to what I should do, If I think, of auctioning the land you people behave as if you are losing your lives.

A—Sir, please don't talk in terms of auctioning. Did we came to you for loan? Did we beg you to give us loan? You wanted to show progress in your work, so you came to our house and though we asked you not to give, you gave as loan. You wait till we give and take when we give.

O—How much loan is due in her name Somu?

S—Akkamma has a loan of four hundred rupees in her name. She has paid three instalments of twenty rupees.

O—What Mrs. Akkamma? What have you done with four hundred rupees.

ಖ—ನಾನು ಮಾಡೋದಕ್ಕೆ ಏನು ಇದೆ ಸ್ವಾಮಿ ನೀವೇ ಬಟ್ಟೆ ಹೊಲಿಯೋ ಮಿಶೀನ್ ಕೊಡಿಸಿದಿರಿ ಸ್ವಾಮಿ. ಬಟ್ಟೆ ಹೊಲ್ಕೊಂಡು ಹೊಟ್ಟೆ ಹೊರೀತಾ ಇದೀನಿ ಅಷ್ಟೆ.

ಅ—ವ್ಯಾಪಾರಗೀಪಾರ ಎಲ್ಲ ಚೆನ್ನಾಗಿದೆಯೋ.

ಖ—ನಿಮಗೆ ಗೊತ್ತಲ್ವ ಸ್ವಾಮಿ. ಹಬ್ಬದ ಕಾಲಕ್ಕೆ ಜನರು ಬಟ್ಟೆ ಹೊಲಿಸ್ತಾರೆ ಹಣ ಸಿಕ್ಕುತ್ತೆ. ಉಳಿದ ಸಮಯದಲ್ಲಿ ಆದಾಯಗೀದಾಯ ಏನೂ ಇರಲ್ಲ.

ಅ—ನೀನು ಯಾಕೆ ನಾಲ್ಕನೇ ಕಂತು ಕಟ್ಟಿಲ್ಲ.

ಖ—ಹಣಕ್ಕೆ ತೊಂದರೆ ಆಯ್ತು ಸ್ವಾಮಿ. ಆದ್ದರಿಂದ ಕಟ್ಟಿಲ್ಲ. ಈಗೀಗ ವ್ಯಾಪಾರ ತುಂಬ ಕಡಿಮೆಯಾಗಿದೆ.

ಅ—ಹಬ್ಬದ ಸಮಯದಲ್ಲಿ ವ್ಯಾಪಾರ ಜಾಸ್ತಿತಾನೇ.

ಖ—ಹೌದು ಸ್ವಾಮಿ.

ಅ—ಮುಂದಿನ ಸಾರಿಯಿಂದ ಹಬ್ಬದ ಸಮಯದಲ್ಲಿ ಮೂರು ಮೂರು ಕಂತು ಒಟ್ಟಿಗೆ ಕಟ್ಟಿಬಿಡು.

ಖ—ಆಗ್ಲಿ ಸ್ವಾಮಿ ಮುಂದಿನ ಸಾರಿಯಿಂದ ಹಾಗೆ ಮಾಡ್ತೀನಿ. ನನಗೆ ಇನ್ನೊಂದು ಮೇಶೀನ್ ತಗೊಳ್ಳಕ್ಕೆ ಸಾಲ ಕೊಡ್ತೀರಾ.

ಅ—ಯಾಕಮ್ಮ.

ಖ—ನನ್ನ ಮಗಳಿಗೂ ಬಟ್ಟೆ ಹೊಲಿಯಕ್ಕೆ ಬರತ್ತೆ. ಆದಕ್ಕಾಗಿ ನಿಮ್ಮ ಹತ್ತಿರ ಸಾಲ ತಗೊಂಡು ಅವಳಿಗೂ ಒಂದು ಮೆಶಿನ್ ಕೊಡಿಸೋಣ ಅಂತ ಇದ್ದೆ.

ಅ—ಒಬ್ಬಳಿಗೆ ಸಾಕಷ್ಟು ಕೆಲಸ ಇಲ್ಲ ಅಂತೀಯ ಇನ್ನೊಬ್ಬಳಿಗೆ ಎಲ್ಲಿಂದ ತರ್ತೀಯ. ಮೊದಲು ಈ ಸಾಲ ಎಲ್ಲ ವಾಪಸ್ ಕೊಡು ಆಮೇಲೆ ನೋಡೋಣ.

ಖ—ಸರಿ ಸ್ವಾಮಿ.

ಅ—ನೋಡಿ ನಿಮ್ಮೆಲ್ಲರದೂ ಒಂದೇ ಕಥೆ ಅಂತ ಕಾಣತ್ತೆ. ಮುಂದಿನ ಸಾರಿಯಿಂದ ನಾನು ಇಲ್ಲಿಗೆ ಬರುವ ಹಾಗೆ ಮಾಡಬೇಡಿ. ಅದು ನನಗೂ ಚಂದ ಅಲ್ಲ. ಸಮಯಕ್ಕೆ ಸರಿಯಾಗಿ ನಿಮ್ಮ ಕಂತನ್ನು ಕಟ್ಟಿ ಆಸ್ತಿ ಪಾಸ್ತಿ ಹರಾಜು ಆಗದ ಹಾಗೆ ಉಳಿಸಿಕೊಳ್ಳಿ.

ಕ ಖ ಗ ಘ—ಆಗ್ಲಿ ಸ್ವಾಮಿ, ನಮಸ್ಕಾರ.

B— What can I do, Sir ? You yourself have got a tailoring machine for me. I am doing tailoring and making both ends meet.

O—How is business ?

B—As you know, Sir, during the festival people get clothes stitched. They give money. Rest of the time, there will not be any income.

O—Why have you not paid the fourth instalment ?

B—I had some pecuniary strains, Sir. So I have not paid. Nowadays business is very little.

O—During the festival season you will have a lot of business. Won't you ?

B—Yes, Sir.

O—Next time onwards during the festival season pay three instalments together.

B.—Yes, Sir. Next time onwards, I will do so. Can you give me a loan for buying another machine ?

O—Why ?

B—My daughter also knows tailoring. So I thought of getting a machine for her too.

O—You are saying that even one person doesn't have sufficient work. From where will you get work for another ? First, you return all this loan.

B—Yes, Sir.

O—Look hear ! It seems all of you have the same story. So next time onwards don't make me come here. It does'nt look nice both for me and for you. Pay the instalments in time and see that your property is not auctioned.

ABCD—Yes, Sir. Namaskara

★

EXERCISES

I Answer the following questions on the basis of the lesson.

1 ಫನೀ ಸಾಹೇಬರು ಎಲ್ಲಿಗೆ ಹೋಗಿದ್ದರು?

2 ರಾಜೇಗೌಡರು ಎಲ್ಲಿಗೆ ಹೋಗಿದ್ದಾರೆ?

3 ಹಳ್ಳಿಗರು ಸರಿಯಾಗಿ ಕಂತು ಯಾಕೆ ಕಟ್ಟಿಲ್ಲ?

4 ಸಾಲದ ಕಂತು ಸರಿಯಾಗಿ ಕಟ್ಟದೇಇದ್ದರೆ ಏನಾಗುತ್ತೆ?

5 ಅಕ್ಕಮ್ಮನದು ಎಷ್ಟು ರೂಪಾಯಿ ಸಾಲ ಇದೆ?

6 ಅಕ್ಕಮ್ಮನಿಗೆ ಬ್ಯಾಂಕಿನವರು ಏನನ್ನು ಕೊಡಿಸಿದ್ದರು?

7 ಅಕ್ಕಮ್ಮನು ಯಾಕೆ ನಾಲ್ಕನೇ ಕಂತು ಕಟ್ಟಿಲ್ಲ?

8 ಬ್ಯಾಂಕಿನ ಅಧಿಕಾರಿ ಹಳ್ಳಿಗರಿಗೆ ಏನು ಉಪದೇಶ ಮಾಡ್ತಾರೆ?

II Use the following words in your own sentences.

1 ನೇರವಾಗಿ

2 ಹುಡುಕಿಕೊಂಡು

3 ಹತ್ತಿರ

4 ಸರಿಯಾಗಿ

5 ಬರೆದಿಡು

6 ಮಳೆಬೆಳೆ

7 ಚಕ್ರಬಡ್ಡಿ

8 ಬಗ್ಗು

9 ಲೆಕ್ಕಾಚಾರ

10 ಹರಾಜು

11 ದುಂಬಾಲು ಬಿದ್ದು

12 ಹೊಟ್ಟೆಹೊರಿ

13 ಆದಾಯಗೀದಾಯ

14 ಹಬ್ಬ

15 ಮುಂದಿನ ಸಾರಿ

16 ಸಾಕಷ್ಟು

17 ಆಸ್ತಿಪಾಸ್ತಿ

18 ಉಳಿಸು

III Construct five sentences on the model of each of the sentence given below.

1 ನಾವು ಇಲ್ಲಿಗೆ ಬಂದರೆ ಅವರು ಅಲ್ಲಿಗೆ ಹೋಗ್ತಾರೆ.

2 ಅವರು "ಎಲ್ಲಾ ಸರಿಯಾಗಿ ಬರೆದಿಟ್ಟಿದ್ದೀನಿ ತೆಗೆದುಕೊಂಡು ಹೋಗು" ಅಂತ ಹೇಳಿದ್ದರು. ಅದನ್ನು ಹಾಗೇ ತೆಗೆದುಕೊಂಡು ಬಂದಿದ್ದೀನಿ.

3 ನಿಮಗೆಲ್ಲ ಅನುಕೂಲ ಆಗಲಿ ಅಂತ ನೀವು ಎಷ್ಟು ಸಾಲ ಕೇಳಿದರೂ ಅಷ್ಟು ಸಾಲ ಕೊಟ್ಟೆ

4 ಮಳೆ ಸರಿಯಾಗಿ ಬರಲಿ, ಬರದೆ ಇರಲಿ, ಬೆಳೆ ಆಗಲಿ, ಆಗದೆ ಇರಲಿ, ನೀವೆಲ್ಲ ಸಮಯಕ್ಕೆ ಸರಿಯಾಗಿ ಕಂತು ಕಟ್ಟಿಲ್ಲ.

5 ನೀವೆಲ್ಲ ಹೀಗೆ ಹೇಳ್ತಾ ಇದ್ದರೆ ಏನು ಮಾಡಬೇಕು ಅಂತ ನನಗೆ ತಿಳೀತಾನೇ ಇಲ್ಲ.

IV Following the model and its manifestations of make similar changes one word and use then in your own sentences.

Model :

1 ಕೊಡ್ತಾ ಇದ್ದೀನಿ

2 ಕೊಡ್ತಾ ಇಲ್ಲ

3 ಕೊಡ್ತಾ ಇದ್ದೆ

4 ಕೊಡ್ತಾ ಇರಲಿಲ್ಲ

5 ಕೊಟ್ಟಿದ್ದೀನಿ

6 ಕೊಟ್ಟಿಲ್ಲ

7 ಕೊಟ್ಟಿದ್ದೆ

8 ಕೊಟ್ಟಿರಲಿಲ್ಲ

9 ಕೊಡುವ

10 ಕೊಟ್ಟ

11 ಕೊಡದ

12 ಕೊಡುವವನು, ಕೊಡುವವಳು, ಕೊಡುವವರು, ಕೊಡದವನು,

13 ಕೊಟ್ಟರೆ

14 ಕೊಡದೆ ಇದ್ದರೆ

1 ಕೊಡು

2 ಬೆಳಿ

3 ಬೀಳು

4 ಕೆತು

5 ಹುಳಿ

6 ಕಲಿ

7 ತೋರಿಸು

8 ತಿನ್ನು

9 ಹೋಗು

10 ಬರು

11 ಕೇಳು

12 ಉಳು

13 ಕೀಳು

14 ಮೋಯು

15 ತೆಗಿ

16 ಮುಚ್ಚು

V Combine the sentences in negative and in affirmative.

1 ನೀವು ಕಾಗದ ಬರೀತೀರಿ

ಮ್ಯಾನೇಜರ್ ಉತ್ತರ ಬರೀತಾರೆ

2 ರಾಮನು ಬ್ಯಾಂಕ್ ಕೆಲಸ ಬಿಡ್ತಾನೆ

ಮನೆಯಲ್ಲಿಯೇ ಇರ್ತಾನೆ

3 ಈ ಊರಿನ ರೈತರು ಆ ಹೊಲದಲ್ಲಿ ಬೇಸಾಯ ಮಾಡಿದರು

ಬೆಳೆ ತುಂಬಾ ಚೆನ್ನಾಗಿ ಬಂತು

4 ಆ ರೂಮಿನಲ್ಲಿ ವಿಚಾರಿಸಿದೆ

ಆ ರೂಮಿನಲ್ಲಿ ನಿಮ್ಮ ಸ್ನೇಹಿತರು ಇಲ್ಲ

5 ಅಲ್ಲಿ ಮಕ್ಕಳು ಅಳುತ್ತಾ ಇದ್ದಾರೆ

ಅವರು ನಿಮ್ಮವರಾ

6 ಇದು ನನ್ನ ಸಹಿ

ನಾನು ಸಹಿ ಬದಲಾಯಿಸಿದೆ

7 ಅವರು ಮಂತ್ರಿಯವರ ಬಗ್ಗೆ ತಿಳಿಸಿದರು

ಅವರೇ ಇವರು

8 ಈ ಕೆಲಸಕ್ಕಾಗಿ ತುಂಬಾ ಓಡಾಡಿದಳು

ಅವಳೇ ಇವಳು

9 ನಾನು ಆಸ್ಪತ್ರೆಗೆ ತಂಗಿಯನ್ನು ಸೇರಿಸಿದೆ

ಇದೇ ಆ ಆಸ್ಪತ್ರೆ

ಪಾಠ ಇಪ್ಪತ್ತೇಳು

ಭಾಗ ಒಂದು

ಕೌಂಟರಿನಲ್ಲಿ ವ್ಯವಹಾರ ಮಾಡುತ್ತಾ ಇರುವಾಗ ಎಚ್ಚರದಿಂದ ಇರಿ

ಬೋರಣ್ಣ—ಸ್ವಾಮಿ, ಸ್ವಲ್ಪ ಇಲ್ಲಿ ಕೇಳ್ತೀರಾ ?
ಕ್ಯಾಷಿಯರ್—ಎಲ್ಲರೂ ಕ್ಯೂನಲ್ಲಿ ನಿಂತಿರುವಾಗ ನೀವು ಯಾಕೆ ಕ್ಯೂನಲ್ಲಿ ನಿಲ್ಲದೆ ಮಧ್ಯ ಮಧ್ಯ ತೊಂದರೆ ಕೊಡ್ತೀರಿ ?

ಬೋ—ಸ್ವಾಮಿ, ನನಗೆ ನಿನ್ನೆ ವ್ಯವಹಾರ ಬಾಕಿ ಇದೆ, ಅದನ್ನ ಕೇಳ್ತಾ ಇದೀನಿ.
ಕ್ಯಾ—ನಿನ್ನೆ ವ್ಯವಹಾರ ಏನು ಬಾಕಿ ಉಳಿಸಿದ್ದೀರಿ ?

ಬೋ—ನಿನ್ನೆ ನಾನು ಬ್ಯಾಂಕಿಗೆ ಬಂದಾಗ ಬ್ಯಾಂಕು ಮುಚ್ಚುವ ಸಮಯ ಆಗಿತ್ತು. ನಿಮ್ಮ ಕೌಂಟರ್‌ನಲ್ಲಿ ತುಂಬಾ ರಶ್ ಇತ್ತು.
ಕ್ಯಾ—ನಿಮ್ಮ ಹರಿಕತೆ ಎಲ್ಲಾ ಬೇಡ. ಏನು ವಿಷಯ ಹೇಳ್ರಿ.

ಬೋ—ನಿನ್ನೆ ನಾನು ಹತ್ತು ಸಾವಿರ ರೂಪಾಯಿ ತೆಗೊಂಡೆ.
ಕ್ಯಾ—ನಿನ್ನೆ ನೀವು ಹಣ ತಗೊಂಡಾಗ ಕ್ಯಾಷಲ್ಲಿ ಯಾರಿದ್ರು ?

ಬೋ—ಇದೇನ್ ಸ್ವಾಮಿ, ಹೀಗೆ ಹೇಳ್ತೀರಿ. ನಾನು ನಿನ್ನೆ ಹಣ ತೆಗೊಂಡಾಗ ನೀವೇ ಕ್ಯಾಷಲ್ಲಿ ಇದ್ರಿ. ಹತ್ತತ್ತು ರೂಪಾಯಿಡು ಹತ್ತು ಕಟ್ಟು ಕೊಟ್ರಿ. ಮನೆಗೆ ಹೋಗಿ ನಾನು ಹಣ ಎಣಿಸಿದೆ. ಎಲ್ಲಾ ಕಟ್ಟಲ್ಲೂ ಕಟ್ಟಿಗೆ ಇಪ್ಪತ್ತು ರೂಪಾಯಿನ ಹಾಗೆ ಕಡಿಮೆ ಇತ್ತು.
ಕ್ಯಾ—ನಾನು ಇಲ್ಲಿ ಹಣ ಕೊಟ್ಟಾಗ ನೀವು ಎಣಿಸಿಕೊಂಡಿರಾ ?

ಬೋ—ನೀವು ಇಲ್ಲಿ ಹಣ ಕೊಟ್ಟಾಗ ನಾನು ಹಣ ಎಣಿಸಿಕೊಳ್ಳಲಿಲ್ಲ.
ಕ್ಯಾ—ನೀವು ಕೌಂಟರ್‌ನಲ್ಲಿ ಇರುವಾಗ ಹಣ ಎಣಿಸಿಕೊಳ್ಳದೆ ಇದ್ದರೆ ಅದು ಯಾರ ತಪ್ಪು ?

LESSON 27

PART 1

BE CAREFUL WHILE TRANSACTING AT THE COUNTER

Boranna—Sir, will you please listen to me ?

Cashier—When all the people are standing in the queue. Why are you troubling us without standing in the queue.

B—Sir, a little bit of yesterday's work remains for me. I am asking about that.

C—What of yesterday's work have you retained ?

B—Yesterday when I came to the bank, it was closing time. There was heavy rush at your counter.

C—I don't want your Harikatha, tell me what the matter is ?

B—Yesterday I took ten thousand rupees.

C—Yesterday when you took money who was at the cash counter ?

B—What is this, Sir ? You are talking like this. When I took money yesterday you were at the cash counter. You gave ten bundles of ten rupee notes. I went home and counted the money. Twenty rupees were less in each bundle.

C—Did you count here when I gave the money ?

B—No, I did not count the money when you gave me here.

C—If you don't count the money when you are at the counter, whose is the **fault ?**

ಬೋ—ನೀವು ಕೊಡುವಾಗ ಕಟ್ಟು ಕೊಡದೆ ಬಿಡಿಬಿಡಿ ಕೊಟ್ಟಿದ್ರೆ, ಅದನ್ನೆಲ್ಲ ಇಲ್ಲೇ ಇರೋವಾಗ ಎಣಿಸಿಕೊಳ್ತಾ ಇದ್ದೆ. ನೀವು ಕಟ್ಟು ಕೊಟ್ಟಾಗ ಅದನ್ನು ಯಾಕೆ ಎಣಿಸಿಕೊಳ್ಳೋದು ಅಂತ ಎಣಿಸಿಕೊಳ್ಳಲಿಲ್ಲ. ಮನೆಯಲ್ಲಿ ಎಣಿಸಿದಾಗ ಇಷ್ಟೆಲ್ಲ ವ್ಯತ್ಯಾಸ ಬಂತು.

ಕ್ಯಾ—ನೀವು ಒಂದು ಸಾರಿ ಕೌಂಟರ್‌ನಿಂದ ಹೊರಗೆ ಹೋದಾಗ ಹಣದಲ್ಲಿ ಆಗುವ ವ್ಯತ್ಯಾಸಕ್ಕೆ ನಾನಾಗಲಿ, ಬ್ಯಾಂಕಾಗಲಿ, ಜವಾಬ್ದಾರಿಯಲ್ಲ.

ಬೋ—ನೀವು ಕಟ್ಟು ಕಟ್ಟುವಾಗ ಕಡಿಮೆ ಹಾಕಿ ಕಟ್ಟಿದರೆ ಅದು ಯಾರ ತಪ್ಪು ?

ಕ್ಯಾ—ನೋಡಿ, ಹಾಗೆಲ್ಲ ಕಟ್ಟು ಕಟ್ಟುವಾಗ ನಾವು ಕಡಿಮೆ ಹಾಕಿ ಕಟ್ಟಕ್ಕಾಗಲ್ಲ ಹಾಗೆಲ್ಲ. ಮಾಡಿದ್ರೆ ನಮ್ಮನ್ನು ಮನೇಗೆ ಕಳಿಸ್ತಾರೆ. ನೀವು ಕೌಂಟರ್‌ನಲ್ಲಿ ಇದ್ದಾಗ ನಿಮ್ಮ ಅಕ್ಕಪಕ್ಕ ಬೇರೆ ಯಾರಾದ್ರೂ ಜನ ಇದ್ರು ?

ಬೋ—ನಿಮಗೆ ಆಗಲೇ ಹೇಳಿದೆ ಅಲ್ವಾ ಸಾರ್ ತುಂಬಾ ರಶ್ ಇತ್ತು ಅಂತ.

ಕ್ಯಾ—ನೀವು ಅತ್ತ ಇತ್ತ ನೋಡುವಾಗ ಯಾರಾದರು ಕಟ್ಟಿಗೆ ಎರಡರ ಹಾಗೆ ಎಳೆದುಕೊಂಡಿರಬೇಕು. ನಾವೇನು ಮಾಡಕ್ಕಾಗಲ್ಲ.

ಬೋ—ನಾನು ನಿಮ್ಮ ಹೆಡ್ ಆಫೀಸಿಗೆ ಕಂಪ್ಲೇಂಟ್ ಬರೀತೀನಿ. ಬರೆಯುವಾಗ ನೀವು ಮೋಸ ಮಾಡ್ತೀರಿ ಅಂತ ಬರೀತೀನಿ.

ಕ್ಯಾ—ಸ್ವಾಮಿ, ದಯವಿಟ್ಟು ಸುಮ್ನೆ ಗಲಾಟೆ ಮಾಡಬೇಡಿ. ನಿಮ್ಮದೇನಿದ್ರೂ ಮ್ಯಾನೇಜರ್ ಹತ್ತಿರ ಮಾತಾಡಿ.

B—When you gave money, instead of giving bundles, if you had given loose notes, I would have counted when I was here. When you gave the bundles, I thought, why I should count and I did not count. When I counted this at the home, all this difference was found.

C—Once you go out of the counter neither the bank is nor I am responsible for the difference in the cash.

B—While making the bundles if you do it with less money whose fault is that?

C—You see, while making bundles we can't have less amount. If we do so we will be sent home. When you were at the counter were there any others by your side?

B—I already told you, Sir. There was heavy rush.

C—When you were looking here and there, some one must have pulled two from each bundle. We can't do anything about it.

B—I will write a complaint to your head office. When I write I will say that you are cheating.

C—Sir, please don't disturb us here, unnecessarily. What ever grouse you have, you go and talk to the manager.

ಭಾಗ ಎರಡು

ಮರು ಪರಿಶೀಲನೆಗೆ ಬಂದಾಗ ನೀವು ಹೇಳಿದ ಹಾಗೆ ಮಾಡ್ತೀನಿ

ಚಂದ್ರಶೇಖರ—ಬೊಂಬಾಯಿಯಿಂದ ಯಾವಾಗ ಬಂದ್ರಿ, ಸಾರ್?

ಮೇನೇಜರ್—ನೆನ್ನೆ ಬೊಂಬಾಯಿಯಿಂದ ಬಂದೆ.

ಚಂ—ಬೊಂಬಾಯಿಯಿಂದ ಬರುವಾಗ ಬೆಂಗಳೂರಿನ ಮೇಲಿಂದ ಬಂದಿರೋ ಅರಸೀಕೆರೆಯ ಮೇಲಿಂದ ಬಂದಿರೊ ?

ಮೇ—ನಾನು ಬೊಂಬಾಯಿಯಿಂದ ಬರುವಾಗ ಬೆಂಗಳೂರಿನ ಮೇಲೆ ಬಂದೆ. ನಿಮ್ಮ ಕೆಲಸದ ಬಗ್ಗೆ ಬೆಂಗಳೂರು ಪ್ರಾದೇಶಿಕ ಕಛೇರಿಗೆ ಹೋದಾಗ ವಿಚಾರಿಸಿದೆ.

ಚಂ—ನೀವು ವಿಚಾರಿಸಿದಾಗ ಅವರು ಏನು ಹೇಳಿದರು ಸಾರ್ ?

ಮೇ—ನೀವು ಪ್ರಾಜೆಕ್ಟ್ ರಿಪೋರ್ಟ್ ಕಳುಹಿಸಿದಾಗ ಎಸ್ಟಿಮೇಶನ್ ರಿಪೋರ್ಟ್‌ಅನ್ನು ಹಾಕಿದ್ದೀರಿ ಅಲ್ಲವಾ. ನಮ್ಮ ಕೇಂದ್ರ ಕಛೇರಿಯವರು ತಮ್ಮ ಎಸ್ಟಿಮೇಶನ್ ಅನ್ನು ನಿಮ್ಮ ಎಸ್ಟಿಮೇಶನ್ ಅನ್ನು ತಾಳೆ ಹಾಕಿದಾಗ ತುಂಬಾ ಹೆಚ್ಚೂ ಕಡಿಮೆ ಬಂದಿದೆ.

ಚಂ—ಯಾರು ತಾಳೆ ಹಾಕಿದಾಗಲೂ ಹಾಗೆಲ್ಲ ಆಗುವ ಹಾಗಿಲ್ಲವಲ್ಲ.

ಮೇ—ಹಾಗೆಲ್ಲ ಆಗುವ ಹಾಗಿಲ್ಲ. ಆದರೆ ಈಗ ಹಾಗೆ ಆಗಿದೆ. ನಾನೇನು ಮಾಡಲಿ?

ಚಂ—ನೀವು ಅವರನ್ನು ಭೇಟಿಯಾದಾಗ ಒಂದು ಮಾತು ಹೇಳಬಹುದಾಗಿತ್ತು, ಸಾರ್.

ಮೇ—ನಾನು ಅವರನ್ನು ಭೇಟಿ ಮಾಡಿದಾಗ ಅವರ ಜೊತೆ ತುಂಬಾ ಜನ ಇದ್ದರು. ಜೊತೆಗೆ ನಾನು ತುಂಬಾ ಒತ್ತಾಯ ಮಾಡಿದಾಗ ಅವರು ತಪ್ಪು ತಿಳಿಯಬಹುದು.

ಚಂ—ಅವರು ನಿಮ್ಮ ಸ್ನೇಹಿತರು, ಅಲ್ಲವಾ ಸಾರ್. ನೀವು ಒತ್ತಾಯ ಮಾಡಿದರೂ ಅವರು ತಪ್ಪು ತಿಳಿದುಕೊಳ್ಳಲ್ಲ.

ಮೇ—ಈ ಸಾರಿ ನಾನು ಹೋದಾಗ ನನ್ನ ಸ್ನೇಹಿತರು ಸಿಕ್ಕಲಿಲ್ಲ. ನನ್ನ ಸ್ನೇಹಿತರಿಗೆ ವರ್ಗ ಆಗಿತ್ತು. ಅವರ ಜಾಗದಲ್ಲಿ ಬೇರೆಯವರು ಬಂದಿರುವಾಗ ನಾನು ಏನೂ ಮಾಡಕ್ಕೆ ಆಗಲ್ಲ.

PART 2

WHEN IT COMES FOR REASSESMENT I WILL DO AS YOU HAVE ADVISED

Chandrashekhar—When did you come from Bombay, Sir?
Manager—I came from Bombay yesterday.

G—When you came from Bombay did you came via Bangalore or via Arasikere?

M—When I came from Bombay I came via Bangalore. When I had been to Bangalore I enquired about your work in the regional office.

C—When you enquired, what did they say, Sir?

M—When sending the project report you have enclosed the estimation report. Haven't you? When the central office people have compared your estimate with their estimate, there is too much of difference.

C—Whoever tallies, such a thing is not possible.

M—Such a thing is not possible. But now it has happened. What shall I do?

C—You could have put in a word, when you met them, Sir,

M—When I met them many people were with him. Besides, if I compel him too much they may mistake me.

C—He is your friend is't he sir? Even when you compel him, he will not mistake you.

M—When I went this time, I couldn't meet my friend. My friend had been transferred, when some one else has came in his place, I can't do any thing.

ಚಂ—ಈಗ ನಾನೇನು ಮಾಡ್ಲಿ ಸಾರ್? ಬೆಂಗಳೂರಿಗೆ ನಾನು ಮುಂದಿನ ವಾರ ಹೋಗ್ತಾಇದೀನಿ. ಅವರ ವಿಳಾಸ ಕೊಡಿ. ನಾನು ಹೋದಾಗ ಅವರನ್ನು ಭೇಟಿಯಾಗಿ ಬರ್ತೀನಿ.

ಮೋ—ನೀವು ಹೋದಾಗ ಅವಳನ್ನು ಭೇಟಿ ಮಾಡಬೇಡಿ. ಅದರಿಂದ ಉಪಯೋಗವೇನೂ ಇಲ್ಲ. ನಾಳೆ ನಾಡಿದ್ದರಲ್ಲಿ ನಿಮ್ಮ ಎಸ್ಟಿಮೇಟು ಮರುಪರಿಶೀಲನೆಗೆ ಬರುತ್ತೆ.

ಚಂ—ನನ್ನ ಎಸ್ಟಿಮೇಟು ಮರುಪರಿಶೀಲನೆಗೆ ಬಂದಾಗ ನಾನೇನು ಮಾಡಲಿ ಸಾರ್?

ಮೋ—ನಿಮ್ಮ ಎಸ್ಟಿಮೇಟು ಮರು ಪರಿಶೀಲನೆಗೆ ಬಂದಾಗ ಯಾರಾದರೂ ಚೆನ್ನಾಗಿ ತಿಳಿದವರ ಹತ್ತಿರ ಮರು ಪರಿಶೀಲನೆ ಮಾಡಿಸಿ. ಆದಾದ ಮೇಲೆ ಆದನ್ನೂ ತೆಗೆದುಕೊಂಡು ನನ್ನ ಹತ್ತಿರ ಬನ್ನಿ. ಬೆಂಗಳೂರಿಗೆ ಹೋದಾಗ ನಮ್ಮ ಕಛೇರಿಗೆ ಹೋಗಿ ವೈಯಕ್ತಿಕವಾಗಿ ನಿಮ್ಮ ಪ್ರಾಜೆಕ್ಟ್ ಬಗ್ಗೆ ಚರ್ಚಿಸಿ.

ಚಂ—ಆಗಲಿ ಸಾರ್. ಪ್ರಾಜೆಕ್ಟ್ ಮರು ಪರಿಶೀಲನೆಗೆ ಬಂದಾಗ ನೀವು ಹೇಳಿದಹಾಗೆ ಮಾಡ್ತೀನಿ.

C—What shall I do, now. Sir ? I am going to Bangalore, next week. Give me his address. I'll meet him, when I go there.

M—Don't meet him when you go there. It's of no use tomorrow or the day after tommorrow your estimate will come for reassesment.

C—What shall I do when my estimate comes for reassessment ?

M—When your estimate comes for reassessment get it reassessed by someone who knows it well. Afterwords you bring it to me, when you go to Bangalore go to our office and discuss your project personally.

C—All right, Sir. When the project comes for reexamination I will do as you advised,

DRILLS

REPETITION DRILLS

ಅಧ್ಯಾಪಕ — ಕೌಂಟರಿನಲ್ಲಿ ವ್ಯವಹಾರ ಮಾಡ್ತಾಇರುವಾಗ ಎಚ್ಚರದಿಂದ ಇರಿ. ಕಲಿಯುವವ— ....

ಅ— ಎಲ್ಲರೂ ನಿಂತಿರುವಾಗ ನೀವು ಯಾಕೆ ಕ್ಯೂನಲ್ಲಿ ನಿಲ್ಲಬಾರದು ? ಕ— ....

ಅ— ನಿನ್ನೆ ನಾನು ಬ್ಯಾಂಕಿಗೆ ಬಂದಾಗ ಬ್ಯಾಂಕು ಮುಚ್ಚುವ ಸಮಯ ಆಗಿತ್ತು. ಕ— ....

ಅ— ನಿನ್ನೆ ನೀವು ಹಣ ತೆಗೊಂಡಾಗ ಕ್ಯಾಷ್‌ನಲ್ಲಿ ಯಾರಿದ್ರು ಕ— ....

ಅ— ನಾನು ಇಲ್ಲಿ ಹಣ ಕೊಟ್ಟಾಗ ನೀವು ಎಣಿಸಿ ಕೊಂಡಿರಾ ? ಕ— ....

ಅ— ನೀವು ಕೌಂಟರಿನಲ್ಲಿ ಇರುವಾಗ ಹಣ ಎಣಿಸಿ ಕೊಳ್ಳ ಇದ್ದರೆ ಅದು ಯಾರ ತಪ್ಪು? ಕ— ....

ಅ— ನೀವು ಕೊಡುವಾಗ ಕಟ್ಟುಕೊಡದೆ ಬಿಡಿಬಿಡಿ ಕೊಟ್ಟಿದ್ರೆ ಅದನ್ನೆಲ್ಲ ಇಲ್ಲೇ ಇರೋವಾಗ ಎಣಿಸಿಕೊಳ್ತಿದ್ದೆ ಕ— ....

ಅ— ನೀವು ಹಣ ಹಾಕಿ ಕಟ್ಟುವಾಗ ಕಡಿಮೆ ಹಾಕಿ ಕಟ್ಟಿದರೆ ಅದು ಯಾರ ತಪ್ಪು. ಕ— ....

ಅ— ನೀವು ಅತ್ತ ಇತ್ತ ನೋಡುವಾಗ ಯಾರಾದರೂ ಕಟ್ಟಿಗೆ ಎರಡರ ಹಾಗೆ ಎಳೆದುಕೊಂಡಿರ ಬೇಕು. ಕ— ....

ಅಧ್ಯಾಪಕ—ಬರೆಯುವಾಗ ನೀವು ಮೋಸ ಮಾಡ್ತೀರಿ ಅಂತ ಬರೀತೀನೆ.	ಕಲಿಯುವವ—	....
ಅ—ಮರು ಪರಿಶೀಲನೆಗೆ ಬಂದಾಗ ನೀವು ಹೇಳಿದ ಹಾಗೆ ಮಾಡ್ತೀನಿ	ಕ—	....
ಅ—ಬೊಂಬಾಯಿಯಿಂದ ಬರುವಾಗ ಬೆಂಗಳೂರಿನ ಮೇಲೆ ಬಂದಿರೋ ಅರಸೀಕೆರೆಯ ಮೇಲೆ ಬಂದಿರೋ ?	ಕ—	....
ಅ—ನೀವು ವಿಚಾರಿಸಿದಾಗ ಅವರು ಏನು ಹೇಳಿದರು	ಕ—	....
ಅ—ತಮ್ಮ ಎಸ್ಟಿಮೇಶನ್ ಅನ್ನೂ ನಿಮ್ಮ ಎಸ್ಟಿಮೇಶನ್ ಅನ್ನೂ ತಾಳೆ ಹಾಕಿದಾಗ ತುಂಬಾ ಹೆಚ್ಚು ಕಡಿಮೆ ಬಂದಿದೆ.	ಕ—	....
ಅ—ಯಾರು ತಾಳೆ ಹಾಕಿದಾಗಲೂ ಹಾಗೆಲ್ಲ ಆಗುವ ಹಾಗಿಲ್ಲ.	ಕ—	....
ಅ—ನೀವು ಅವರನ್ನು ಭೇಟಿ ಆದಾಗ ಒಂದು ಮಾತು ಹೇಳಬಹುದಾಗಿತ್ತು.	ಕ—	....
ಅ—ನಾನು ತುಂಬಾ ಒತ್ತಾಯ ಮಾಡಿದಾಗ ಅವರು ತಪ್ಪು ತಿಳಿಯಬಹುದು.	ಕ—	....
ಅ—ಅವರ ಜಾಗದಲ್ಲಿ ಬೇಲೆಯುವರು ಬಂದಿರುವಾಗ ನಾನು ಏನೂ ಮಾಡಕ್ಕೆ ಆಗಲ್ಲ.	ಕ—	....
ಅ—ನಾನು ಬೆಂಗಳೂರಿಗೆ ಹೋದಾಗ ಅವರನ್ನೂ ಭೇಟಿ ಮಾಡಿ ಬರ್ತೀನಿ.	ಕ—	....
ಅ—ನಿಮ್ಮ ಎಸ್ಟಿಮೇಟು ಮರುಪರಿಶೀಲನೆಗೆ ಬಂದಾಗ ಯಾರಾದರೂ ತಿಳಿದವರ ಹತ್ತಿರ ಚೆನ್ನಾಗಿ ಮರು ಪರಿಶೀಲನೆ ಮಾಡಿಸಿ.	ಕ—	....

★

SUBSTITUTION DRILL

1 ಅಧ್ಯಾಪಕ—ಎಲ್ಲರೂ ಕ್ಯೂನಲ್ಲಿ ನಿಂತಿರುವಾಗ ನೀವು ಯಾಕೆ ಕ್ಯೂನಲ್ಲಿ ನಿಲ್ಲದೆ ಮಧ್ಯೆ ಮಧ್ಯೆ ತೊಂದರೆ ಕೊಡ್ತೀರಿ. ಕಲಿಯುವವ— ....

ಅ—ಅವರು ಕ— ....

ಅ—ಸಾಲು ಕ— ....

ಅ—ಕುಳಿತು ಕ— ....

ಅ—ನೀನು ಕ— ....

ಅ—ಸಾಲು ಕ— ....

ಅ—ಕುಳಿತು ಕ— ....

ಅ—ಆಗಾಗ ಕ— ....

ಅ—ಕಷ್ಟ ಕ— ....

2 ಅ—ನಿನ್ನೆ ನಾನು ಬ್ಯಾಂಕಿಗೆ ಬಂದಾಗ ಬ್ಯಾಂಕು ಮುಚ್ಚುವ ಸಮಯ ಆಗಿತ್ತು. ಕ— ....

ಅ—ಮೊನ್ನೆ ಕ— ....

ಅ—ಅವನು ಕ— ....

ಅ—ಆಫೀಸು ಕ— ....

ಅ—ಹೋಗು ಕ— ....

ಅಧ್ಯಾಪಕ—ಆಫೀಸು ಕಲಿಯುವವ— ....

ಅ—ತೆಗೆ ಕ— ....

ಅ—ಕಾಲ ಕ— ....

3 ಅ—ನೀವು ಕೌಂಟರ್‌ನಲ್ಲಿ ಇರುವಾಗ ಹಣ ಎಣಿಸಿ ಕೊಳ್ಳದೇಇದ್ದರೆ ಅದು ಯಾರ ತಪ್ಪು. ಕ— ....

ಅ—ಅವರು ಕ— ....

ಅ—ಕ್ಯಾಷ್ ಕ— ....

ಅ—ಗೇಟುಗಳು ಕ— ....

ಅ—ನೋಡು ಕ— ....

ಅ—ಇದು ಕ— ....

ಅ—ನನ್ನ ಕ— ....

ಅ—ತಪ್ಪು ಕ— ....

4 ಅ—ನೀವು ಕೊಡುವಾಗ ಕಟ್ಟು ಕೊಡದೆ ಬಿಡಿ ಬಿಡಿ ಕೊಟ್ಟಿದ್ದರೆ ಅದನ್ನೆಲ್ಲ ಇಲ್ಲೇ ಇರುವಾಗ ಎಣಿಸಿಕೊಳ್ತಿದ್ದೆ ಕ— ....

ಅ—ಅವನು ಕ— ....

ಅ—ತೆಗೆದುಕೊಳ್ಳು ಕ— ....

ಅ—ನೋಟು ಕ— ....

ಅ—ಚಿಲ್ಲರೆ ಕ— ....

ಅ—ತೆಗೆದುಕೊಳ್ಳು ಕ— ....

ಅಧ್ಯಾಪಕ—ಇದು ಕಲಿಯುವವ — ....

ಅ—ಇಲ್ಲೀ ಕ— ....

ಅ—ನೋಡಿಕೊಳ್ಳು ಕ— ....

5 ಅ—ನೀವು ಒಂದು ಸಾರಿ ಕೌಂಟರ್‌ನಿಂದ ಹೊರಗ ಹೋದಾಗ ಆಗುವ ವ್ಯತ್ಯಾಸಕ್ಕೆ ನಾನಾಗಲಿ ಬ್ಯಾಂಕಾಗಲಿ ಜವಾಬ್ದಾರಿಯಲ್ಲ. ಕ— ....

ಅ—ಎಲ್ಲಗೂ ಕ— ....

ಅ—ಈಗ ಕ— ....

ಅ—ಆಫೀಸು ಕ— ....

ಅ—ಒಳಗೆ ಕ— ....

ಅ—ಬರು ಕ— ....

ಅ—ಪುಸ್ತಕ ಕ— ....

ಅ—ಅವರು ಕ— ....

ಅ—ಆಫೀಸು ಕ— ....

ಅ—ಯಾರಾದರೂ ಕ— ....

6 ಅ—ನೀವು. ಅಲ್ಲಿ ನೋಡುವಾಗ ಯಾರಾದರೂ ಒಟ್ಟಿಗೆ ಎರಡರ ಹಾಗೆ ಎಳೆದುಕೊಂಡಿರಬೇಕು. ಕ— ....

ಅ—ತಿನ್ನು ಕ— ....

ಅ—ಕುಡಿ ಕ— ....

ಅ—ಮಾತಾಡು ಕ— ....

ಅಧ್ಯಾಪಕ—ಓದು	ಕಲಿಯುವವ— ....
ಅ—ಬರಿ	ಕ— ....
ಅ—ಹೇಳು	ಕ— ....
ಅ—ಕೇಳು	ಕ— ....
ಅ—ಓಡಾಡು	ಕ— ....
ಅ—ನಡಿ	ಕ— ....
ಅ—ವಿಚಾರಿಸು	ಕ— ....
ಅ—ಎಣಿಸು	ಕ— ....
ಅ—ಇಳಿ	ಕ— ....
ಅ—ಕೇಳು	ಕ— ....
ಅ—ಸೇರು	ಕ— ....
ಅ—ತೆಗೆದುಕೊಳ್ಳು	ಕ— ....
7 ಅ—ನಾನು ಅವರನ್ನು ಮಾತಾಡಿಸಿದಾಗ ತುಂಬಾ ಜನರು ಇದ್ದರು.	ಕ— ....
ಅ—ವಿಚಾರಿಸು	ಕ— ....
ಅ—ಕೇಳು	ಕ— ....
ಅ—ಸೇರು	ಕ— ....
ಅ—ನೋಡು	ಕ— ....
ಅ—ಕಾಯು	ಕ— ....

ಅಧ್ಯಾಪಕ—ಹಿಡಿ ಕಲಿಯುವವ— ....

ಅ—ಅನುಸರಿಸು ಕ— ....

ಅ—ಬೈಯ್ಯು ಕ— ....

ಅ—ಹೊಗಳು ಕ— ....

BUILDUP DRILL

1 ಅ—ಬೊಂಬಾಯಿಯಿಂದ ಬರುವಾಗ ಬೆಂಗಳೂರಿನ ಮೇಲಿಂದ ಬಂದಿರೋ ಅರಸೀಕೆರೆಯ ಮೇಲಿಂದ ಬಂದಿರೋ ಕ— ....

ಅ—ಬಂದಿರೋ ಕ— ....

ಅ—ಅರಸೀಕೆರೆಯ ಮೇಲಿಂದ ಕ— ....

ಅ—ಬಂದಿರೊ ಕ— ....

ಅ—ಬೆಂಗಳೂರಿನ ಮೇಲಿಂದ ಕ— ....

ಅ—ಬರುವಾಗ ಕ— ....

ಅ—ಬೊಂಬಾಯಿಯಿಂದ ಕ— ....

2 ಅ—ನಾನು ಅವರನ್ನು ಭೇಟಿ ಮಾಡಿದಾಗ ಅವರ ಜೊತೆ ತುಂಬಾ ಜನರು ಇದ್ದರು. ಕ— ....

ಅ—ಇದ್ದರು ಕ— ....

ಅ—ಜನರು ಕ— ....

ಅ—ತುಂಬಾ ಕ— ....

ಅಧ್ಯಾಪಕ—ಜೊತೆ	ಕಲಿಯುವವ— ....
ಅ—ಅವರ	ಕ— ....
ಅ—ಮಾಡಿದಾಗ	ಕ— ....
ಅ—ಭೇಟಿ	ಕ— ....
ಅ—ಅವರನ್ನ	ಕ— ....
ಅ—ನಾನು	ಕ— ....
3 ಅ—ಬೆಂಗಳೂರಿಗೆ ಹೋದಾಗ ನಮ್ಮ ಕಛೇರಿಗೆ ಹೋಗಿ ವೈಯಕ್ತಿಕವಾಗಿ ನಿಮ್ಮ ಪ್ರಾಜೆಕ್ಟ್ ಬಗ್ಗೆ ಚರ್ಚಿಸಿ.	ಕ ....
ಅ—ಚರ್ಚಿಸಿ	ಕ— ....
ಅ—ಪ್ರಾಜೆಕ್ಟ್ ಬಗ್ಗೆ	ಕ— ....
ಅ—ನಿಮ್ಮ	ಕ— ....
ಅ—ವೈಯಕ್ತಿಕವಾಗಿ	ಕ— ....
ಅ—ಕಛೇರಿಗೆ ಹೋಗಿ	ಕ— ....
ಅ—ನಮ್ಮ	ಕ— ....
ಅ—ಹೋದಾಗ	ಕ— ....
ಅ—ಬೆಂಗಳೂರಿಗೆ	ಕ— ....
4 ಅ—ನೀವು ಕೌಂಟರಿನಲ್ಲಿ ಇದ್ದಾಗ ನಿಮ್ಮ ಅಕ್ಕ ಪಕ್ಕ ಬೇರೆ ಯಾರಾದರೂ ಜನರು ಇದ್ದರಾ ?	ಕ— ....
ಅ—ಇದ್ದರಾ ?	ಕ— ....

ಅಧ್ಯಾಪಕ—ಜನರು	ಕಲಿಯುವವ—	....
ಅ—ಬೇರೆ ಯಾರಾದರೂ	ಕ—	....
ಅ—ಅಕ್ಕ ಪಕ್ಕ	ಕ—	....
ಅ—ನಿಮ್ಮ	ಕ—	....
ಅ—ಕೌಂಟರಿನಲ್ಲಿ ಇದ್ದಾಗ	ಕ—	....
ಅ—ನೀವು	ಕ—	....
5 ಅ—ನೀವು ಕಟ್ಟು ಕಟ್ಟುವಾಗ ಕಡಿಮೆ ಹಾಕಿ ಕಟ್ಟಿದರೆ ಅದು ಯಾರ ತಪ್ಪು.	ಕ—	....
ಅ—ತಪ್ಪು	ಕ—	....
ಅ—ಯಾರ	ಕ—	....
ಅ—ಅದು	ಕ—	....
ಅ—ಕಟ್ಟಿದರೆ	ಕ—	....
ಅ—ಕಡಿಮೆ ಹಾಕಿ	ಕ—	....
ಅ—ಕಟ್ಟುವಾಗ	ಕ—	....
ಅ—ಕಟ್ಟು	ಕ—	....
ಅ—ನೀವು	ಕ—	....

EXERCISES

I Write five sentences on the model of each of the sentence given below.

1 ನೀವು ಒಂದು ಸಾರಿ ಕೌಂಟರಿನಿಂದ ಹೊರಗೆ ಹೋದಾಗ ಹಣದಲ್ಲಿ ಆಗುವ ವ್ಯತ್ಯಾಸಕ್ಕೆ ನಾನಾಗಲಿ ಬ್ಯಾಂಕಾಗಲಿ ಜವಾಬ್ದಾರಿಯಲ್ಲ.

2 ನೀವು ಅತ್ತ ಇತ್ತ ನೋಡುವಾಗ ಕಟ್ಟಿಗೆ ಎರಡರ ಹಾಗೆ ಯಾರಾದರೂ ಎಳೆದುಕೊಂಡಿರಬೇಕು.

3 ಬೊಂಬಾಯಿಯಿಂದ ಬರುವಾಗ ಬೆಂಗಳೂರಿನ ಮೇಲಿಂದ ಬಂದಿರೋ ಅರಸೀಕೆರೆಯ ಮೇಲಿಂದ ಬಂದಿರೋ ?

4 ನಿಮ್ಮ ಎಸ್ಟಿಮೇಟು ಮರುಪರಿಶೀಲನೆಗೆ ಬಂದಾಗ ಯಾರಾದರೂ ಚೆನ್ನಾಗಿ ತಿಳಿದವರ ಹತ್ತಿರ ಮರು ಪರಿಶೀಲನೆ ಮಾಡಿಸಿ,

II Use the following in your own sentences.

1 ಕ್ಯೂ

2 ಮಧ್ಯೆ ಮಧ್ಯೆ

3 ಬಾಕಿ

4 ಹರಿಕತೆ

5 ವಿಷಯ

6 ತಪ್ಪುತಿಳಿ

7 ಬಿಡಿ ಬಿಡಿ

8 ಅಕ್ಕಪಕ್ಕ

9 ಪ್ರಾದೇಶಿಕ ಕಛೇರಿ

ಪಾಠ ಇಪ್ಪತ್ತೆಂಟು

ಕಾನೂನು ಸಲಹೆ

ಅಧಿಕಾರಿ—ನಮಸ್ಕಾರ.

ಕಾನೂನು ಸಲಹೆಗಾರ—ನಮಸ್ಕಾರ.

ಅ—ನಿನ್ನೆ ಸಾಯಂಕಾಲ ನಾನು ಬಂದಿದ್ದೆ. ನೀವು ಸಿಗಲೇ ಇಲ್ಲ.

ಕಾ.ಸ.—ಎಷ್ಟು ಹೊತ್ತಿಗೆ ಬಂದಿದ್ರಿ ?

ಅ—ಸುಮಾರು ನಾಲ್ಕೂವರೆಗೆ ಬಂದಿದ್ದೆ.

ಕಾ.ಸ.—ನೀವು ನಾಲ್ಕು ಗಂಟೆಗೆ ಬಂದಿದ್ದರೆ ನಾನು ಸಿಕ್ತಾ ಇದ್ದೆ. ನೀವು ತಡವಾಗಿ ಬಂದಿದ್ರಿಂದ ನಾನು ಸಿಕ್ಕಿಲ್ಲ. ನಿನ್ನೆ ನೀವು ಬಂದಿದ್ದ ಕಾರಣ ಏನು ?

ಅ—ಒಂದು ಸಾಲ ವಾಪಸ್ ಆಗದ ವಿಷಯದಲ್ಲಿ ಕಾನೂನು ಸಲಹೆ ಬೇಕಾಗಿತ್ತು. ಆದ್ದರಿಂದ ಬಂದಿದ್ದೆ.

ಕಾ.ಸ.—ಕೇಸ್ ಹಿಸ್ಟರಿ ಪೂರ್ತಿ ಹೇಳಿ.

ಅ—ತಿಮ್ಮಯ್ಯ ಅನ್ನುವ ಒಬ್ಬ ಮನುಷ್ಯನಿಗೆ ರಾಗಿಮಿಲ್ಲನ್ನ (ಹಿಟ್ಟಿನ ಗಿರಣಿ) ಅಭಿವೃದ್ಧಿ ಮಾಡಕ್ಕೆ ಅಂತ ಒಂದು ಸಾವಿರ ರೂಪಾಯಿ ಸಾಲ ಕೊಟ್ಟಿದ್ವಿ. ಸಾಲದ ಹಣ ಪೂರ್ತಿ ವಾಪಸ್ ಬಂದಿಲ್ಲ.

ಕಾ.ಸ.—ಸಾಲದ ಕಂತುಗಳನ್ನ ಸರಿಯಾಗಿ ಕಟ್ಟಿದ್ದಾನಾ ?

ಅ—ಅವನು ಸರಿಯಾಗಿ ಸಾಲದ ಕಂತುಗಳನ್ನು ಕಟ್ಟಿದ್ದರೆ ನಮಗೆ ತೊಂದರೇನೇ ಇರ್ತಾ ಇರಲಿಲ್ಲ. ಅವನು ಸಾಲದ ಕಂತುಗಳನ್ನು ಸರಿಯಾಗಿ ಕಟ್ಟದೆ ಇರೋದ್ರಿಂದ ನಮಗೆ ತೊಂದರೆಯಾಗಿದೆ.

ಕಾ.ಸ.—ನೀವು ಸಾಲಗಾರನಿಗೆ ಆಗಾಗ ತಗಾದೆ ನೋಟೀಸು ಕೊಟ್ಟಿದ್ದೀರಾ ?

LESSON 28

LEGAL ADVICE

Officer—Namaskaara.
Legal Adviser—Namaskaara.

O—I had come last evening. I could not meet you.
L.A.—At what time did you come ?

O—I had come at about 4–30.
L.A.—If you had come at 4 I would have met you. Since you came late, you couldn't meet me. What was the reason for your coming yesterday ?

O—We wanted legal advice about a loan which has not been returned.
L.A.—Tell me the complete case history.

O—We had given a loan of one thousand rupees to one Mr. Thimmaiah to improve his flour mill. The loan has not been fully repaid.
L.A.—Has he Paid the loan instalments properly ?

O—If he had paid the loan instalments properly, we would not have had any difficulty. Since he has not paid the loan instalments correctly, we are in trouble.
L.A.—Have you given the barrower reminder notices often ?

ಅ—ನಾನು ಈ ಬ್ರಾಂಚಿಗೆ ಹೊಸ ಅಧಿಕಾರಿ ಸಾರ್. ಹಿಂದೆ ಇದ್ದವರು ಅಂತಹ ನೋಟೀಸು ಕೊಟ್ಟಿದ್ದಿದ್ದರೆ ಇವತ್ತು ಇಂಥಾ ತೊಂದರೆ ಇರ್ತಾಇರಲಿಲ್ಲ. ನನಗೆ ಗೊತ್ತಿರೋ ಮಟ್ಟಿಗೆ ಅಂತ ಯಾವ ನೋಟೀಸೂ ಹೋಗಿಲ್ಲ.

ಕಾ.ಸ.—ಇವನು ಕಂತು ಸರಿಯಾಗಿ ಕಟ್ಟಿಲ್ಲ ಅಂತ ಜಾಮೀನುದಾರನಿಗೆ ಗೊತ್ತಾ ?

ಅ—ಈ ಬಗ್ಗೆ ಜಾಮೀನುದಾರರಿಗೂ ಯಾವ ವಿವರವೂ ಗೊತ್ತಿಲ್ಲ.

ಕಾ.ಸ.—ಆ ಜಾಮೀನುದಾರರು ಇದೇ ಊರಲ್ಲಿ ಇದ್ದಾರಾ ?

ಅ—ಜಾಮೀನುದಾರರು ಇದೇ ಊರಲ್ಲಿ ಇರ್ತಾಇದ್ದಿದ್ರೆ ಅವರನ್ನ ನಾನೇ ಹೋಗಿ ವಿಚಾರಿಸ್ತಾಇದ್ದೆ. ಅವರು ಸರಕಾರಿ ಅಧಿಕಾರಿ ಆದ್ದರಿಂದ ಬೇರೆ ಊರಿಗೆ ವರ್ಗ ಆಗಿ ಹೋಗಿದ್ದಾರೆ.

ಕಾ.ಸ.—ಜಾಮೀನುದಾರರ ಈಗಿನ ವಿಳಾಸನಾದರೂ ತಿಳಿದುಕೊಂಡಿದ್ದೀರಾ ?

ಅ—ಜಾಮೀನುದಾರರ ಕಛೇರಿ ಕಡೆ ಹೋಗಿದ್ದಿದ್ರೆ ತಿಳಿದುಕೊಳ್ತಾಇದ್ದೆ. ನಾಳೆ ನಾಡಿದ್ದರಲ್ಲಿ ತಿಳಿದು ಕೊಳ್ತೇನೆ.

ಕಾ.ಸ.—ಈ ಕೇಸಲ್ಲಿ ಅವನ ಕಡೆಯಿಂದಾನೂ ಕೆಲವು ತಪ್ಪಿದೆ. ನಿಮ್ಮ ಕಡೆಯಿಂದಾನೂ ಕೆಲವು ತಪ್ಪಿದೆ.

ಅ—ಈ ವಿಷಯದಲ್ಲಿ ನಾವು ಈಗ ಹೇಗೆ ಮುಂದುವರಿಯಬೇಕು ಅಂತ ಹೇಳ್ತಾಇದೀರಿ ಸರ್ ?

ಕಾ.ಸ.—ಸಾಲಗಾರನಿಗೂ ಜಾಮೀನುದಾರನಿಗೂ ಬಾಕಿ ವಿವರ ತಿಳಿಸಿ, ಕಾಗದ ಬರೆಯಿರಿ. ಒಂದು ತಿಂಗಳ ಒಳಗೆ ಪೂರ್ತಿ ಹಣ ಕೊಡದೇಇದ್ದರೆ ಇಬ್ಬರಿಗೂ ತೊಂದರೆ ಆಗತ್ತೆ ಅಂತ ಹೇಳಿ. ಲಾಯರ್ ಖರ್ಚು ಅವರು ಕೊಡಬೇಕಾಗತ್ತೆ ಅಂತ ಹೇಳಿ. ಇದಕ್ಕೆ ಅವರಿಂದ ಏನೂ ಉತ್ತರ ಬರದೇಇದ್ರೆ ಮುಂದಿನ ಕ್ರಮ ಜರುಗಿಸೋಣ. ಆ ಕೇಸಿನ ಫೈಲನ್ನ ನನ್ನ ಹತ್ತಿರಾನೇ ಬಿಟ್ಟುಹೋಗಿ.

ಅ—ಆಗಲಿ ಸಾರ್. ನಾನು ಬರ್ತೀನಿ.

ಕಾ.ಸ.—ಸ್ವಲ್ಪ ಕಾಫಿ ಕುಡಿದು ಹೋಗುವಿರಂತೆ ಸ್ವಲ್ಪ ತಡೆಯಿರಿ.

ಅ—ಕಾಫಿಗೀಫಿ ಬೇಡ ಸಾರ್. ಒಳ್ಳೆಯ ಮೂಡಲ್ಲಿ ಇದ್ದಿದ್ರೆ ನಾನೇ ಕುಡೀತಾಇದ್ದೆ.

ಕಾ.ಸ.—ಒಳ್ಳೇ ಮೂಡು ಅನ್ನೋದು ಜೀವನದಲ್ಲಿ ಯಾವತ್ತುಇರಲ್ಲ. ಅದಕ್ಕಾಗಿ ಕಾಫಿ ಕುಡಿಯೋದನ್ನ ಯಾಕೆ ಬಿಡ್ತೀರಿ.

ಅ—ಆಗಲಿ ಸಾರ್, ನೀವು ಇಷ್ಟು ಒತ್ತಾಯ ಮಾಡಿದ ಮೇಲೆ ನಾನು ಯಾಕೆ ಇಲ್ಲಾ ಅನ್ನಿ. ತರ್ಸಿ.

O—I am a new officer to this branch, Sir. If the person who was here earlier had given such a notice, today I would not have had this difficulty. To my knowledge, no such notice has been given.

L.A.—Does the guarantor know that this man has not paid the instalments correctly ?

O—Regarding this, guarantor does not know any details.

L.A.—Is that guarantor in this place itself ?

O—If the guarantor was available in this place itself I would have gone myself and enquired. Since he is a government employee, he has gone to some other place after being transferred.

L.A.—Do you know the present address of the guarantor ?

O—If I had gone towords the office of the guarantor. I had known. I will know tomorrow or the day after tomorrow.

L.A.—In this case there are some faults from his side, and some omissions from your side too.

O—How shall we proceed in this regard, Sir ?

L.A.—Write letters to the borrower and guarantor informing them about the details of loan amount. Tell them that if they fail to pay the money within a month, they will be in trouble. Tell them that they have to pay the lawyer's expences also. If you fail to get a reply from them we will take further action. Leave that case file with me.

O—All right, Sir. I will take leave of you.

L.A.—Wait for some time. You can have coffee and go

O—No, Sir. I don't want coffee. If I was in a good mood I would have taken coffee.

L.A.—You will not have a good mood any time in your life. Why do you avoid drinking coffee for that ?

O—All right. Sir. Since you are compelling me so much, why should I say no. Arrange for it.

DRILLS

REPETITION DRILL

ಅಧ್ಯಾಪಕ—ನೀವು ನಾಲ್ಕು ಗಂಟೆಗೆ ಬಂದಿದ್ದರೆ ನಾಲ್ಕು ಗಂಟೆಗೆ ನಾನು ಸಿಕ್ತಾ ಇದ್ದೆ. ಕಲಿಯುವವ— ....

ಅ—ನೀವು ತಡವಾಗಿ ಬಂದಿದ್ದರಿಂದ ನಾನು ಸಿಕ್ಕಿಲ್ಲ. ಕ— ....

ಅ—ಅವನು ಸರಿಯಾಗಿ ಸಾಲದ ಕಂತುಗಳನ್ನು ಕಟ್ಟಿದ್ದಿದ್ದರೆ ನಮಗೆ ತೊಂದರೇನೇ ಇರ್ತಿರಲಿಲ್ಲ. ಕ— ....

ಅ—ಅವನು ಕಟ್ಟದೇ ಇರೋದ್ರಿಂದ ತೊಂದರೆ ಆಗಿದೆ. ಕ— ....

ಅ—ಹಿಂದೆ ಇದ್ದವರು ನೋಟೀಸು ಕೊಟ್ಟಿದ್ದಿದ್ದರೆ ಇಂಥಾ ತೊಂದರೆ ಇರ್ತಾ ಇರಲಿಲ್ಲ. ಕ— ....

ಅ—ಜಾಮೀನುದಾರರು ಇದೇ ಊರಲ್ಲಿ ಇರ್ತಾ ಇದ್ದಿದ್ದರೆ ಅವರನ್ನು ನಾನೇ ಹೋಗಿ ವಿಚಾರಿಸ್ತಾ ಇದ್ದೆ. ಕ— ....

ಅ—ಜಾಮೀನುದಾರರ ಕಛೇರಿಯ ಕಡೆ ಹೋಗಿದ್ದಿದ್ರೆ ತಿಳಿದುಕೊಳ್ತಾ ಇದ್ದೆ. ಕ— ....

ಅ—ಒಂದು ತಿಂಗಳ ಒಳಗೆ ಪೂರ್ತಿ ಹಣ ಕೊಡದೆ ಇದ್ದರೆ ಇಬ್ಬರಿಗೂ ತೊಂದರೆ ಆಗತ್ತೆ. ಕ— ....

ಅ—ಒಳ್ಳೆಯ ಮೂಡಲ್ಲಿ ಇದ್ದಿದ್ರೆ ನಾನೇ ಕುಡೀತಾ ಇದ್ದೆ. ಕ— ....

ಅ—ನೀವು ಇಷ್ಟು ಒತ್ತಾಯ ಮಾಡಿದಮೇಲೆ ನಾನು ಯಾಕೆ ಇಲ್ಲ ಅನ್ನಲಿ ಕ— ....

SUBSTITUTION DRILL

1 ಅಧ್ಯಾಪಕ—ನೀವು ನಾಲ್ಕು ಗಂಟೆಗೆ ಬಂದಿದ್ದರೆ ನಾನು ಸಿಕ್ತಿದ್ದೆ. ಕಲಿಯುವವ— ....

ಅ—ನೋಡು ಕ— ....

ಅ—ಮಾಡು ಕ— ....

ಅ—ಆಡು ಕ— ....

ಅ—ಹೇಳು ಕ— ....

ಅ—ಕೇಳು ಕ— ....

ಅ—ವಿಚಾರಿಸು ಕ— ....

ಅ—ಹಾಡು ಕ— ....

ಅ—ನಗು ಕ— ....

ಅ—ನಡೆ ಕ— ....

ಅ—ಓಡು ಕ— ....

ಅ—ಬರು ಕ— ....

ಅ—ಕೊಡು ಕ— ....

ಅ—ತರು ಕ— ....

ಅ—ಬರು ಕ— ....

ಅ—ಹುಡುಕು ಕ— ....

ಅ—ತೆಗೆ ಕ— ....

ಅಧ್ಯಾಪಕ—ಆರಿಸು ಕಲಿಯುವವ— ....

ಅ—ಮರೆ ಕ— ....

ಅ—ಹೊಗಳು ಕ— ....

ಅ—ಬೈಯ್ಯಿ ಕ— ....

ಅ—ಕಳಿಸು ಕ— ....

2 ಅ—ತಿಮ್ಮಯ್ಯ ಅನ್ನುವ ಒಬ್ಬ ಮನುಷ್ಯನಿಗೆ ಹಿಟ್ಟಿನ ಗಿರಣಿ ಅಭಿವೃದ್ಧಿ ಮಾಡಕ್ಕೆ ಅಂತ ಒಂದು ಸಾವಿರ ರೂಪಾಯಿ ಸಾಲ ಕೊಟ್ಟಿದ್ವಿ. ಕ— ....

ಅ—ರಾಮಯ್ಯ ಕ— ....

ಅ—ವ್ಯಾಪಾರಿ ಕ— ....

ಅ—ಅಕ್ಕಿ ಕ— ....

ಅ—ಎರಡು ಸಾವಿರ ಕ— ....

ಅ—ಹಣ ಕ— ....

3 ಅ—ಒಂದು ತಿಂಗಳ ಒಳಗೆ ಪೂರ್ತಿ ಹಣ ಕೊಡದೆ ಇದ್ದರೆ ಇಬ್ಬರಿಗೂ ತೊಂದರೆ ಆಗತ್ತೆ ಅಂತ ಹೇಳಿ. ಕ— ....

ಅ—ಎರಡು ಕ— ....

ಅ—ವರ್ಷ ಕ— ....

ಅ—ಎಲ್ಲ ಕ— ....

ಅ—ತರು ಕ— ....

ಅಧ್ಯಾಪಕ—ನಿಮಗೂ ಅವರಿಗೂ ಕಲಿಯುವವ— ....

ಅ—ಕಷ್ಟ ಕ— ....

4 ಅ—ಒಳ್ಳೆಯ ಮೂಡಲ್ಲಿ ಇದ್ದಿದ್ರೆ, ನಾನೇ ಕಾಫಿ ಕುಡಿತಾ ಇದ್ದೆ. ಕ— ....

ಅ – ತಿಂಡಿ ತಿನ್ನು ಕ— ....

ಅ—ಹಾಡು ಹೇಳು ಕ— ....

ಅ—ಆಟ ಆಡು ಕ— ....

ಅ—ಸಿನಿಮಾ ನೋಡು ಕ— ....

ಅ— ಊಟ ಮಾಡು ಕ— ....

BUILDUP DRILL

1 ಅ—ನೀವು ನಾಲ್ಕು ಗಂಟೆಗೆ ಬಂದಿದ್ದರೆ ನಾನು ಸಿಕ್ತಾ ಇದ್ದೆ. ಕ— ....

ಅ—ಸಿಕ್ತಾ ಇದ್ದೆ ಕ— ....

ಅ—ನಾನು ಕ— ....

ಅ—ಬಂದಿದ್ದರೆ ಕ— ....

ಅ—ನಾಲ್ಕು ಗಂಟೆಗೆ ಕ— ....

ಅ—ನೀವು ಕ— ....

2 ಅ—ನೀವು ಸಾಲಗಾರನಿಗೆ ತಗಾದೆ ನೋಟೀಸು ಕೊಟ್ಟಿದ್ದೀರಾ ? ಕ— ....

ಅ—ಕೊಟ್ಟಿದ್ದೀರಾ ಕ— ....

ಅಧ್ಯಾಪಕ— ನೋಟೀಸು	ಕಲಿಯುವವ— ....
ಅ—ತಗಾದೆ	ಕ— ....
ಅ—ಸಾಲಗಾರನಿಗೆ	ಕ— ....
ಅ—ನೀವು	ಕ— ....
3 ಅ—ನಿನ್ನೆ ಬೆಳಿಗ್ಗೆ ನೀನು ಬಂದಿದ್ದರೆ ನಾನು ಸಿಕ್ತಾ ಇರಲಿಲ್ಲ	ಕ— ....
ಅ—ನಾನು	ಕ— ....
ಅ—ಬಂದಿದ್ದರೆ	ಕ— ....
ಅ—ನೀನು	ಕ— ... .
ಅ—ಬೆಳಿಗ್ಗೆ	ಕ— ....
ಅ—ನಿನ್ನೆ	ಕ— ....
4 ಅ—ಇವನು ಕಂತು ಕಟ್ಟಿಲ್ಲ ಅಂತ ಜಾಮೀನುದಾರನಿಗೆ ಗೊತ್ತಾ ?	ಕ— ....
ಅ—ಗೊತ್ತು	ಕ— ....
ಅ—ಜಾಮೀನುದಾರನಿಗೆ	ಕ— ....
ಅ—ಅಂತ	ಕ— ....
ಅ—ಕಟ್ಟಿಲ್ಲ	ಕ— ....
ಅ—ಕಂತು	ಕ— ....
ಅ—ಇವನು	ಕ— ....

5 ಅಧ್ಯಾಪಕ—ಅವರು ಇಲ್ಲೇ ಇರ್ರ್ತಾಇದ್ದಿದ್ರೆ ನಾನೇ ವಿಚಾರಿಸ್ತಾಇದ್ದೆ. ಕಲಿಯುವವ – ....

ಅ—ವಿಚಾರಿಸ್ತಾ ಇದ್ದೆ ಕ— ....

ಅ—ನಾನೇ ಕ— ....

ಅ—ಇರ್ರ್ತಾಇದ್ದಿದ್ರೆ ಕ— ....

ಅ—ಇಲ್ಲೇ ಕ— ....

ಅ—ಅವರು ಕ— ....

6 ಅ—ಒಂದು ತಿಂಗಳ ಒಳಗೆ ಪೂರ್ತಿ ಹಣ ಕೊಡದೆ ಇದ್ದರೆ ಇಬ್ಬರಿಗೂ ತೊಂದರೆ ಆಗತ್ತಾ ? ಕ— ....

ಅ—ತೊಂದರೆ ಆಗತ್ತಾ ಕ— ....

ಅ—ಇಬ್ಬರಿಗೂ ಕ— ....

ಅ—ಕೊಡದೇಇದ್ದರೆ ಕ— ....

ಅ—ಪೂರ್ತಿ ಹಣ ಕ— ....

ಅ—ತಿಂಗಳ ಒಳಗೆ ಕ— ....

ಅ—ಒಂದು ಕ— ....

7 ಅ—ಇದಕ್ಕೆ ಅವರಿಂದ ಏನೂ ಉತ್ತರ ಬರದೆ ಇದ್ದರೆ ಮುಂದಿನ ಕ್ರಮ ಜರುಗಿಸೋಣ. ಕ— ....

ಅ—ಜರುಗಿಸೋಣ ಕ— ....

ಅ—ಮುಂದಿನ ಕ್ರಮ ಕ— ....

ಅ—ಬರದೇಇದ್ದರೆ ಕ— ....

